Sri C. J. MUCKANNAPPA.—Sir, members are standing at the entrance to the House and asking members not to get into the House. Is it fair?

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ, ರಾಜ್ಯಗಳ ಪುನರ್ವಿಂಗಡಣೆಗಾಗಿ ಭಾರತದಲ್ಲಿ— 1953ನೇ ಡಿಸೆಂಬರ್ 29ನೆಯ ತಾರೀಖಿನಲ್ಲಿ ಭಾರತ ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡಿದರು. ರಾಜ್ಯಗಳ ಪುನರ್ವಿಂಗಡಣೆಯ ವರದಿಯಲ್ಲಿ ಪುಟ—286ರಲ್ಲಿ (ಬಿ) ಪರಿಶಿಷ್ಟದಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ಕಮಿಷನ್ನಿನವರು ಹೀಗೆ ಹೇಳಿದ್ದಾರೆ—ರಾಜ್ಯಗಳ ಪುನರ್ವಿಂ

ಗಡಣೆಯ ಸಂಬಂಧದಲ್ಲಿ ಗಮನದಲ್ಲಿಡಬೇಕಾದ ಕೆಲವು ಮುಖ್ಯ ಅಂಶಗಳನ್ನು ಅವರು ಹೇಳಿದ್ದಾರೆ. ಅವುಗಳು ಯಾವುವೆಂದರೆ:—"ಒಂದು ಪ್ರದೇಶದ ಭಾಷೆ ಮತ್ತು ಸಂಸ್ಕೃತಿಯು ಆ ಪ್ರದೇಶದಲ್ಲಿರತಕ್ಕ ಜನಜೀವನದ ಸ್ವರೂಪವನ್ನು ಪ್ರತಿಬಿಂಬಿಸುವುದರಿಂದ, ಅವು ಅತಿ ಮುಖ್ಯ ಅಂಶಗಳಾಗಿವೆ. ಆದರೆ ರಾಜ್ಯಗಳ ಪುನರ್ವಿಂಗಡಣೆಯ ಸಂಬಂಧದಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ ಇತರ ಮುಖ್ಯವಾದ ವಿಷಯಗಳೂ ಇವೆ. ಮೊಟ್ಟಮೊದಲನೆಯ ಅಂಶವೆಂದರೆ ಭಾರತ ದೇಶದ ಒಗ್ಗಟ್ಟನ್ನೂ ಮತ್ತು ರಕ್ಷಣೆಯನ್ನೂ ಬಲಪಡಿಸುವುದು, ಹಣಕಾಸುಗಳಿಗೆ, ಆರ್ಥಿಕಾಭಿವೃದ್ಧಿಗೆ, ಆಡಳಿತಗಳಿಗೆ ಸಂಬಂಧಪಟ್ಟ ಅಂಶಗಳೂ, ಒಂದೊಂದು ರಾಜ್ಯದ ದೃಷ್ಟಿಯಿಂದಲೇ ಅಲ್ಲದೆ, ಒಟ್ಟು ರಾಷ್ಟ್ರದ ಹಿತದೃಷ್ಟಿಯಿಂದಲೂ ಅಷ್ಟೇ ಮುಖ್ಯವಾಗಿವೆ. ಭಾರತ ದೇಶವು, ತನ್ನ ಆರ್ಥಿಕ, ಸಾಂಸ್ಕೃತಿಕ ಮತ್ತು ನೈತಿಕ ಪ್ರಗತಿಗಾಗಿ ಒಂದು ಸಕ್ರಮವಾದ ಯೋಜನೆಯನ್ನು ನಡೆಸಲು ಪ್ರಾರಂಭಿಸಿದೆ."

ಹೀಗೆಲ್ಲಾ ಇಲ್ಲಿ ಹೇಳಿದ್ದಾರೆ. ಈಗ ನಾನು ಓದಿದ್ದು ಫಣೀಕರ್ ಅವರ ವರದಿಯಿಂದ—ಇದು ರಾಜ್ಯಗಳ ಪುನರ್ವಿಂಡಣೆಯ ಪರಿಶಿಷ್ಟದ, ಪುಟ 286ರಲ್ಲಿ ಇರುತ್ತದೆ.

ಅಂದರೆ ಈ ರಾಜ್ಯಗಳ ಪುನರ್ವಿಂಗಡಣೆ ಕೇವಲ ಭಾಷೆಯೊಂದನ್ನೇ ಆಧಾರವಾಗಿಟ್ಟು ಕೊಳ್ಳದೆ ಆರ್ಥಿಕ ಪರಿಸ್ಥಿತಿಯನ್ನೂ ಕೂಡ ಆಧಾರವಾಗಿಟ್ಟು ಕೊಂಡಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ ಈಗ ನಿಜವಾಗಿಯೂ ಕೋರಂ ಇಲ್ಲ. ಬೇಕಾದರೆ ಎಣಿಸಿ ನೋಡಬಹುದು.... ....

Mr. DEPUTY SPEAKER.— Yes, there is no quorum. The House will now rise and meet at 3-30 P. M.

The House adjourned at Thirty Minutes past-Two of the Clock and re-assembled at Thirty Minutes past Three of the Clock.

———

[MR. SPEAKER in the Chair.]

Mr. SPEAKER.—Before I call upon the hon'ble member Sri A. J. Doddameti to speak I am sorry that the House had to be adjourned for want of quorum. Now I suppose there is quorum.

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ, ಆಗಲೇ ನಾನು ತಿಳಿಸಿದ್ದೇನೆ. ಏನೆಂದರೆ ಯಾವ ಪಣಿಕ್ಕರ್ ವರದಿಯ ಅಂಕಿ ಅಂಶಗಳ ಆಧಾರದ ಮೇಲೆ ಈ ಪುನರ್ವಿಂಗಡಣೆ ಆಗಲ್ಪಟ್ಟಿದೆಯೋ, ಆ ಸಮಿತಿ ಆ ಬಗ್ಗೆ ಯಾವ ಒಂದು ದೃಷ್ಟಿಕೋನವನ್ನು ತನ್ನ ಎದುರಿಗೆ ಇಟ್ಟು ಕೊಂಡಿತ್ತೋ, ಎನ್ನುವ ವಿಚಾರವನ್ನು ಓದಿ ಹೇಳಿದೆ.

———

Chair's ruling *Re*: the use of the word "wool gathering."

Mr. SPEAKER.—I was just looking out for the hon'ble member Sri Muckannappa in order to give rulings on some points which are pending with me. Tomorrow is the last day and we might be meeting in the morning. I am not going to take a long time over this.

One point is that when Sri Deo was addressing the House he made certain observations to which Sri Muckannappa took objection that personal allegations had been made against him and he said that those allegations were unfounded and that it was absolutely unkind of the other Hon'ble member to have made those allegations and that he was prepared to stand an enquiry and prove that there was no foundation

(MR. SPEAKER)

for that at all, and he never approached any officer or Minister for allotment of quota, etc. Those details I am not repeating here. He further said that the member must either substantiate or do something. I heard Sri Deo also say that the hon'ble member was not interpreting him properly and that he had not said anything of that type. That way it was going on and I ended it by saying that I would look into it. I have gone through it.

Sri C. J. MUCKANNAPPA.—I have read the last portion of Sri Deo's speech and I think that it goes to show that I did something.

Mr. SPEAKER.—Sri Muckannappa knows how Sri Deo speaks and he says that the text of his speech has not been properly interpreted by him.

Sri C. J. MUCKANNAPPA.—I only just brought it to your notice.

Mr. SPEAKER.—Personally I feel there is nothing in it, but if he feels otherwise, I shall take it up.

Sri V. M. DEO.—We shall not allow Sri Muckannappa to resign on socialistic principles. Business is done here on collective wisdom and we shall not permit the elimination or liquidation of Sri Muckannappa. It is a very serious thing. I am saying this with reference to the offer of resignation by Sri Muckannappa.

Another thing that I want to add is that he might explain his action but not by any condition precedent. These are the two things I wanted to say.

Mr. SPEAKER.—I do not understand what he says. My difficulty is that his explanation complicates things further and that they are not easily understood.

Sri V. M. DEO.—I will make myself understood.

Mr. SPEAKER.—I do not want him to do so because he will say something more which will make me more confused. I may tell Sri Muckannappa and the House that there is not much in what the hon'ble Member Sri Deo has said, but if what the hon'ble member has said has wounded the feellings of the hon'ble member Sri Muckannappa, I really think that he should not feel so. We have to live as members of one family and as brothers.

Sri B. RACHIAH.—They must shake hands.

Mr. SPEAKER.—I should think so. I suppose the hon'ble member Sri Deo never meant anything.

Sri V. M. DEO.—No.

Sri C. J. MUCKANNAPPA.—What I felt I have said and I leave it at that. I do not carry any prejudice or any vengeance against anybody.

Mr. SPEAKER.—So I leave the matter at that and I suppose the House agrees with me because the matter was raised in the House. I am very happy and I thank both the hon'ble members for the same.

Then I attempted to get in touch with another Hon'ble member Sri Angadi Channabasappa who used the word "wool-gathering." I sent the English-Kannada dictionary to Sri Muckannappa and he has read the meaning of it. Unless there is any colloquial meaning in any locality I do not think there can be any objection to the use of that word. In the light of the dictionary meaning and in the light of the fact that there is no support for his interpretation, the best thing is to leave it at that. I cannot hold that the word "wool-gathering" is unparliamentary. Then there is the third matter and that matter relates to the leakage of Question Papers. Sri G. V. Gowda and Sri Muckannappa gave me those papers and I passed them on. That also can be treated as closed.

Sri C. J. MUCKANNAPPA.—Examination is over.

Mr. SPEAKER.—Then there is one more thing with which I am dealing tomorrow. Now Sri Dodmeti can go on.

ಶ್ರೀ ಎ. ಜೆ. ದೊಡ್ಡಮೇಟಿ.—ಸ್ವಾಮಿ ಕಮಿಷನ್ನಿನವರು ಯಾವ ಉದ್ದೇಶವನ್ನು ಇಟ್ಟು ಕೊಂಡು ರಾಜ್ಯಪುನರ್‌ವಿಂಗಡಣೆ ಮಾಡಿದರು ಎಂದರೆ, ಭಾಷೆಯೇ ಮುಖ್ಯ ಆಧಾರವಾಗಿದ್ದರೂ ಅದು ಒಂದೇ ಅಲ್ಲ. ಆಡಳಿತಾತ್ಮಕ ಮತ್ತು ಆರ್ಥಿಕ ಸಂಬಂಧವನ್ನೂ ಪರಿಶೀಲಿಸಬೇಕು ಎನ್ನುವು ದನ್ನು ಒತ್ತಿ ಹೇಳಿದ್ದಾರೆ. ಅದೇ ರೀತಿ ಕಮಿಷನ್ನಿನವರು ನೆರವೇರಿಸಿ ಕೆಳಗೆ ಕಂಡಂತೆ ತಿಳಿಯ ಪಡಿಸಲಾಗಿದೆ. ಆ ಕಮಿಷನ್ನಿನವರು ಈ ಸಮಸ್ಯೆಗೆ ಸಂಬಂಧಪಟ್ಟಂತೆ ಅದರ ಸ್ಥಿತಿಗತಿಗಳನ್ನೂ ಚಾರಿತ್ರಿಕ ಹಿನ್ನಲೆಯನ್ನೂ ಆಗಿನ ಪರಿಸ್ಥಿತಿಯನ್ನೂ ಮುಖ್ಯವಾಗಿ ಈ ಸಮಸ್ಯೆಗೆ ಅನ್ವಯವಾಗು ವಂಥಾ ಎಲ್ಲಾ ಸಮಸ್ಯೆಗಳನ್ನೂ ಪರಿಶೀಲಿಸಬೇಕು. ರಾಜ್ಯಗಳ ಪುನರ್‌ವ್ಯವಸ್ಥೆಗೆ ಸಂಬಂಧಪಟ್ಟ ಯಾವ ಸಲಹೆಯನ್ನೇ ಆಗಲೀ ಗಮನಿಸುವುದಕ್ಕೆ ಕಮಿಷನ್ನಿನವರಿಗೆ ಪೂರ್ಣ ಅವಕಾಶವಿರುತ್ತದೆ. ಇದನ್ನೆಲ್ಲಾ ವಿಚಾರ ಮಾಡಿ ನೋಡಿದರೆ ಕೇವಲ ಭಾಷೆ ಒಂದೇ ಮಾತನ್ನು ನಾವು ಲಕ್ಷ್ಯದಲ್ಲಿಟ್ಟು ಕೊಂಡರೆ ಅದು ಬಹಳ ಕಷ್ಟವಾಗುತ್ತದೆ ಎನ್ನುವುದು ಭಾರತ ಸರ್ಕಾರಕ್ಕೂ ಗೊತ್ತಿದೆ. ಭಾಷೆ ಯೊಂದನ್ನೇ ಮುಖ್ಯ ಆಧಾರವಾಗಿ ಇಟ್ಟುಕೊಂಡರೂ ಕೂಡ ಆಡಳಿತಾತ್ಮಕ ಮತ್ತು ಆರ್ಥಿಕ ಸಮಸ್ಯೆಯನ್ನೂ ಗಮನದಲ್ಲಿಟ್ಟುಕೊಂಡು ರಾಜ್ಯವನ್ನು ವಿಂಗಡಿಸಲ್ಪಟ್ಟಿದೆ ಎನ್ನುವುದನ್ನು ನಾವು ಸದಾಲಕ್ಷ್ಯದಲ್ಲಿ ಇಡಬೇಕು. ನಮ್ಮ ಸ್ನೇಹಿತರು ಈಗ ಏನೊಂದು ನಿರ್ಣಯವನ್ನು ತಂದಿದ್ದಾ ರೆಯೋ ಅದರಲ್ಲಿ ಹಳ್ಳಿಮಟ್ಟದಲ್ಲಿ ಒಂದು ಯೂನಿಟ್ ಹಿಡಿದು ನಿರ್ಣಯ ಮಾಡಬೇಕು ಎನ್ನುವ ಪ್ರಶ್ನೆ ಇದೆ. ಆದರೆ ಇದೇ ಮಾತನ್ನು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ ಶ್ರೀ ಚವಾನ್ ರವರು ಗುಜರಾತ್ ಮತ್ತು ಮಹಾರಾಷ್ಟ್ರ ಒಡೆಯುವ ಕಾಲಕ್ಕೆ ಇಂಥಾ ಅಮೆಂಡ್‌ಮೆಂಟಿನ ಪಾಯಿಂಟ್ಸ್‌ಗಳು ಬಂದು ಏನು ಹೇಳಿದ್ದಾರೆಂಬುದನ್ನು ಇಲ್ಲಿ ಸ್ವಲ್ಪಮಟ್ಟಿಗೆ ಹೇಳುತ್ತೇನೆ. 18ನೇ ಮಾರ್ಚಿ 1962 ನೇ ಇಸವಿಯ ರಿಪೋರ್ಟ್ ಆಫ್ ದಿ ರೆಪ್ರಿಜೆಂಟಿಟೀವ್ಸ್ ಆಫ್ ಮೈಸೂರು ಆನ್ ಮಹಾ ರಾಷ್ಟ್ರ ಇದರಲ್ಲಿ ಉದಹರಿದಂತಹ ಅಧಿಕೃತ ರಿಪೋರ್ಟಿನಲ್ಲಿ ಹೇಳಿರುವುದನ್ನು ನಾನು ಹೇಳುತ್ತೇನೆ.

Mr. SPEAKER.—He should read proceedings wholesale.

ಶ್ರೀ ಎ. ಜೆ. ದೊಡ್ಡಮೇಟಿ.—Report of the Representatives of Mysore on Maharashtra and Mysore Border Dispute ನಲ್ಲಿ ಉಪಹರಿಸಲ್ಪಟ್ಟಂತ ಅಧಿಕೃತ ವರದಿ. ಮಹಾರಾಷ್ಟ್ರ ಅಸೆಂಬ್ಲಿಯ ಪ್ರೊಸೀಡಿಂಗ್ಸ್‌ನಲ್ಲಿರುವ ಮಾತನ್ನು ಎತ್ತಿ ತೆಗೆದು ಇಲ್ಲಿ ಉದಹರಿಸ ಲ್ಪಟ್ಟಂತ report of the Representatives of the Mysore Border Committe.

Sri B. R. SUNTHANKAR.—That report has not been placed on the table. It is not supplied to us. It is confidetial.

Mr. SPEAKER.—Confidential or whatever it is if a member refers to any book and that book is in his hands, I can compel him to place it on the table of the House. Placing on the table of the House is unconnected with ownership.

ಶ್ರೀ ಎ. ಜೆ. ದೊಡ್ಡಮೇಟಿ.—ತಾವು ಹೇಳಿದ್ದು ಏನು ಸ್ವಾಮಿ.

ಅಧ್ಯಕ್ಷರು.—ಯಾವುದೇ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ಓದಿ ಹೇಳುವುದಾದರೆ ಅಂಥಾ ಪುಸ್ತಕವನ್ನು ಈ ಸಭೆಯಲ್ಲಿ ಮೇಜಿನ ಮೇಲೆ ಇಡಲಿಕ್ಕೆ ಸಿದ್ಧವಿರಬೇಕು. ಇಲ್ಲದೆ ಹೋದರೆ ಅಧ್ಯಕ್ಷರು ಹೇಳಿದರೆ ಅದನ್ನು ಇಡಲೇಬೇಕಾಗುತ್ತದೆ. ಒಂದು ವೇಳೆ ಅದು ಖಾಸಗೀ ಆಗಿದ್ದರೆ ಅದನ್ನು ಓದಕೂಡದು. ತಮ್ಮ ಅಭಿಪ್ರಾಯವೆಂಬುದಾಗಿ ಹೇಳಿದಲ್ಲಿ ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಇದು ಲೆಜಿಸ್ಲೆಟೀವ್ ಅಸೆಂಬ್ಲಿ ಲೈಬ್ರರಿಯಲ್ಲಿರುವ ಪುಸ್ತಕ.

Sri B. R. SUNTHANKAR.—I do not think we are supplied with a copy of that report.

Mr. SPEAKER.—He may say whatever he likes and also say that it is his opinion.

Sri N. O. SAMAJI.—(Marathi).

ಶ್ರೀ ಎ. ಜೆ. ದೊಡ್ಡಮೇಟಿ.—ಶ್ರೀಮಾನ್ ಚವ್ಹಾನ್ ಅವರು ಏನು ಹೇಳಿದ್ದಾರೆಂದರೆ ನನಗೆ ನೆನಪು ಇದ್ದ ಮಟ್ಟಿಗೆ ಗುಜರಾತ್ ಮತ್ತು ಮಹಾರಾಷ್ಟ್ರ ಒಡೆದು ಹೋಗುವ ಕಾಲಕ್ಕೆ ಗುಜರಾತ್‌ನವರು ವಿಲೇಜ್‌ಯೂನಿಟ್ ಮೇಲೆ ಈ ಪ್ರಶ್ನೆಗಳನ್ನು ನಿವಾರಣೆ ಮಾಡಬೇಕು ಎನ್ನುವ ನಿರ್ಣಯವನ್ನು ತಂದಿದ್ದರು. ಈ ಸೂಚನೆ ಬಂದ ಕಾಲಕ್ಕೆ ಶ್ರೀಮಾನ್ ಚವಾನ್ ಅವರು ಅದನ್ನು ವಿರೋಧಿಸಿ ಇಂಥಾ ಅಮೆಂಡ್‌ಮೆಂಟನ್ನು ಒಪ್ಪುವುದಾದರೆ ಅದರಿಂದ ಎಂದೆಂದೂ ಬಿಡಿಸಲಾರದಂತಹ ತೊಡಕನ್ನು ನಿರ್ಮಾಣ ಮಾಡುತ್ತಾರೆ. ಅದರಿಂದ ಅನೇಕ ಹೊಸ ತೊಂದರೆಗಳು ಉದ್ಭವವಾಗುತ್ತವೆ. ಅದಕಾರಣ ವಿಲೇಜ್‌ಯೂನಿಟ್ ಮಾತನ್ನು ಎತ್ತಿ ಹಿಡಿದು ಏನು ಅಮೆಂಡ್‌ಮೆಂಟನ್ನು ತಂದಿದ್ದಾರೆಯೋ ಆ ಅಮೆಂಡ್‌ಮೆಂಟನ್ನು ಒಪ್ಪುವುದಿಲ್ಲ ಎಂದು ಶ್ರೀ ಚವ್ಹಾನ್‌ರವರು ಹೇಳಿದ್ದು ನನಗೆ ಅಧಿಕೃತವಾಗಿ ರಿಪೋರ್ಟಿನಲ್ಲಿ ಉದಹರಿಸಿ ಗೊತ್ತಿದೆ. ದಂತಾದ್ದನ್ನು ಹೇಳುವುದಕ್ಕೆ ಲಭ್ಯವಿಲ್ಲವಾದ ಕಾರಣದಿಂದ ಅದನ್ನು ಬಾಯಿಲ್ಲಿಯೇ ನಾನು ಹೇಳುತ್ತಿದ್ದೇನೆ.

Sri B. P. KADAM.—It is all opposed to facts. It is not there. He cannot have monopoly.

Mr. SPEAKER.—I have no control over wrong argument and wrong statement of facts.

ಶ್ರೀ ಎ. ಜೆ. ದೊಡ್ಡಮೇಟಿ.—ಅದನ್ನು ತೋರಿಸಿ ಅದರಲ್ಲಿ ಹೇಳಿಲ್ಲದಿದ್ದರೆ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಈ ದೃಷ್ಟಿಯಿಂದ ನಾವು ವಿಚಾರ ಮಾಡುವುದಾದರೆ ಫಣಿಕರ್ ಸಮಿತಿಯವರು ಬೆಳಗಾವಿ ಜಿಲ್ಲೆಯ ಸಲುವಾಗಿ ಏನು ಹೇಳಿದ್ದಾರೆಂಬುದನ್ನು ನಾನು ಓದಿ ಹೇಳುತ್ತೇನೆ. ಶ್ರೀಮಾನ್ ಫಣಿಕರ್ ಅವರು ಕರ್ನಾಟಕದವರೂ ಅಲ್ಲ. ಅವರು ಮಹಾರಾಷ್ಟ್ರದವರೂ ಅಲ್ಲ. ಆದರೆ ಅವರು ಹೇಳಿದ್ದಕ್ಕೆ, ಅವರ ಮಾತಿಗೆ ಹೆಚ್ಚಿಗೆ ಬೆಲೆ ಇದೆ, ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಅವರು ಏನು ಹೇಳಿದ್ದಾರೆಂದರೆ......

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ರೆಸೊಲ್ಯೂಷನ್ ಪ್ರತಿಯೊಂದು ಲಿಂಗ್ವಿಸ್ಟಿಕ್ ಪ್ರಾವಿನ್ಸಸ್‌ಸ್ಸಿನ ಮೈನರ್ ಕಮ್ಯುನಿಟಿಗೆ ಸಂಬಂಧಪಟ್ಟಂತೆ ಗಡೀ ಲೆವೆಲ್‌ನಲ್ಲಿರತಕ್ಕ ಎಲ್ಲರಿಗೂ ಸಂಬಂಧಪಟ್ಟ ರೆಸುಲ್ಯೂಷನ್ನೇ ಹೊರತು ಇದು ಬರೀ ಮಹಾರಾಷ್ಟ್ರದವರಿಗೇ ಸಂಬಂಧಪಟ್ಟದ್ದಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಫಣಿಕರ್ ಸಮಿತಿಯ ರಿಪೋರ್ಟ್ ಕನ್ನಡದಲ್ಲಿ ಮುದ್ರಿತವಾಗಿದೆ. ಅದರಲ್ಲಿ ಪುಟ 111 ನ್ನು ಓದಿ ನೋಡಿದರೆ ಗೊತ್ತಾಗುತ್ತದೆ. ಅದರಲ್ಲಿ ಬೆಳಗಾವಿ ಡಿಸ್ಟ್ರಿಕ್ಟಿನ ಚಂದಗಡ ತಾಲ್ಲೂಕು ಪ್ರಧಾನವಾಗಿ ಮಹಾರಾಷ್ಟ್ರಕ್ಕೆ ಹೋಗಬೇಕು ಎಂದು ಹೇಳಿದ್ದಾರೆ. ಮತ್ತು ಬೆಳಗಾವಿ ಡಿಸ್ಟ್ರಿಕ್ಟಿನ ಉಳಿದ ಹತ್ತು ತಾಲ್ಲೂಕುಗಳ ವಿಚಾರದಲ್ಲಿ ಅವುಗಳ ಪೈಕಿ ಎರಡು ತಾಲ್ಲೂಕುಗಳು ಎಂದರೆ ಖಾನಾಪುರ ಮತ್ತು ಬೆಳಗಾಂ (ಬೆಳಗಾಂ ಟೌನೂ ಸೇರಿ) ತಾಲ್ಲೂಕುಗಳು ಚಿಕ್ಕೋಡಿ ತಾಲ್ಲೂಕಿನ ಕೆಲವು ಭಾಗಗಳು, ಈಗ ಉದ್ದೇಶಿಸಿರುವ ಕರ್ನಾಟಕ ರಾಜ್ಯದಲ್ಲಿರುವ ಅಕ್ಕಪಕ್ಕದ ಪ್ರದೇಶಗಳಿಗಿಂತ ಮರಾಠಿ ಮಾತನಾಡುವ ಬೊಂಬಾಯಿ ಡಿಸ್ಟ್ರಿಕ್ಟ್‌ಗಳೊಡನೆ ಸಂಪರ್ಕವನ್ನಿಟ್ಟುಕೊಂಡಿದೆಯೆಂದು ವಾದಿಸಲಾಗಿದೆ. ಖಾನಾಪುರ ಮತ್ತು ಬೆಳಗಾಂ ತಾಲ್ಲೂಕುಗಳಲ್ಲಿ ಮರಾಠಿ ಭಾಷೆಯನ್ನಾಡುವವರ ಸಂಖ್ಯೆಯು ಅಷ್ಟು ಹೆಚ್ಚಾಗಿಲ್ಲ, ಎಂದರೆ ಖಾನಾಪುರ ತಾಲ್ಲೂಕಿನಲ್ಲಿ ಅವರ ಸಂಖ್ಯೆಯು ಶೇಕಡಾ 53·9 ರಷ್ಟು, ಬೆಳಗಾಂ ತಾಲ್ಲೂಕಿನಲ್ಲಿ ಸಂಖ್ಯೆಯು ಶೇಕಡ 51.4 ರಷ್ಟು ಇದೆ. ಉಳಿದ 7 ತಾಲ್ಲೂಕುಗಳಲ್ಲಿ 6 ತಾಲ್ಲೂಕುಗಳು ಪ್ರಧಾನವಾಗಿ ಕನ್ನಡ ಭಾಷೆಯನ್ನು ಮಾತನಾಡುವ ಪ್ರದೇಶಗಳಾಗಿವೆ. ಕನ್ನಡ ಭಾಷೆಯನ್ನು ಮಾತನಾಡುವ ಈ ಪ್ರದೇಶದಲ್ಲಿ ಬೆಳಗಾಂ ಟೌನು ವ್ಯಾಪಾರದ ಕೇಂದ್ರವಾಗಿದೆ. ಮತ್ತು ಏಳನೆಯದಾದ ಚಿಕ್ಕೋಡಿ ತಾಲ್ಲೂಕಿನಲ್ಲಿ ಕನ್ನಡಿಗರು ಒಂದೇ ಭಾಷೆಯನ್ನು ಮಾತನಾಡುವವರಲ್ಲಿ ಅಧಿಕ

ಸಂಖ್ಯಾತರಾಗಿದ್ದಾರೆ. ಬೆಳಗಾಂ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳೂ, ಮರಾಠಿ ಮತ್ತು ಕನ್ನಡ ಭಾಷೆಗಳನ್ನಾಡತಕ್ಕ ಪ್ರದೇಶಗಳೊಡನೆ ಆರ್ಥಿಕ ಸಂಬಂಧವನ್ನಿಟ್ಟುಕೊಂಡಿವೆ. ಅವುಗಳಲ್ಲಿ ಹತ್ತಿ ಮತ್ತು ಎಣ್ಣೆಯ ಬೀಜಗಳ ವ್ಯಾಪಾರವೇ ಹೆಚ್ಚು. ಬೆಳಗಾಂ ಟೌನ್ ಆಗಲಿ ಅಥವಾ ವಿವಾದ ಕ್ಕೊಳಪಟ್ಟಿರುವ ಇತರ ಪ್ರದೇಶಗಳಾಗಲೀ, ಬೊಂಬಾಯಿ ರಾಜ್ಯದ ಮರಾಠಿ ಭಾಷೆಯನ್ನಾಡುವ ಡಿಸ್ಟ್ರಿಕ್ಟುಗಳೊಡನೆ ಯಾವ ವಿಶೇಷ ರೀತಿಯ ಸಂಪರ್ಕಗಳನ್ನೂ ಇಟ್ಟುಕೊಂಡಿಲ್ಲ. ಆದುದರಿಂದ ಬೆಳಗಾಂ ಡಿಸ್ಟ್ರಿಕ್ಟಿನಿಂದ ಖಾನಾ ಪುರವನ್ನಾಗಲೀ ಬೆಳಗಾಮನ್ನಾಗಲೀ ಅಥವಾ ಚಿಕ್ಕೋಡಿಯ ಭಾಗಗಳನ್ನಾಗಲೀ ಬೇರ್ಪಡಿಸುವುದಕ್ಕೆ ಯಾವ ಕಾರಣವು ಇಲ್ಲ.

ಬೆಳಗಾಂ ಟೌನಿನಲ್ಲಿ ಮರಾಠಿ ಭಾಷೆಯನ್ನು ಮಾತನಾಡುವವರು ಅಧಿಕ ಸಂಖ್ಯೆಯಲ್ಲಿದ್ದಾರೆ; ಆದ್ದರಿಂದ ಈ ವಿಷಯಕ್ಕೆ ಸರಿಯಾಗಿ ಗಮನಕೊಡಬೇಕೆಂದು ಕೆಲವರು ವಾದಿಸಿದ್ದಾರೆ ಹಿಂದಿನ ಜನಗಣತಿಯಲ್ಲಿ ಈ ಟೌನಿನಲ್ಲಿ ಬೇರೆ ಬೇರೆ ಮಾತೃ ಭಾಷೆಯನ್ನು ಮಾತನಾಡುವ ಜನರ ಸಂಖ್ಯೆಯು ಎಷ್ಟೆಷ್ಟಿರುವುದು ಎಂಬ ಬಗ್ಗೆ ಪ್ರತ್ಯೇಕವಾಗಿ ಅಂಕಿಅಂಶಗಳನ್ನು ಸಂಗ್ರಹಿಸಿಲ್ಲ.

ಮಹಾರಾಷ್ಟ್ರ ಬಂಧುಗಳು ಏನು ವಾದ ಮಾಡುತ್ತಾರೆ ಆ ವಾದದಲ್ಲಿ ಏನೇನೂ ಅರ್ಥವಿಲ್ಲ ಎನ್ನುವ ಮಾತನ್ನು ಫಣಿಕರ್ ಅಂತಹ ಮಹಾಪುರುಷರು ಈ ರೀತಿ ವಾದ ಮಾಡಿದ್ದಾರೆ.

ಶ್ರೀ ಖೇಳಕರ್ ಎಂಬುವವರು ಮಹಾರಾಷ್ಟ್ರದ ಒಬ್ಬ ಪೂಜ್ಯ ವ್ಯಕ್ತಿಗಳು. 1924ರಲ್ಲಿ ಮರಾಠಿ ಸಾಹಿತ್ಯ ಪರಿಷತ್ತು ನಡೆಯಿತು. ಆ ಕಾಲಕ್ಕೆ ಮರಾಠಿ ಮತ್ತು ಕನ್ನಡ ಜನರಲ್ಲಿ ನಡೆದಂಥ ವೈಮನಸ್ಸಿನಿಂದ ಮರಾಠಿ ಪರಿಷತ್ತನ್ನು ನಡೆಸಕೂಡದೆಂದು ಒಂದು ವಾದವನ್ನು ಕನ್ನಡಿಗರು ಮಾಡಿದರು ? ಆಗ ಮರಾಠಿ ಸಾಹಿತ್ಯ ಪರಿಷತ್ತನ್ನು ನಡೆಸಬೇಕಾಯಿತು. ಆಗ ಮಹಾರಾಷ್ಟ್ರದ ಬಾಗಿಲು ಎನ್ನುವ ಮಾತನ್ನು ನಾವು ಒಪ್ಪುವುದಿಲ್ಲ ಮುಂತಾಗಿ ಕನ್ನಡಿಗರು ಆಗ್ರಹ ಹೂಡಿದರು. ಅನಂತರ ಮರಾಠಿ ಸಾಹಿತ್ಯ ಪರಿಷತ್ತನ್ನು ನಡೆಸಲು ಒಂದು ನಿರ್ಣಯ ಆಯಿತು. ಅದು ನನ್ನ ಕಡೆಗೆ ಇದೆ. ಈಗ ತಾವು ಆಕ್ಷೇಪ ತೆಗೆದುಕೊಂಡಿರುವ ಕಾರಣ ಅದನ್ನು ನಾನು ಇಲ್ಲಿ ಓದಿ ಹೇಳುವುದಿಲ್ಲ. ನನ್ನ ತಿಳುವಳಿಕೆಯಲ್ಲಿರುವುದನ್ನು ನಾನು ಹೇಳುತ್ತೇನೆ. ಶ್ರೀಮಾನ್ ಖೇಳಕರ, ದಳವಿ, ಗುಂಜಾಲ್ ಇಬ್ಬರು ಕನ್ನಡಿಗರು ಮತ್ತು ಇಬ್ಬರು ಮರಾಠರು ಸೇರಿ ಒಂದು ಹೇಳಿಕೆಯನ್ನು ಹೊರಡಿಸಿದರು. ಮರಾಠಿ ಸಮ್ಮೇಳನದಲ್ಲಿ ಈ ವಿಧವಾದ ಒಂದು ನಿರ್ಣಯ ಪಾಸ್ ಮಾಡಬೇಕೆಂದು ನಿರ್ಣಯ ಮಾಡಿದರು. ಅದು ಡ್ರಾಫ್ಟ್ ರೆಸಲ್ಯೂಷನ್‌ನಲ್ಲಿ ಅಂದರೆ ಕರಡು ಗೊತ್ತುವಳಿಯಲ್ಲಿ ನಮೂದಿಸಲ್ಪಟ್ಟಿದೆ. ಅದರಲ್ಲಿ ''ಏನು ಇದೆ'' ಎಂದರೆ ''ಬೆಳಗಾಂ ಜಿಲ್ಲೆಯು ಕರ್ಣಾಟಕದ ಭಾಗವಾಗಿದೆ ಎಂದು ನಾವು ಒಪ್ಪುತ್ತೇವೆ ಹಾಗೂ ಬೆಳಗಾಂ ಜಿಲ್ಲೆಯ ಬಹು ಸಂಖ್ಯಾತ ಜನರ ಭಾಷೆ ಕನ್ನಡ ಎಂಬುದನ್ನೂ ನಾವು ಒಪ್ಪುತ್ತೇವೆ'' ಎನ್ನುವುದನ್ನು ಕರಡು ಗೊತ್ತುವಳಿಯೊಳಗೆ ಒಂದು ಭಾಗವಿದೆ. ನನ್ನ ಬಳಿ ಇರುವ ಈ ಪುಸ್ತಕದೊಳಗೆ ಇದೆ. ನನ್ನ ಮಾನ್ಯ ಮಿತ್ರರು ಅದನ್ನು ತೆಗೆದುಕೊಂಡು ನೋಡಬಹುದು. ಈ ರೀತಿ ಅನೇಕ ಮಾತುಗಳು ನಡೆದಿವೆ.

[MR. DEPUTY SPEAKER in the Chair.]

ಹಿಂದೆ ಮಹಾರಾಷ್ಟ್ರ ಮತ್ತು ಕರ್ಣಾಟಕಗಳಿಗೆ ಪ್ರತ್ಯೇಕ ಕಾಂಗ್ರೆಸ್ ಕಮಿಟಿಗಳಿದ್ದುವು. 1924ರ ನಂತರ ಆಂಧ್ರ, ಕರ್ಣಾಟಕ ಮತ್ತು ಮಹಾರಾಷ್ಟ್ರ ಹಾಗೂ ಮದ್ರಾಸ್ ಎಂದು ವಿಂಗಡಣೆ ಯಾಯಿತು. ಆ ವಿಂಗಡಣೆಯ ಕಾಲಕ್ಕೆ ಆಂಧ್ರದೊಳಗೆ ಬಳ್ಳಾರಿ ಜಿಲ್ಲೆಯ ಆದವಾನಿ, ಆಲೂರು ಮತ್ತು ರಾಯದುರ್ಗ ತಾಲ್ಲೂಕುಗಳು ಖೇಳಕರ ಅವಾರ್ಡ್ ಪ್ರಕಾರ ಸೇರಿಸಲ್ಪಟ್ಟವು. ಆಗ ಇಡೀ ಬೆಳಗಾಂ ಜಿಲ್ಲೆಯನ್ನು ಸಮಗ್ರವಾಗಿ ಕರ್ಣಾಟಕದೊಳಗೆ ಸೇರಿಸಿರುವುದಕ್ಕೆ ಕಾರಣವೇನು ಎಂದು ನಮ್ಮ ಮಾನ್ಯ ಸದಸ್ಯರು ಹೇಳಿದ್ದರೆ ಚೆನ್ನಾಗಿತ್ತು. ಈ ರೀತಿ ಅನೇಕಾನೇಕ ಗ್ರಂಥಗಳನ್ನು ಓದಿ ನೋಡಿದ್ದರೆ ಚೆನ್ನಾಗಿತ್ತು. ಅವರೆಲ್ಲರೂ ನಮ್ಮನ್ನು ಕೂಡಿಕೊಂಡಿದ್ದಾರೆ. ಕರ್ಣಾಟಕದೊಳಗೆ ನಮ್ಮ ಸ್ನೇಹಿತರು ಬಂದಿದ್ದಾರೆ. ಇನ್ನು ಯಾವ ಕಾರಣಕ್ಕಾಗಿಯೂ ಅವರು ಬಿಟ್ಟು ಹೋಗುವುದು ಸಾಧ್ಯ ವಿಲ್ಲ. ಈಗಾಗಲೇ ಕೂಡಿಯಾಗಿದೆ. ಅವರನ್ನು ಬಿಡುವ ಮನಸ್ಸು ನಮಗೂ ಇಲ್ಲ, ನಮ್ಮನ್ನು ಬಿಡುವ ಮನಸ್ಸು ಅವರಿಗೂ ಇಲ್ಲ......

Sri V. S. PATIL.—You want us to be slaves to serve under you !

ಶ್ರೀ ಎ. ಜೆ. ದೊಡ್ಡಮೇಟಿ.—ಸ್ಲೇವ್ಸ್ ಎನ್ನುವ ಮಾತಲ್ಲ. ಆಫ್ರಿಕದಂಥ ರಾಷ್ಟ್ರದೊಳಗೇ ಅಲ್ಲಿಯ ಜನಾಂಗ ಇದರಿಂದ ಮುಕ್ತರಾಗುತ್ತಿದ್ದಾರೆ. ನಾವೂ ನೀವೂ 'ಸ್ಲೇವ್ಸ್' ಆಗುತ್ತೇವೇ ಎನ್ನುವುದು ಶಕ್ಯವಿಲ್ಲದ ಮಾತು.

(ಶ್ರೀ ಎ. ಜೆ. ದೊಡ್ಡಮೇಟಿ)

ಒಂದು ಮಹತ್ವದ ವಿಷಯವೆಂದರೆ ಈ ಸಮಯದಲ್ಲಿ ಈ ನಿರ್ಣಯ ತರಬಾರದಾಗಿತ್ತು. ಮಹಾರಾಷ್ಟ್ರ ಬಾರ್ಡರ್ ಪ್ರಶ್ನೆಯಲ್ಲಿ ನೂರಾರು ಹಳ್ಳಿಗಳು ನಮಗೂ ಬರುವುವು, ನೂರಾರು ಹಳ್ಳಿಗಳು ಅತ್ತ ಕಡೆಗೂ ಹೋಗುವುವು ಇರಬಹುದು. ಆ ಪ್ರಶ್ನೆ ಇಲ್ಲವೆಂದು ಹೇಳುವುದಿಲ್ಲ. ಆ ಪ್ರಶ್ನೆ ಉಂಟು. ಈ ಪ್ರಶ್ನೆ ಕರ್ಣಾಟಕ ಮತ್ತು ಮಹಾರಾಷ್ಟ್ರಗಳ ಮಟ್ಟಿಗೆ ಇರುವುದಿಲ್ಲ. ಆಂಧ್ರ ತಮಿಳುನಾಡು, ಕೇರಳ ಈ ಮೂರು ರಾಜ್ಯಗಳ ಜೊತೆಗೂ ಇದ್ದೇ ಇದೆ. ಇದೆಲ್ಲವನ್ನೂ ನಮ್ಮ ಸರ್ಕಾರದವರು ಒಟ್ಟಿಗೆ ಬಿಡಿಸಬೇಕಾಗುತ್ತದೆ. ಆದರೆ ಯಾವ ಕಾರಣಕ್ಕಾಗಿ ಈ ವಿಳಂಬ ನಡೆದಿದೆ ಎಂದು ವಿಚಾರ ಮಾಡೋಣ. ಈ ಹೊತ್ತಿನೊಳಗೆ ಏನಾದರೂ ಪರಸ್ಪರ ಮಾತುಕತೆಯಾಗಬಹುದಿತ್ತು. ಆದರೆ ತುರ್ತು ಪರಿಸ್ಥಿತಿಯ ಕಾರಣ; ಈ ಪ್ರಶ್ನೆಗೆ ಪುಟಕೊಟ್ಟರೆ ದೇಶದ ಐಕ್ಯತೆಗೆ ದೇಶದ ಯುದ್ಧ ಪ್ರಯತ್ನಕ್ಕೆ ತೊಂದರೆಯಾದೀತು ಎನ್ನುವ ಕಾರಣಕ್ಕಾಗಿ; ಇವತ್ತು ಇಂಥ ಮಾತುಗಳನ್ನು ಎತ್ತಲಿಕ್ಕೆ ಯಾವುದೇ ಸರ್ಕಾರ ಮನಸ್ಸು ಮಾಡಿಲ್ಲ.

ಮಹಾರಾಷ್ಟ್ರದ ಒಬ್ಬ ಧೀರ ವ್ಯಕ್ತಿ ಇವತ್ತು ರಕ್ಷಣೆಯ ಭಾರವನ್ನು ಹೊತ್ತು ನಿಂತಿದ್ದಾನೆ. ಆ ವ್ಯಕ್ತಿಯ ಗೌರವಕ್ಕಾದರೂ ಈ ನಿರ್ಣಯವನ್ನು ತರದೇ ಇದ್ದರೆ ಸ್ವಲ್ಪ ಒಳ್ಳೆಯದಾಗುತ್ತಿತ್ತು ಎಂದು ಹೇಳಲಿಕ್ಕೆ ಅಪೇಕ್ಷೆ ಮಾಡುತ್ತೇನೆ.

ನಾನು ನಮ್ಮ ಸಂಯುಕ್ತ ಮಹಾರಾಷ್ಟ್ರ ಪಕ್ಷದ ಬಂಧುಗಳಿಗೆ ಒಂದು ಮಾತನ್ನು ಹೇಳುತ್ತೇನೆ: ಈ ರಾಜ್ಯಕ್ಕೆ ಕರ್ಣಾಟಕ ರಾಜ್ಯ ಎಂದು ಹೆಸರಾಗಬೇಕು ಎನ್ನುವುದು ದೊಡ್ಡ ಜೀವಾಳದ ಪ್ರಶ್ನೆ. ಅಂಥ ಪ್ರಶ್ನೆಯನ್ನು ಸಹಿತ ನಮ್ಮ ಸರ್ಕಾರ ತುರ್ತು ಪರಿಸ್ಥಿತಿಯೊಳಗೆ ಎತ್ತುವುದು ಬೇಡ ಎಂದು ಹೇಳಿದ ಮೇಲೆ, ನಮಗೆ ಸಭೆಯಲ್ಲಿ ಬಹುಮತವಿದ್ದರೂ, ಮೂರನೇ ಎರಡು ಅಂಶ ಬಹುಮತವಿದ್ದರೂ ಕೂಡ ಏಕೆ ಎತ್ತದೆ ಕಾಯ್ದುಕೊಂಡಿದ್ದೇವೆ ಎಂದರೆ ತುರ್ತು ಪರಿಸ್ಥಿತಿಯಲ್ಲಿ ಜನರ ಮನಸ್ಸನ್ನು ಅಲ್ಲೋಲ ಕಲ್ಲೋಲ್ಲ ಮಾಡಬಾರದು ಎನ್ನುವ ಕಾರಣದಿಂದ. ಈಗ ಅವರು ಈ ನಿರ್ಣಯವನ್ನು ತಂದಿದ್ದಾರೆ. ಅವರಿಗೆ ಎಷ್ಟು ಮತಗಳು ಸಿಕ್ಕುತ್ತವೆ ಎನ್ನುವುದು ಗೊತ್ತಾಗಿರುವ ಸಂಭವವಿದೆ. ಇಷ್ಟಿದ್ದರೂ ಕೂಡ ಅವರು ಒತ್ತಾಯ ಮಾಡುತ್ತಿದ್ದಾರೆ. ಇದು ದೇಶ ಪ್ರೇಮವೇ? ಎಂದು ಕೇಳಬೇಕಾಗಿದೆ.

ನಮ್ಮ ಮಾನ್ಯ ಮಿತ್ರರಾದ ವಿ. ಎಸ್. ಪಾಟೀಲ್ ಅವರು ವ್ಯಕ್ತಿಶಃ ಬಹಳ ರೀಸನಬಲ್. ಆದರೆ ಪರಿಸ್ಥಿತಿ ಹಾಗಿದೆ, ಆ ಪರಿಸ್ಥಿತಿಯೊಳಗೆ ಸಿಕ್ಕಿಬಿದ್ದಿದ್ದಾರೆ. ಅವರು ಏನು ಮಾಡಲೂ ಆಗುವುದಿಲ್ಲ. ಆದ್ದರಿಂದ ಅವರು ಇನಸಿಸ್ಟ್ ಮಾಡಬೇಕು, ಮಾಡುತ್ತಾರೆ, ಮಾಡಲಿ. ಇದನ್ನೆಲ್ಲ ವಿಚಾರ ಮಾಡಿದರೆ ಅವರು ಇಂಥ ವೇಳೆಯಲ್ಲಿ ಈ ನಿರ್ಣಯವನ್ನು ವಾಪಸು ಪಡೆಯುವುದು ಉತ್ತಮ ಎಂದು ಇಲ್ಲಿ ಸಲಹೆ ಮಾಡಲಿಕ್ಕೆ ಅಪೇಕ್ಷೆ ಮಾಡುತ್ತೇನೆ.

ಇನ್ನು ನನ್ನ ಉಪಸೂಚನೆ ಅಥವಾ ತಿದ್ದುಪಡಿಯ ವಿಷಯ ಹೇಳಬೇಕಾಗಿದೆ. ನನ್ನ ತಿದ್ದುಪಡಿಯಲ್ಲಿ ನಾನು ಏನು ಹೇಳಿದ್ದೇನೆ, ವಿಶೇಷತಃ ಮಹಾರಾಷ್ಟ್ರ ಎಂದು ಯಾವ ಕಾರಣಕ್ಕಾಗಿ ಇಡಬೇಕು? ಅದನ್ನು ಇಟ್ಟರೆ ಕದಾಚಿತ್ ಹೀಗೆ ಆಗುತ್ತದೆ. ಮಹಾರಾಷ್ಟ್ರ ಬಾರ್ಡರ್ ಪ್ರಶ್ನೆ ಮುಗಿಯಿತು ಎಂದರೆ ಇನ್ನು ಯಾವುದೂ ಇಲ್ಲ ಎನ್ನುವ ಅರ್ಥವಾಗುವ ಸಂಭವವಿದೆ. ಮಹಾರಾಷ್ಟ್ರ, ತಮಿಳುನಾಡು, ಆಂಧ್ರ, ಕೇರಳ, ಈ ನಾಲ್ಕೂ ನಮಗೆ ನೆರೆಯ ರಾಷ್ಟ್ರಗಳು. ಈ ನಾಲ್ಕೂ ರಾಜ್ಯಗಳಿಗೆ ಸಂಬಂಧಪಟ್ಟಂತೆ ಬಾರ್ಡರ್ ಪಶ್ನೆ ಬಗೆಹರಿಯಬೇಕಾಗಿದೆ.

4-00 P.M.

ಅವರ ದೃಷ್ಟಿಯಲ್ಲಿ ಮಹಾರಾಷ್ಟ್ರಕ್ಕೆ ಬಹಳ ಪ್ರಾಮುಖ್ಯತೆ ಇದೆ. ಅವರೆ ಬಾಪುರಾಯರನ್ನು ಇವರು ಒಂದು ದಿವಸ ಕೈಬಿಡುತ್ತಾರೆಂದು ನನಗೆ ಗೊತ್ತಿದೆ. ಇದಕ್ಕೆ ಕಾರಣವೂ ನನಗೆ ಗೊತ್ತಿದೆ, ಅವರಿಗೂ ಗೊತ್ತಿದೆ.

Sri B. P. KADAM.—I challenge that statement. What do you mean by it?

ಶ್ರೀ ಎ. ಜೆ. ದೊಡ್ಡಮೇಟಿ.—ಆ ಕಾರಣವನ್ನು ನಾವು ಯೋಚನೆ ಮಾಡುವುದಾದರೆ, ಯಾವುದೇ ಒಂದು ಸಣ್ಣ ಭಾವನೆಯಿಂದ, ಸಂಕುಚಿತ ಭಾವನೆಯಿಂದ ಮಹಾರಾಷ್ಟ್ರದ ಮಾತನ್ನು ಹೇಳಬಾರದು. ಈ ಗೊತ್ತುವಳಿಯಲ್ಲಿರುವ ವಿಚಾರವಲ್ಲದೆ ಇಡೀ ರಾಜ್ಯದ ಸಮಸ್ಯೆಯನ್ನು ನಾವೂ ನೀವೂ ಜೊತೆಗೆ ಕೂಡಿ ಬಿಡಿಸಬೇಕಾಗಿದೆ. ನಾವೆಲ್ಲರೂ ಕೂಡಿ ಈ ವಿಷಯವನ್ನು ಯೋಚನೆ ಮಾಡಬೇಕಾಗಿದೆ. ''ಮಹಾರಾಷ್ಟ್ರವಷ್ಟೆ'' ಎಂದು ಹೇಳಿ ಒಂದೇ ಒಂದು ಪ್ರಶ್ನೆಗೆ ಮಹತ್ವ ಕೊಡಬಾರದೆಂದು ನಾನು

ನನ್ನ ತಿದ್ದುಪಡಿಯನ್ನು ಕೊಟ್ಟಿದ್ದೇನೆಯೇ ಹೊರತು ಬೇರೆ ಕಾರಣದಿಂದಲ್ಲ. ಅವರು ಭಾಷಾ ಸಂಖ್ಯಾತರು, ಪ್ರಾದೇಶಿಕ ಸಾಮೀಪ್ಯ ಗ್ರಾಮವನ್ನೇ ಘಟಕವಾಗಿ ಪರಿಗಣಿಸುವುದು ಮತ್ತು ಜನರ ಅಭೀಷ್ಟ ಇವುಗಳ ಆಧಾರದ ಮೇಲೆ ಅಥವಾ ತತ್ವದಮೇಲೆ ಬಗೆಹರಿಸಬೇಕೆಂದು ಅವರ ನಿರ್ಣಯದಲ್ಲಿ ಸೂಚಿಸಿದ್ದಾರೆ, ಈ ಬಗ್ಗೆ ಮಹಾರಾಷ್ಟ್ರ ಮುಖ್ಯಮಂತ್ರಿಗಳು 1948ರಲ್ಲಿ ಏನು ಹೇಳಿದ್ದಾರೆಂಬುದನ್ನು ಅವರು ಗಮನಿಸಿದ್ದರೆ ಈ ಮಾತನ್ನು ಎತ್ತುತ್ತಿರಲಿಲ್ಲ. ಪ್ರಾದೇಶಿಕ ಸಾಮೀಪ್ಯ ಮುಖ್ಯವಿಚಾರವಾದರೂ ಪರಸ್ಪರ ವಿಚಾರ ವಿನಿಮಯಮಾಡಿ ತೀರ್ಮಾನ ಕೈಕೊಳ್ಳಬಹುದು. ಯಾವ ತತ್ವವನ್ನಂಗೀಕರಿಸ ಬೇಕೆಂಬುದನ್ನು ಈಗಲೇ ಹೇಳುವುದು ಬೇಡ. ಮಹಾರಾಷ್ಟ್ರದಿಂದ ಇಬ್ಬರು ಕರ್ಣಾಟಕದಿಂದ ಇಬ್ಬರು ಸದಸ್ಯರನ್ನೊಳಗೊಂಡ ಸಮಿತಿಯನ್ನು ಮಾಡಿದರು, ಅವರು ವರದಿಮಾಡಿದ್ದಾರೆ, ಇಬ್ಬರ ವರದಿಯೂ ಇದೆ, ಆದರೆ ಅನೇಕ ಕಾರಣಗಳಿಂದ ಈ ಸಭೆಯಲ್ಲಿ ಅದು ಚರ್ಚೆ ಮಾಡಲ್ಪಟ್ಟಿಲ್ಲವಾದುದ ರಿಂದ ಆ ವಿಷಯವನ್ನು ನಾನು ಹೇಳುವುದಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ, ಈ ಸಂಬಂಧವಾಗಿ ನಮ್ಮಿಂದ ನಾಲ್ಕು ಹಳ್ಳಿಗಳು ಅವರಿಗೆ, ಅವರಿಂದ ನಾಲ್ಕು ಹಳ್ಳಿಗಳು ನಮಗೆ ಬಂದರೇನಾಯಿತು ? ಇದೇನು ಪಾಕಿಸ್ತಾನ-ಹಿಂದೂಸ್ತಾನದ ಅಥವಾ ರಷ್ಯಾ-ಹಿಂದೂಸ್ತಾನದ ಅಥವಾ ಚೈನ-ಹಿಂದೂಸ್ತಾನದ ಗಡಿ ಸಮಸ್ಯೆಯೆ ? ಅಷ್ಟು ಗಂಭೀರವಾಗಿ ಈ ಪ್ರಶ್ನೆಯನ್ನು ತೆಗೆದುಕೊಳ್ಳುವುದು ಸಾಧುವಲ್ಲ. ನಾವು ಬೇರೆ ಬೇರೆ ರಾಷ್ಟ್ರದವರಲ್ಲ ; ಒಂದೇ ರಾಷ್ಟ್ರದವರು. ಸಂಬಂಧಪಟ್ಟ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳೂ ಒಂದು ಕಡೆ ಕೂಡೋಣ, ಪರಸ್ಪರ ಸಮಾ ಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರೋಣ. ಮಹಾರಾಷ್ಟ್ರಕ್ಕೆ ಬಹಳ ಸಮಸ್ಯೆಗಳಿಲ್ಲ, ಈ ದೃಷ್ಟಿಯಿಂದ ಅದು ಸುದೈವೀ ರಾಜ್ಯವೆಂದು ಹೇಳಬಹುದು. ಆದರೆ ಕರ್ಣಾಟಕಕ್ಕೆ ಬಹಳ ಸಮಸ್ಯೆ ಗಳಿವೆ ; ಮೂರು ರಾಜ್ಯಗಳ ಸರಹದ್ದಿನ ಸಮಸ್ಯೆಯನ್ನು ಇದು ಬಿಡಿಸಬೇಕಾಗಿದೆ. ಒಂದು ಕಡೆ ಕಾಸರಗೋಡಿನ ಜನರು ಕಣ್ಣೀರಿಡುತ್ತಿದ್ದಾರೆ. ದಕ್ಷಿಣ ಸೋಲ್ಲಾಪುರ, ಅಕ್ಕಲಕೋಟೆ, ಜೆತ್ ಈ ಎಲ್ಲವುಗಳ ಪ್ರಶ್ನೆ ಇದೆ. ತಕ್ಕಡಿಯಲ್ಲಿ ಕರ್ಣಾಟಕ ಕೆಳಗಾಗುತ್ತದೆ, ಮಹಾರಾಷ್ಟ್ರ ಮೇಲಾಗುತ್ತದೆ. ಆದರೂ ಕೂಡ ನಾವು ಸುಮ್ಮನಿದ್ದೇವೆ. ಇದಕ್ಕೆ ಕಾರಣ, ಈಗ ನಾವು ಗಡಿಬಿಡಿ ಮಾಡಬಾರದೆಂದು ಸುಮ್ಮನಿದ್ದೇವೆ. ಆದರೆ ಅವರು ಸಂಧಾನಕ್ಕೆ ಸಿದ್ಧವಾಗಿಲ್ಲ, ಇಲ್ಲಿರುವ ದೊಡ್ಡ ದೊಡ್ಡ ನಗರಗಳನ್ನೇ ಹಿಡಿದು ಹಾಕಬೇಕೆಂದು ಮನಸ್ಸು ಮಾಡಿದ್ದಾರೆ. ನಾವು ಅದಕ್ಕೆ ನಿಲ್ಲಬಾರದೆಂದು ನಿಶ್ಚಯ ಮಾಡಿ ದ್ದೇವೆ. ಇದರ ಅರ್ಥವನ್ನು ಈ ನಿರ್ಣಯದ ಸೂಚಕರು ತಿಳಿದುಕೊಳ್ಳಬೇಕು. ಸಣ್ಣ ಪುಟ್ಟ ಹೊಂದಾಣಿಕೆಗೆ ನಾವೂ ನಮ್ಮ ಸರಕಾರವೂ ಸಿದ್ಧವಾಗಿದ್ದೇವೆ. ಅದಕ್ಕೇ ನಾವು ನಮ್ಮ ಕಡೆಯಿಂದ ಇಬ್ಬರು ಮಹನೀಯರನ್ನು ನೇಮಕ ಮಾಡಿದೆವು. ಅದರಲ್ಲಿ ಹೈಕೋರ್ಟಿನ ನ್ಯಾಯಾಧೀಶರೂ ರಾಜ ಕಾರಣಿಗಳೂ ಇದ್ದಾರೆ. ಅವರು ಕೊಟ್ಟಿರುವ ವರದಿಗಳನ್ನೂ ನಾವು ನೋಡಿದ್ದೇವೆ. ನಮಗೆ ಗೊತ್ತಿರುವ ಹಾಗೆ, ಇದನ್ನು ಬಹಳ ದೊಡ್ಡ ಸಮಸ್ಯೆಯನ್ನಾಗಿ ಮಾಡಬಾರದು, ಚಿಕ್ಕಪುಟ್ಟ ಬದಲಾವಣೆ ಮಾಡಿಕೊಳ್ಳಬಹುದು ಎನ್ನುವುದು ಎಲ್ಲರ ಅಭಿಪ್ರಾಯ. ನಮ್ಮ ಸರಕಾರದ ಧೋರಣೆ ಯಾದರೂ ರಾಜೀ ಸೂತ್ರಕ್ಕೆ ವಿರೋಧವಾಗಿಲ್ಲ. ಈ ಸಮಸ್ಯೆಯನ್ನು ಸಾಮರಸ್ಯದಿಂದ, ಶಾಂತಿಯಿಂದ ಬಿಡಿಸಬೇಕೆಂದು ಆತುರದಿಂದಿದ್ದಾರೆ. ಆದರೆ ಮಹಾರಾಷ್ಟ್ರ ಬಂಧುಗಳು ಬೇಟೆಗಾರ ಯಾವ ರೀತಿ ತನ್ನಗುರಿಗೆ ಸರಿಯಾಗಿ ತಾನು ಬೇಟೆ ಮಾಡಬೇಕಾದ ಪ್ರಾಣಿ ಬರಬೇಕೆಂದು ಪ್ರಯತ್ನ ಮಾಡುತ್ತಾನೋ ಹಾಗೆ ನಮ್ಮನ್ನು ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಹೀಗೆ ಮಾಡಿದರೆ ನಿಮ್ಮ ಗುರಿಗೆ ಅಥವಾ ನಿಮ್ಮ ಬಲೆಗೆ ನಾವು ಎಂದಿಗೂ ಬೀಳುವುದಿಲ್ಲವೆಂದು ನಾನು ಅವರಿಗೆ ಹೇಳು ತ್ತೇನೆ. ಈ ದೃಷ್ಟಿಯಿಂದ ವಿಚಾರ ಮಾಡಬೇಕಾಗಿದೆ. ಅವರು ಮಹಾರಾಷ್ಟ್ರದ ಚರಿತ್ರೆಯನ್ನೂ ಕರ್ಣಾಟಕದ ಚರಿತ್ರೆಯನ್ನೂ ಅವಲೋಕಿಸಿ ಸರಿಯಾಗಿ ಆಲೋಚನೆ ಮಾಡಬೇಕು. ಲೋಕಮಾನ್ಯ ಬಾಲ ಗಂಗಾಧರ ತಿಲಕರು ಹಿಂದೆ ಬೈಲಹೊಂಗಲದಲ್ಲಿ ಮತ್ತು ಬೆಳಗಾವಿಯಲ್ಲಿ ಭಾಷಣಮಾಡುವಾಗ ಏನು ಹೇಳಿದ್ದಾರೆಂದು ಅವರು ನೋಡಲಿ. ಆಗ ಅವರು ಕರ್ಣಾಟಕ ಎಂಬ ಮಾತನ್ನು ಸ್ಪಷ್ಟವಾಗಿ ಆಡಿದ್ದಾರೆ. 1934ನೆಯ ಇಸವಿ ಮಾರ್ಚಿ 7ನೆಯ ತಾರೀಕು ಬೆಳಗಾವಿಗೆ ಮಹಾತ್ಮಾ ಗಾಂಧಿಯವರು ಬಂದಿದ್ದರು, ಆಗ ಅವರ ಭಾಷಣ ಮರಾಠಿಯಲ್ಲಿ ತರ್ಜುಮೆಯಾಗಬೇಕೋ ಅಥವಾ ಕನ್ನಡದಲ್ಲಿ ಆಗಬೇಕೋ ಎಂಬ ಪ್ರಶ್ನೆ ಬಂತು; ನಮ್ಮ ಮರಾಠಿ ಬಂಧುಗಳು ಮರಾಠಿಯಲ್ಲಿ ಆಗಲಿ ಎಂಬ ಅಭಿ ಪ್ರಾಯವನ್ನಿಟ್ಟುಕೊಂಡಿದ್ದರು. ಆಗ ಮಹಾತ್ಮಾ ಗಾಂಧಿಯವರು ಗಂಗಾಧರರಾವ್ ದೇಶಪಾಂಡೆ ಯವರನ್ನು ಕರೆದು, ನಾವು ಕನ್ನಡ ನೆಲದಮೇಲೆ ನಿಂತಿದ್ದೇವೆ, ಕನ್ನಡದಲ್ಲೇ ಅನುವಾದ ಮಾಡ ಬೇಕೆಂದು ಹೇಳಿದರು. ಆ ರೀತಿಯೇ ಮಾಡಿದರು. 1924 ನೆಯ ಇಸವಿಯಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು, ಅದನ್ನು ಕರ್ಣಾಟಕದ ಅಧಿವೇಶನವೆಂದು ಕರೆದರೇ ಹೊರತು ಮಹಾರಾಷ್ಟ್ರದ ಕಾಂಗ್ರೆಸ್ ಅಧಿವೇಶನವೆಂದು ಕರೆಯಲಿಲ್ಲ. ಈ ಮಾತನ್ನು ಲಕ್ಷ್ಯದಲ್ಲಿಟ್ಟುಕೊಳ್ಳ ಬೇಕು, ಈ ಹೊತ್ತು ಬೆಂಗಳೂರಿಗೆ ಫ್ಲೋಟಿಂಗ್ ಪಾಪ್ಯುಲೇಶನ್ ಬೇರೆ ಕಡೆಗಳಿಂದ ಬೇಕಾದಷ್ಟು ಜನ ಬರಬಹುದು, ಎಂದಮಾತ್ರಕ್ಕೇ ನಮ್ಮ ಬೆಂಗಳೂರನ್ನು ಬೇರೆಯವರಿಗೆ ಕೊಡುವುದಕ್ಕಾಗುತ್ತ

(ಶ್ರೀ ಎ. ಜೆ. ದೊಡ್ಡಮೇಟಿ)

ದೆಯೇ ? ಕೊಡಬೇಕೆಂದರೆ ಅದು ಒಪ್ಪತಕ್ಕ ಮಾತಲ್ಲ. ಒಂದು ದೊಡ್ಡ ನಗರದಲ್ಲಿ ಫ್ಲೋಟಿಂಗ್ ಪಾಪ್ಯುಲೇಷನ್ ಎಷ್ಟೋ ಇರುತ್ತದೆ, ಆದರೆ ಅದರ ಆಧಾರದ ಮೇಲೆ ಬೇರೆಯವರಿಗೆ ಇಲ್ಲಿಯೇ ಅವರ ರಾಜಧಾನಿ ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಡಬಾರದು. ಈ ದೃಷ್ಟಿಯಿಂದ ನಾವೂ ನೀವೂ ಆಲೋಚನೆ ಮಾಡೋಣ, ನಿಮ್ಮಲ್ಲಿ ನಮಗೆ ಇರುವ ಪ್ರೇಮದಿಂದ ನಿಮ್ಮನ್ನು ಹೊರಗೆ ಕಳುಹಿಸುವುದು ನಮಗೆ ಇಷ್ಟವಿಲ್ಲ, ನಮ್ಮನ್ನು ಬಿಟ್ಟುಹೋಗಬೇಡಿ, ಎಂದು ಕೇಳುತ್ತೇವೆ. ಏಕೆಂದರೆ ನೀವು ಸೋಷಿಯಲಿಸ್ಟ್ ಪ್ಯಾಟರ್ನ್ ಆಫ್ ಸೊಸೈಟಿಯಲ್ಲಿ ಪೂರ್ಣ ನಂಬಿಕೆ ಇಟ್ಟುಕೊಂಡಿರುವ ಜನರು. ಈ ಸಮಸ್ಯೆಯನ್ನೆದುರಿಸುವುದಕ್ಕೆ ನಮಗೆ ನಿಮ್ಮ ಬೆಂಬಲ ಬೇಕು, ಶ್ರೀಮಂತರ ಮತ್ತು ಬಂಡವಾಳಶಾಹಿಗಳ ಅಟ್ಟಹಾಸವನ್ನು ಇಳಿಸುವುದಕ್ಕೆ ನಿಮ್ಮ ಸಹಾಯ ನಮಗೆ ಬೇಕು ಎಂದು ನಮ್ಮ ಸೋದರರನ್ನು ಕೇಳುತ್ತೇನೆ. ಇದೇ ಸಂದರ್ಭದಲ್ಲಿ ನಮ್ಮ ಸರಕಾರಕ್ಕೆ ಒಂದು ಮಾತನ್ನು ಹೇಳುತ್ತೇನೆ. ನಮ್ಮ ಮಹಾರಾಷ್ಟ್ರ ಗಡಿ ಪ್ರದೇಶದ ಜನರು ನೀವು ನಮ್ಮನ್ನು ಸರಿಯಾಗಿ ನಡೆಸುವುದಿಲ್ಲವೆಂದು ಹೇಳುತ್ತಾರೆ. ಇದು ಗಡಿ ಪ್ರಶ್ನೆಗೆ ಸಂಬಂಧಪಟ್ಟುದಲ್ಲ. ಅವರನ್ನು ಸರಿಯಾಗಿ ನಡೆಸಬೇಕೆನ್ನುವ ಪ್ರಶ್ನೆಯಾದರೆ ನಾನೂ ಕೂಡ ಆ ಜನರ ಜೊತೆಗಿರುತ್ತೇನೆ. ನಾವಿಬ್ಬರೂ ಕೂಡಿ ಈ ವಿಷಯದಲ್ಲಿ ಸರಕಾರದೊಡನೆ ಜಗಳವಾಡೋಣ. ಅವರಿಗೆ ಏನು ಸೌಲಭ್ಯ ಬೇಕೋ ಅದನ್ನು ಸರಕಾರ ಕೊಟ್ಟಿದ್ದಾರೆಯೆ ? ಎನ್ನುವುದನ್ನು ನೋಡಬೇಕು. ಮೊನ್ನೆ ಒಂದು ಪ್ರಕರಣ ಸೊಲ್ಲಾಪುರದಲ್ಲಿ ನಡೆಯಿತು. ಅಕ್ಕಲಕೋಟೆಯಲ್ಲಿ ಒಂದು ಕನ್ನಡಶಾಲೆಯನ್ನು ಪ್ರಾರಂಭ ಮಾಡುವ ಕಾಲಕ್ಕೆ ಮಹಾರಾಷ್ಟ್ರದ ಉಪಮಂತ್ರಿಗಳೊಬ್ಬರು ಬಂದಾಗ ಆ ಶಾಲೆಯಲ್ಲಿ ಎಲ್ಲವೂ ಕನ್ನಡದಲ್ಲಿ ಬರೆದಿದ್ದುದನ್ನು ನೋಡಿ, ಇದೇನು ಕನ್ನಡರಾಜ್ಯವೆ ಎಂದು ಕೇಳಿದ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು.

ಇದು ಕರ್ನಾಟಕ ಎಂದು ತಿಳಿದುಕೊಂಡಿದ್ದೀರಾ ಏನು ? ಎಂದು ಅವರು ಕೇಳಿದರಂತೆ. ಮಹಾರಾಷ್ಟ್ರದ ಒಬ್ಬ ಉಪಮಂತ್ರಿ ಹೇಳಿದಂತೆ ಹೀನಾಯವಾಗಿ ಮಾತನಾಡಿದಂತೆ ಇನ್ನೊಬ್ಬರ ಮನಸ್ಸು ನೋಯಿಸುವರೀತಿಯಲ್ಲಿ ಮಾತನಾಡಿದಂತೆ ನಮ್ಮ ರಾಜ್ಯದಲ್ಲಿ ಯಾರಾದರೂ ಮಂತ್ರಿಯಾಗಲಿ ಉಪಮಂತ್ರಿಯಾಗಲಿ ಮಾತನಾಡಿದ್ದಾರೆಯೇ ? ಹೇಳಿ ನೋಡೋಣ. ಶಾಸನ ಸಭೆಯ ಸದಸ್ಯರೊಬ್ಬರು ಹಾಗೆ ಮಾತನಾಡಿದ್ದಾರೆಯೇ ? ಹೇಳಿ ನೋಡೋಣ. ದೊಡ್ಡ ಮನಸ್ಸು ಉದಾರ ಭಾವನೆ ವಿನಯಶೀಲತೆ ಸೌಜನ್ಯ ಮುಂತಾದ ದೊಡ್ಡ ಗುಣಗಳು ಇದ್ದರೆ ಅವು ಕರ್ನಾಟಕದಲ್ಲಿ ಕನ್ನಡಿಗರಲ್ಲಿ ಇದೆ. ಕನ್ನಡಿಗರ ರಕ್ತದಲ್ಲಿ ಇದೆ. ದೊಡ್ಡ ಗುಣಗಳ ಒಂದು ಹೆಚ್ಚಿನ ಶಕ್ತಿ ಕನ್ನಡಿಗರಲ್ಲಿ ಇದೆ. ಇದುವರೆಗಿನ ಕರ್ನಾಟಕದ ಇತಿಹಾಸ ನೋಡಿದರೆ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಮಹಾರಾಷ್ಟ್ರದ ಇತಿಹಾಸವನ್ನೂ ನೋಡಿ. ಮಹಾರಾಷ್ಟ್ರ ಎಂಬ ಒಂದು ಮುಖ್ಯ ಸಮಾಜ ಕರ್ನಾಟಕದಲ್ಲಿದೆ. ನಮ್ಮ ಕರ್ನಾಟಕದಲ್ಲಿ ಅನೇಕ ಧರ್ಮಗಳನ್ನು ಅವಲಂಬಿಸುವವರು ಸಮಾಜದಲ್ಲಿ ಹೊಂದಿಕೊಂಡು ಇದ್ದಾರೆ. ಶೈವರು, ವೈಷ್ಣವರು, ಮುಸಲ್ಮಾನರು ಇದ್ದಾರೆ. ನಾನು ಸೊಲ್ಲಾಪುರಕ್ಕೆ ಹೋದಾಗ್ಗೆ ಅಲ್ಲಿಯ ಮುಸಲ್ಮಾನರ ಅಭಿಪ್ರಾಯ ಕೇಳಿಕೊಂಡಿದ್ದೇನೆ. ಆ ವಿಷಯ ಇಲ್ಲಿ ಹೇಳುವುದಿಲ್ಲ. ಬ್ರಾಹ್ಮಣರ ಅಭಿಪ್ರಾಯ ತಿಳಿದುಕೊಂಡಿದ್ದೇನೆ. ಮಹಾತ್ಮಾ ಗಾಂಧೀಜಿಯವರ ಕೊಲೆಯ ನಂತರ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಜಾಳಪೋಳವಾದಾಗ್ಗೆ ಎಷ್ಟೆಷ್ಟು ಹಾನಿಯಾಗಿವೆ ಎಂಬುದನ್ನು ಎನ್‌ಕ್ವಾಯರಿ ಮಾಡುವುದಕ್ಕಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯವರು ನೇಮಕ ಮಾಡಿದ ಸಮಿತಿಯ ಸದಸ್ಯರಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆನು. ಅನೇಕ ಮಹಾರಾಷ್ಟ್ರದ ಬ್ರಾಹ್ಮಣರು ನನಗೆ ಹೇಳಿದ್ದಾರೆ. ನಾವು ಕರ್ನಾಟಕದಲ್ಲಿ ಸುರಕ್ಷಿತವಾಗಿ ಇರುತ್ತೇವೆ. ನಾವು ಮಹಾರಾಷ್ಟ್ರಕ್ಕೆ ಹೋಗುವುದಿಲ್ಲ. ನಾವು ಮಹಾರಾಷ್ಟ್ರಕ್ಕೆ ಹೋದರೆ ನಮ್ಮ ಗತಿ ಏನು ? ಎಂದು ಅವರು ಹೇಳಿದ್ದಾರೆ. ಇದಕ್ಕೆ ಆಗ್ಗೆ ಉಂಟಾದ ಕೊಲೆ ಸುಲಿಗೆ ಬೆಂಕಿ ಹಚ್ಚಿ ಸುಟ್ಟುಹಾಕುವುದು ಇವುಗಳಿಗೆ ತುತ್ತಾಗಿ ಹಾನಿಗೊಳಗಾದ ಪ್ರತಿಯೊಂದು ಓಣಿ, ಮರಾರು ಹಳ್ಳಿ ಸಾಕ್ಷಿ ಹೇಳುತ್ತವೆ. ನಮ್ಮನ್ನು ಮಹಾರಾಷ್ಟ್ರಕ್ಕೆ ಕಳಿಸಬೇಡಿ ಎಂದು ಅವರು ಹೇಳಿದ್ದನ್ನು ನಾನು ಕಿವಿಯಿಂದ ಕೇಳಿದ್ದೇನೆ. ಕರ್ನಾಟಕದಲ್ಲಿ ಎಲ್ಲರಿಗೂ ಸುರಕ್ಷಿತತೆ ಇದೆ. ಕನ್ನಡಿಗರು ಅತ್ಯಂತ ತಾಳ್ಮೆಯುಳ್ಳವರು, ಸಹನಶಕ್ತಿಯುಳ್ಳವರು ನಮ್ರತೆಯಿಂದ ಸೌಜನ್ಯದಿಂದ ನಡೆಸಿಕೊಳ್ಳುತ್ತಾರೆ, ಸಮಾಜದಲ್ಲಿ ಸಮತಾವಾದ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ. ಇಂಥ ಕರ್ನಾಟಕ ಬಿಟ್ಟುಹೋಗುವುದಕ್ಕೆ ನಿಮಗೆ ದೇವರು ಹೇಗೆಮನಸ್ಸು ಕೊಡುತ್ತಾನೆ ? ಎಂದು ಕೇಳುತ್ತೇನೆ. ಆ ರೀತಿ ಬಿಟ್ಟುಹೋಗುವುದಕ್ಕೆ ಮನಸ್ಸು ಮಾಡಬೇಡಿ. ನಿಮ್ಮ ಸಮತಾವಾದ ನಮಗೆ ಬೇಕು. ಹೆಚ್ಚಾಗಿ ಚರ್ವಿತ ಚರ್ವಣ ಮಾಡದೆ ಹೆಚ್ಚಾಗಿ ಘರ್ಷಣೆ ಮಾಡದೆ ಈ ಠರಾವನ್ನು ವಾಪಸ್ಸು ತೆಗೆದುಕೊಂಡರೆ ನನ್ನ ತಿದ್ದುಪಡಿ ತಾನಾಗಿಯೇ ಬಿದ್ದುಹೋಗುತ್ತದೆ. ಆದುದರಿಂದ ನಾನು ಮತ್ತೊಮ್ಮೆ ಮಾನ್ಯ ಸದಸ್ಯರಾದ ಶ್ರೀ ಪಾಟೀಲರವರಿಗೆ ವಿನಂತಿ ಮಾಡಿಕೊಳ್ಳುವುದು ಏನೆಂದರೆ ತಮ್ಮ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಬೇಕು. ಎಂದು ಹೇಳುತ್ತೇನೆ.

†ಶ್ರೀ ಗೋಪಾಲ ಸಾಲೆನ್ಸ್ (ಮೂಡಬಿದ್ರಿ).—ಈಗ ಸಭೆಯ ಮುಂದೆ ಇರುವ ನಿರ್ಣಯದಲ್ಲಿ ಹೇಳಿರುವ ಗಡಿ ಪ್ರಶ್ನೆ ಮತ್ತು ಭಾಷಾ ಸಮಸ್ಯೆ ಒಂದು ದೊಡ್ಡ ಗೊಂದಲವನ್ನೇ ಎಬ್ಬಿಸಿದಂತಾಗಿದೆ. ಈ ವಿಚಾರ ಸಭೆಯ ಮುಂದೆ ಆಗಾಗ್ಗೆ ಬಂದಿದೆ. ಹೊರಗೂ ಕೂಡ ಜನರಲ್ಲಿ ದೊಡ್ಡ ವಿವಾದ ಎಬ್ಬಿಸಿದಂತಾಗಿದೆ. ಇಂಥ ವಿವಾದ ಬರಲೇಬಾರದಾಗಿತ್ತು. ಇದಕ್ಕಿಂತಲೂ ಮುಖ್ಯವಾದ ಅನೇಕ ಸಮಸ್ಯೆಗಳು ನಮ್ಮ ಮುಂದೆ ಇವೆ. ಇಂಥ ಸಮಸ್ಯೆಗೆ ಗಮನ ಕೊಟ್ಟು ಶ್ರಮ ವಹಿಸುವುದು ಏನೂ ಪ್ರಯೋಜನವಿಲ್ಲ. ನಾವು ಮೈಸೂರು ರಾಜ್ಯದ ಹಿತದೃಷ್ಟಿಯಿಂದ ಯೋಚನೆ ಮಾಡಬೇಕಾದುದು ಅಗತ್ಯ. ಇಂಥ ಸಣ್ಣ ಮನೋವೇದನೆಗೆ ಅವಕಾಶ ಕೊಡುವುದು ತಪ್ಪು. ಒಂದು ಕಡೆ ಮಹಾರಾಷ್ಟ್ರವಾದ ಇದೆ, ಇನ್ನೊಂದು ಕಡೆ ಕೇರಳ ಇದೆ. ಅಲ್ಲಿ ಉಳಿದವರಿಗೆ ತುಂಬಾ ವ್ಯಥೆಯಿಂದ ಗುಲಾಮಗಿರಿಯಲ್ಲಿ ಇದ್ದೇವೆ ಎಂಬ ಮನೋವೇದನೆ ಇದೆ. ಈ ವಿಚಾರ ಹೆಚ್ಚು ಜನ ಸ್ಪಷ್ಟಪಡಿಸಿದ್ದಾರೆ. ಗುಲಾಮಗಿರಿಯಲ್ಲಿ ಅವರು ಇದ್ದಾರೆ ಎಂಬುದು ಅವರಲ್ಲಿ ಏಕೆ ಉದ್ಭವಿಸಿದೆ ? ಅದನ್ನು ಹೇಗೆ ನಿವಾರಿಸಬೇಕು; ಎಂಬುದಕ್ಕೆ ಸರಕಾರ ಗಮನಿಸಿಲ್ಲ. ಒಬ್ಬ ಗುಮಾಸ್ತನ ನೇಮಕ ಒಬ್ಬ ಕಾಂಪೌಂಡರ ನೇಮಕ ಮಾಡಲಿಲ್ಲ ಎಂದು ಅವರು ಹೇಳಿದರು. ಇದರಿಂದ ಮರಾಠಿ ಜನರಿಗೆ ಅನ್ಯಾಯವಾಗಿದೆ ಎಂಬ ಅಭಿಪ್ರಾಯ ಅವರು ಸ್ಪಷ್ಟಪಡಿಸಿದರು. ಸರಕಾರ ಇಂಥ ಭಾವನೆ ಉಂಟಾಗುವುದಕ್ಕೆ ಏಕೆ ಅವಕಾಶ ಕೊಟ್ಟಿತು?ಎಂದು ನಾನು ಕೇಳುತ್ತೇನೆ. ಕನ್ನಡ ನಾಡು ಬಹು ಸುಂದರವಾಗಿದೆ ಚೆನ್ನಾಗಿದೆ ಎಂಬ ಅಭಿಪ್ರಾಯ ಶ್ರೀ ಪಾಟೀಲರವರು ಸಹ ಈ ಸಭೆಯಲ್ಲಿ ವ್ಯಕ್ತಪಡಿಸಿದ್ದಾರೆ. ಇಲ್ಲಿ ಅವರು ಸುಖವಾಗಿ ಇದ್ದಾರೆ. ಹೀಗೆ ಇದ್ದರೂ ಕೂಡ ಅವರು ಮಹಾರಾಷ್ಟ್ರಕ್ಕೆ ಹೋಗುವುದಕ್ಕೆ ಏಕೆ ಕುತೂಹಲ ಅವರಿಗೆ ಉಂಟು ? ಇಲ್ಲಿಯೇ ಅವರು ಏಕೆ ಉಳಿಯಬಾರದು ? ಸ್ವತಂತ್ರ ಮನೋವೃತ್ತಿಯಿಂದ ಜೀವನ ಮಾಡಲು ಆಗುವುದಿಲ್ಲ ಎಂಬ ಅಭಿಪ್ರಾಯ ಹರಡಿಕೊಂಡು ಮುಂದೆ ಅವರು ಸಾಗುತ್ತಿದ್ದಾರೆ. ಸಾಮಾನ್ಯವಾಗಿ ಈ ಜನ ಉದ್ರೇಕಗೊಂಡು ಇರುವುದರಿಂದ ಅಲ್ಲಿಯ ಸಮಸ್ಯೆ ಇನ್ನೂ ಬಿಗಿಯಾಗಬಹುದು. ಇದೇ ರೀತಿಯಾಗಿ ಮೈಸೂರಿಗೆ ಕಾಸರಗೋಡಿನ ಸಮಸ್ಯೆ ಇದೆ. ಕಾಸರಗೋಡ ಸಮಸ್ಯೆಯನ್ನು ಸುಲಭವಾದ ರೀತಿಯಲ್ಲಿ ಬಗೆಹರಿಸಬೇಕು. ಈ ಗಡಿ ಸಮಸ್ಯೆಯಲ್ಲಿ ಯಾರೂ ಪರದೇಶಕ್ಕೆ ಹೋಗತಕ್ಕಂಥವರು ಇಲ್ಲ. ನಮ್ಮ ಭಾರತ ದೇಶದಲ್ಲಿಯೇ ಎಲ್ಲರೂ ಇರತಕ್ಕಂಥವರು ಆಗಿದ್ದಾರೆ. ಒಂದು ವೇಳೆ ಸದ್ಯಕ್ಕೆ ಕಾಸರಗೋಡು ಕೇರಳ ರಾಜ್ಯದಲ್ಲಿ ಇದ್ದರೂ ಕೂಡ ಅವರು ನಮ್ಮಲ್ಲಿಯೇ ಇರುತ್ತಾರೆ. ಆದುದರಿಂದ ನಾನು ಒಂದು ಮಾತು ಹೇಳಲು ಇಷ್ಟಪಡುತ್ತೇನೆ. ಯಾರೂ ಸಂಕುಚಿತ ಮನೋಭಾವನೆ ಇಟ್ಟುಕೊಂಡು ವಾದ ಹೂಡತಕ್ಕಂಥಾದ್ದು ಸರಿಯಲ್ಲ. ಈ ರಾಜ್ಯದಲ್ಲಿ ಬದುಕಲು ಸಾಧ್ಯವಿಲ್ಲ ಎಂದು ಹೇಳುವುದು ಸರಿಯಲ್ಲ. ಈ ರಾಜ್ಯದಲ್ಲಿ ಉಳಿದರೆ ಏಕೆ ಹೆದರಬೇಕು ? ಒಟ್ಟಿನಲ್ಲಿ ಈ ಸಮಸ್ಯೆ ಬಗೆಹರಿಸಲು ಎಲ್ಲರೂ ಸಹಾಯಕರಾಗಬೇಕು. ನಾವು ಯಾವಾಗಲೂ ಒಂದೇ ಸಮಸ್ಯೆ ಬಿಡಿಸುವಾಗ್ಗೆ ಹೊಂದಿಕೊಂಡು ಹೋಗಬೇಕು. ಗುಲಾಮಗಿರಿಯಲ್ಲಿ ಇದ್ದೇವೆ ಎಂದು ವಾದಿಸುವುದು ಸರಿಯಲ್ಲ. ಇದಲ್ಲದೆ ನಮ್ಮ ರಾಜ್ಯದ ಮಂತ್ರಿಮಂಡಲದಲ್ಲಿ 27 ಜನ ಮಂತ್ರಿಗಳು ಇದ್ದಾರೆ. ಅವರ ಪೈಕಿ ಒಬ್ಬರನ್ನು ಮಂತ್ರಿಯನ್ನಾಗಿ ಏತಕ್ಕೆ ತೆಗೆದುಕೊಳ್ಳಬಾರದು ? ಅವರಲ್ಲಿ ಒಬ್ಬರು ಮಂತ್ರಿಯಾದರೆ ಸಮಸ್ಯೆ ಸುಲಭವಾಗಿ ಬಗೆಹರಿಯುವುದು.

ಶ್ರೀ ಬಿ. ಪಿ. ಕದಂ.—ಇಂಥ ಅಧಿಕಾರದ ಹುದ್ದೆ ನಮಗೆ ಬೇಡ.

ಶ್ರೀ ಗೋಪಾಲ ಸಾಲೆನ್ಸ್.—ಹಾಗಾದರೆ ಗುಲಾಮಗಿರಿ ಮನೋಭಾವನೆ ಏತಕ್ಕೆ ಇರಬೇಕು ಸರಕಾರದ ಆಡಳಿತದಲ್ಲಿ ಅವರಿಗೆ ಸರಿಯಾದ ಭಾಗ ಏತಕ್ಕೆ ಕಲ್ಪಿಸಿ ಕೊಡಬಾರದು ? ಚುನಾವಣೆಯಲ್ಲಿ ಜನತೆ ಅವರಿಗೆ ಓಟು ಹಾಕಿ ಇಲ್ಲಿಗೆ ಅವರನ್ನು ಏತಕ್ಕೆ ಕಳಿಸಿದ್ದಾರೆ ? ಈ ಬಗ್ಗೆ ನಾನು ಒಂದು ಮಾತು ಹೇಳುತ್ತೇನೆ. ಭಾಷೆಯ ಸಮಸ್ಯೆ ಮೇಲೆ ಚುನಾವಣೆಯಲ್ಲಿ ಯಶಸ್ಸು ಗಳಿಸುವುದು ಬಹು ಸುಲಭ. ತುಳುಭಾಷೆಯ ರಾಜ್ಯ ಬೇಕೆಂದು ತುಳು ಭಾಷೆಯ ಸಮಸ್ಯೆಯನ್ನು ಮುಂದಿಟ್ಟುಕೊಂಡು ಚುನಾವಣೆಯಲ್ಲಿ ಯಾವ ಪಕ್ಷದವರನ್ನು ಎದುರಿಸಿದರೂ ನಾವು ಗೆದ್ದುಬರುತ್ತೇವೆ ಎಂದು ನನಗೆ ಭರವಸೆ ಇದೆ. ತಮಿಳು ನಾಡಿನಲ್ಲಿ ದ್ರಾವಿಡ ಮುನ್ನೇತ್ರ ಕಜಗಂ ಪಕ್ಷದವರು ಇಂಥ ಒಂದು ಸಮಸ್ಯೆಯನ್ನು ಮುಂದಿಟ್ಟುಕೊಂಡು ಚುನಾವಣೆಯಲ್ಲಿ ಜಯ ಸಂಪಾದಿಸಿದ್ದಾರೆ. ಕರ್ನಾಟಕದಲ್ಲಿ ಸಹ ಚುನಾವಣೆಗಳನ್ನ ನಾನು ನೋಡಿದ್ದೇನೆ.

ಆದ್ದರಿಂದ ನಾವು ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆ, ನಮಗೆ ಜನಗಳ ಬೆಂಬಲ ಇದೆಯೆಂದು ತಿಳಿದುಕೊಂಡು, ಹೊಸ ಸಮಸ್ಯೆಗಳನ್ನು ಜನಗಳಲ್ಲಿ ತಂದುಹಾಕಿ, ಆಂದೋಳನ ಹೂಡುವುದು, ಸ್ಥಾನಮಾನಗಳನ್ನು ಹೋರಾಟಕ್ಕೆ ಉಪಯೋಗಿಸಿಕೊಳ್ಳುವುದು ಬಹಳ ದುಃಖಾಸ್ಪದವಾದ ವಿಚಾರ. ಆದ್ದರಿಂದ ಈ ಸಮಸ್ಯೆಯನ್ನು ಬಹಳ ಸ್ಥೂಲವಾಗಿ ಪರಿಶೀಲಿಸಬೇಕಾಗಿದೆ. ನಮ್ಮ ರಾಷ್ಟ್ರದ

(ಶ್ರೀ ಗೋಪಾಲ ಸಾಲೆನ್ನ)

ನಾಯಕರು, ನಮ್ಮ ರಾಜ್ಯದ ನಾಯಕರು ಈ ಸಮಸ್ಯೆ ಬಗ್ಗೆ ವಿಶಾಲ ದೃಷ್ಟಿ ತೆಗೆದು ಕೊಳ್ಳಬೇಕು. ಮಹಾರಾಷ್ಟ್ರದಲ್ಲಿರುವ ಕನ್ನಡಿಗರೂ ಇದೇ ರೀತಿ ವಾದಿಸಿ, ಇದಕ್ಕಾಗಿ ಆಂಧೋಳನ ಹೂಡಿ, ಒಂದು ದೊಡ್ಡ ಗೊಂದಲ ಎಬ್ಬಿಸಿ, ಒಂದು ಸಮಸ್ಯೆಯನ್ನು ಕಲ್ಪಿಸಬಹುದು. ಆದ್ದರಿಂದ ಈ ತರಹ ಮನೋಭಾವನೆಯನ್ನು ಬೆಳಸಲಿಕ್ಕೆ ಅವಕಾಶ ಕೊಡಬಾರದು. ಲಕ್ಷಾಂತರ ಜನ ಮೈಸೂರಿನವರು ಮಹಾರಾಷ್ಟ್ರದಲ್ಲಿ ಸುಖಜೀವನ ಮಾಡುತ್ತಿದ್ದಾರೆ. ಅದೇ ರೀತಿ, ಮಹಾರಾಷ್ಟ್ರದಲ್ಲಿಯೂ, ಮೈಸೂರಿನಲ್ಲಿಯೂ ಅನೇಕ ಜನ ತಮಿಳರೂ, ತೆಲುಗು ಮಾತನಾಡುವ ಜನರೂ ಸುಖಜೀವನ ನಡೆಸುತ್ತಿದ್ದಾರೆ. ಆದ್ದರಿಂದ ಈ ಸಮಸ್ಯೆಗೆ ಅವಕಾಶವೇ ಇಲ್ಲ. ಈ ಸಮಸ್ಯೆಯನ್ನು ಬಹಳ ವಿಶಾಲ ದೃಷ್ಟಿಯಿಂದ ಮಹಾರಾಷ್ಟ್ರವಾದಿಗಳೂ, ಮೈಸೂರುವಾದಿಗಳೂ ಬಗೆಹರಿಸಲು ಪ್ರಯತ್ನಿಸಬೇಕಾಗಿದೆ.

ಇನ್ನೊಂದು ವಿಚಾರವೇನೆಂದರೆ—ದೊಡ್ಡಮೇಟಿಯವರ ಬಹಳ ಉದ್ದವಾದ, ವಿವರವಾದ ಭಾಷಣ, ರಾಜ್ಯವನ್ನು ಕರ್ಣಾಟಕ ಎಂದು ಕರೆಯಬೇಕೆಂಬ ಬಗ್ಗೆ ಮಾಡಿದರು. ನಾನಾದರೂ ಕೇಳುತ್ತೇನೆ— ನಾವು ಇಲ್ಲಿಗೆ ರಾಜ್ಯ ಪುನರ್ವಿಂಗಡಣೆಯಾಗಿ ಬಂದಾಗ, ವಿಶಾಲ ಕರ್ಣಾಟಕವಾಗಿ ಬಂದಿದ್ದೇವೆ. ಆದರೂ ಮೈಸೂರು ಎಂಬ ಹೆಸರನ್ನು ಬದಲಾಯಿಸಲಿಕ್ಕೆ ನಿಮಗೆ ಹೆದರಿಕೆ ಇದೆ. ನಿಮ್ಮಲ್ಲಿ ಕರ್ಣಾಟಕ ಎಂದು ಬದಲಾಯಿಸುವುದಕ್ಕೆ ಮಾರಲ್ ಸ್ಟ್ರೆಂಗ್ತ್ ಇದೆಯೋ ! ನಾವು ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಯಾವ ಗುಲಾಮಗಿರಿಯಲ್ಲಿದ್ದೆವೆಂದು ಭಾವಿಸಿದ್ದೆವೋ, ಈಗಲೂ ಅದೇ ಗುಲಾಮಗಿರಿಯಲ್ಲಿ ನಮ್ಮನ್ನು ಇಟ್ಟಿದ್ದೀರ ಎಂದು ನಾವು ಭಾವಿಸುತ್ತಿದ್ದೇವೆ. ಇದಕ್ಕೆ ನಾವು ಬಹಳ ದುಃಖಪಡುತ್ತಿದ್ದೇವೆ. ನಿಮಗೆ ಆಳುವ ಪಕ್ಷಕ್ಕೆ ಈ ಸಭೆಯಲ್ಲಿ ಇಷ್ಟು ಬಹುಮತವಿದೆ, ಎಲ್ಲಿ, ರಾಜ್ಯದ ಹೆಸರನ್ನು ಬದಲಾಯಿಸುವುದಕ್ಕೆ ನಿಮಗೆ ಧೈರ್ಯ ಉಂಟೋ ? ನೋಡಿ, ನಾವು ಹಳೆಯ ಮೈಸೂರಿಗೆ ಗುಲಾಮರಾಗಿದ್ದೇವೆ. ಈ ಗುಲಾಮಗಿರಿಯಲ್ಲಿ ಇನ್ನು ಉಳಿಯಲಿಕ್ಕೆ ಸಾಧ್ಯವಿಲ್ಲ, ಇದನ್ನು ಹೋಗಲಾಡಿಸಿ. ನೀವು ದೃಢ ನಿರ್ಧಾರವನ್ನು ತೆಗೆದುಕೊಂಡು ಒಂದು ಕರ್ಣಾಟಕ ರಾಜ್ಯವನ್ನು ಸ್ಥಾಪಿಸುತ್ತೀರ! ಈ ರಾಜ್ಯಕ್ಕೆ ಕರ್ಣಾಟಕವೆಂಬ ಹೆಸರನ್ನು ಯಾವಾಗ ತರುತ್ತೀರ? ಕರ್ಣಾಟಕವನ್ನು ಯಾವಾಗ ಸ್ಥಾಪಿಸುತ್ತೀರ ಅನ್ನುವುದನ್ನು ಹೇಳಿ. ಇವತ್ತು ಹಳೇ ಮೈಸೂರಿನ ಕೆಲವರ ಸಂಕುಚಿತ ಭಾವನೆಗೆ ಬಾಗಿ, ಗುಲಾಮಗಿರಿಯಲ್ಲಿ ಈ ಸಭೆಯನ್ನು ಇಟ್ಟಿದ್ದೀರ. ನಿಮಗೆ ಯಾರ ಅಂಜಿಕೆ ? ಈ ಗುಲಾಮ ಮನೋವೃತ್ತಿಯನ್ನು ಬದಲಾವಣೆ ಮಾಡಿಕೊಂಡು ರಾಜ್ಯದ ಹೆಸರನ್ನು ವಿಶಾಲ ಕರ್ಣಾಟಕ ಎಂದಿಟ್ಟು ಕನ್ನಡಿಗರ ಮನಸ್ಸನ್ನು ಸಂತೋಷಪಡಿಸಿ. ಈ ಅಲ್ಪಸಂಖ್ಯಾತರ ಭಾಷೆ ಯಾವುದಿದೆಯೋ, ಅದಕ್ಕೆ ಘಟನೆಯಲ್ಲಿ ರಕ್ಷಣೆ ಕೊಟ್ಟಿದೆ. ಆದರೂ ನಾನು ಮೊದಲೇ ಹೇಳಿದಂತೆ, ಭಾಷಾ ಮೈನಾರಿಟೀಸ್ ಪ್ರತಿನಿಧಿಗಳಿಗೆ ಮಂತ್ರಿಮಂಡಳದಲ್ಲಿ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟು, ಭಾಷಾ ಮೈನಾರಿಟೀಸ್ ರಕ್ಷಣೆಯನ್ನು ಅವರೇ ಮಾಡಿಕೊಳ್ಳುವ ಅವಕಾಶ ಅವರಿಗೆ ಸಿಗಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಎ. ಕರಿಲಿಂಗಣ್ಣನವರ್ (ಗೋಕಾಕ-1).—ಅಧ್ಯಕ್ಷರೇ, ಏನು ನನ್ನ ಮರಾಠಿ ಸ್ನೇಹಿತರು ನಿರ್ಣಯ ತಂದಿದ್ದಾರೊ ಅದನ್ನು ಸಂಪೂರ್ಣವಾಗಿ ವಿರೋಧಿಸುತ್ತಾ, ಮತ್ತು ಶ್ರೀಮಾರ್ದೊಡ್ಡಮೇಟಿಯವರು ಅದಕ್ಕೆ ಏನು ಅಮೆಂಡ್‌ಮೆಂಟು ತಂದಿದ್ದಾರೋ ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ನನ್ನ ಮರಾಠಿ ಬಂಧುಗಳಿಗೆ ನಾಲ್ಕು ಹಿತೋಪದೇಶದ ಮಾತುಗಳನ್ನು ಹೇಳಬೇಕೆಂದು ಬಯಸುತ್ತೇನೆ. ನಮ್ಮ ಮರಾಠಿ ಸ್ನೇಹಿತರು ಒಳ್ಳೆಯವರು ; ಅವರ ಜೊತೆಗೆ ನನ್ನ ನಿಕಟ ಸಂಪರ್ಕ ಕಳೆದ ಸುಮಾರು 7 ವರ್ಷಗಳಿಂದ ಇದೆ, ಅವರೆಲ್ಲರೂ ಉತ್ತಮವಾದ ಕನ್ನಡ ಮಾತನಾಡುತ್ತಾರೆ. ಆದರೆ ಅವರಲ್ಲಿ ಒಂದು ಹಠವಾದಿತನ ಇದೆ. ಆ ಹಠವಾದಿತನವನ್ನು ಅವರು ಬಿಟ್ಟರೆ ಅವರಿಗೆ ಬಹಳ ಒಳ್ಳೆಯ ಹೆಸರು ಬರುತ್ತದೆ. ಈ ಹಠವಾದಿತನವನ್ನು ಬಿಡಬೇಕೆಂದು ಈ 4-5 ಮಂದಿ ಜನರೇನಿದ್ದಾರೆ ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ತಮಗೆ ಮುಂದಿನ ಎಲೆಕ್ಷನ್ನಿನಲ್ಲಿ ಚುನಾಯಿತರಾಗಿ ಈ ಸಭೆಯ ಮೆಂಬರಾಗಬೇಕೆಂಬ ಇಚ್ಛೆ ಇದ್ದರೆ, ತಾವು ವಿಶಾಲ ಕರ್ಣಾಟಕದೊಳಗೆ 1967 ನೇ ಇಸವಿಯೊಳಗೆ ವಿಶಾಲಕರ್ಣಾಟಕ ದೃಷ್ಟಿ ಇಟ್ಟುಕೊಂಡು ಎಲೆಕ್ಷನ್ನಿಗೆ ನಿಲ್ಲಿ, ತಮಗೆ ಬಹುಮತ ದೊರಕಿಸಿಕೊಟ್ಟು ಪುನಃ ತಾವು ಆರಿಸಿ ಬರುವುದಕ್ಕೆ ನಾವು ಪ್ರಯತ್ನ ಪಡುತ್ತೇವೆ. ಆದ್ದರಿಂದ ತಾವು ಈ ಮಹಾರಾಷ್ಟ್ರ ಏಕೀಕರಣ ಸಮಿತಿ ಬಿಟ್ಟುಬಿಡಿ; ಆ ಸಮಿತಿಯ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ; ಅದರ ಮೂಲಕವೇ ಮೆಂಬರಾಗಿ ಬರಬೇಕೆಂಬ ಹಂಬಲವನ್ನು ಇನ್ನುಮೇಲೆ ಬಿಟ್ಟುಬಿಡಿ; ಎಂದು ಮತ್ತೆ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಅವರು ಕೇಳುತ್ತಿರುವ ಭಾಗಗಳು ಮಹಾರಾಷ್ಟ್ರಕ್ಕೆ ಸೇರಿದ್ದಲ್ಲ, ಅವು ಕರ್ಣಾಟಕ ಭಾಗ ಎಂದು ಪಣಿಕ್ಕರ್‌ರವರು ಹೇಳಿದ್ದಾರೆ. ಶ್ರೀ ವಿ.ಎಸ್.

ಪಾಟೀಲರು 1952ನೇ ಸೆನ್ಸಸ್ ಅಂಕೆ ಸಖ್ಯೆಂಗಳನ್ನು ಹೇಳಿದರು, ಆದರೇ ಅವರು ಈಗಿನ ಸೆನ್ಸಸ್ ಫಿಗರ್ಸ್ ನೋಡಿದರೆ, ಬೆಳಗಾಂನಲ್ಲಿ ಕನ್ನಡಿಗರ ಸಂಖ್ಯೆ ಮತ್ತು ಪರ್ಸೆಂಟೇಜ್ ಎಷ್ಟು ಏರಿದೆ ಎಂದು ಕೇಳಿದರೆ ನಮ್ಮ ಮಹಾರಾಷ್ಟ್ರ ಬಂಧುಗಳ ಎದೆ ಗಡಗಡ ನಡುಗುತ್ತದೆ. ಆದ್ದರಿಂದ ಅವರ ವಾದದಂತೆ ಸಂಖ್ಯೆ ಮೇಲೆ ಹೋದರೆ ದೇಶದ ಆಡಳಿತ ಚೆನ್ನಾಗಿ ನಡೆಯಲಾರದು. ಶ್ರೀ ಪಾಟೀಲರು ತಮ್ಮ ನಿರ್ಣಯ ವಾಪಸ್ಸು ತೆಗೆದುಕೊಂಡು ಕರ್ಣಾಟಕದಲ್ಲಿ ಸೇರಿಕೊಂಡು ಅವರ ಭಾಷಾವ್ಯಾಮೋಹವನ್ನು ಬಿಡಬೇಕು. ನಾವೆಲ್ಲಾ ಭಾರತೀಯರು, ಮೊದಲ ಭಾರತಾಂಬೆಯ ಮಕ್ಕಳು ಎಂಬ ದೃಷ್ಟಿಯನ್ನು ಇಟ್ಟುಕೊಳ್ಳಬೇಕು.

(Sri B. P. Kadam rose)

ಶ್ರೀ ಕದಂರವರಿಗೆ ಎಳ್ಳಷ್ಟೂ ತಾಳ್ಮೆ ಇಲ್ಲ. ಮನಸ್ಸಿನ ಸಮತೋಲನ ಕಳೆದುಕೊಂಡಿದ್ದಾರೆ.

Sri B. P. KADAM.—He says that I have lost balance of mind. On the other had, he has lost his balance......

ಶ್ರೀ ಎನ್. ಎ. ಕರಿಲಿಂಗಣ್ಣನವರ್.—ಅವರು ಮಾತನಾಡಿದಾಗ ನಾವು ತಾಳ್ಮೆಯಿಂದ ಕೇಳಿದೆವು. ನಾವು ಮಾತನಾಡುವುದನ್ನೂ ಅವರು ತಾಳ್ಮೆಯಿಂದ ಕೇಳಿಕೊಳ್ಳಬೇಕು. ತಮ್ಮ ಸರದಿ ಬಂದಾಗ ಮಾತನಾಡಿ, ನಾನು ಈಗ ಈಲ್ಡ್ ಆಗುವುದಿಲ್ಲ.

(Sri Kadam rose)

ನಾನು ಈಲ್ಡ್ ಆಗುವುದಿಲ್ಲ ಎಂದು ಹೇಳಿದ್ದೇನೆ, ಈಲ್ಡ್ ಆಗುವುದಿಲ್ಲ. ಕದಂರವರು ಹೇಳಿದರು—ಅವರು ಕರ್ಣಾಟಕದೊಳಗಿದ್ದರೆ ಗುಲಾಮಗಿರಿಯಲ್ಲಿರುತ್ತಾರೆಂದು. ಇಂಥ ಬುದ್ಧಿವಂತರು ಇಂಥ ಶಬ್ದಗಳನ್ನು ಆಡಿದರಲ್ಲಾ ಎಂದು ನಮಗೆ ಬಹಳ ದುಃಖವಾಗುತ್ತದೆ. ಇಂಥ ಡಬಲ್ ಗ್ರಾಜುಯೇಟ್ ಮಂದಿ ದಾಸ್ಯತ್ವದಲ್ಲಿದ್ದೇವೆಂದರೆ ಹೇಗೆ? (ಶ್ರೀ ಕದಂರವರ ಇಂಟರಪ್‌ಷನ್) ನಾವು ಭಾರತೀಯರು ಎಂದು ತಿಳಿದುಕೊಂಡು ಹೀಗೆ ಗೊಂದಲ ಮಾಡಬಾರದು. ಅವರೆಲ್ಲಾ ಮಾತನಾಡಿದ್ದನ್ನು ನಾವು ಇದುವರೆಗೂ ಸಾವಧಾನವಾಗಿ ಕೇಳಿದೆವು. ಅವರು ಇದನ್ನು ಸ್ವಲ್ಪ ವಿಚಾರ ಮಾಡಬೇಕು. ಅವರು ನಮ್ಮ ತಮ್ಮಂದಿರು, ಕರ್ಣಾಟಕದಲ್ಲಿ ಅಲ್ಪ ಸಂಖ್ಯಾತರು ಎಂದು ನಾವು ತಿಳಿದುಕೊಂಡಿದ್ದೇವೆ ಮತ್ತು ಅಲ್ಪಸಂಖ್ಯಾತರಿಗೆ ಹೆಚ್ಚು ಸೌಕರ್ಯಗಳನ್ನು ಒದಗಿಸಿದ್ದೇವೆ. ನಿಮ್ಮ ಸಲುವಾಗಿ ಎಲ್ಲ ಅನುಕೂಲತೆಗಳನ್ನೂ ಮಾಡಿಕೊಟ್ಟಿದ್ದೇವೆ; ನಿಮ್ಮನ್ನು ಪ್ರೇಮದೃಷ್ಟಿಯಿಂದ ನೋಡಿಕೊಳ್ಳುತ್ತಿದ್ದೇವೆ. ಆದ್ದರಿಂದ ನೀವು ಜಗಳವಾಡಬಾರದು. ನಾವು ಹೇಳುವುದನ್ನು ತಾಳ್ಮೆಯಿಂದ ಕೇಳಿಕೊಳ್ಳಬೇಕೆಂದು ಮತ್ತೊಮ್ಮೆ ಶ್ರೀ ಕದಂರವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಮಹಾರಾಷ್ಟ್ರಕ್ಕೆ ಹೋಗುವವರು ಎನ್ನುವ ಭಾವನೆಯನ್ನು ಬಿಟ್ಟುಕೊಟ್ಟುಬಿಡಿರಿ. ಇದು ಎಂದಿಗೂ ಸಾಧ್ಯವಾಗಲಿಕ್ಕಿಲ್ಲ. ಶ್ರೀ ಪಾಟೀಲರು ಭಾಗ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದರು. ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ತಾವು ಹೋಗಬೇಡಿ. ತಮ್ಮ ಹೃದಯಾಂತರಾಳದಿಂದ ತಿಳಿದುಕೊಳ್ಳಬೇಕು. ಉಳಿದ ಭಾಗಗಳಲ್ಲಿ ಮತ್ತು ಮರಾಠಿ ಭಾಗಗಳಲ್ಲಿ ಕನ್ನಡಿಗರನ್ನು ಹೇಗೆ ನೋಡಿಕೊಳ್ಳುತ್ತಿದ್ದಾರೆ ಮತ್ತು ಕರ್ಣಾಟಕ ಸರಕಾರ ನಿಮಗೆ ಎಷ್ಟು ಸವಲತ್ತು ಕೊಟ್ಟಿದೆ ಎಂಬುದನ್ನು ವಿಚಾರ ಮಾಡಿಕೊಳ್ಳಬೇಕು. ಇಷ್ಟು ಸವಲತ್ತು ನಿಮಗೆ ಇಲ್ಲಿ ಇದ್ದರೂ ಸಹಿತ ನೀವು ಇಲ್ಲಿಂದ ಹೋಗಬೇಕು ಅನ್ನುವುದು ಆಶ್ಚರ್ಯಕರ. ನೀವು ಹೋಗಬಾರದು ಎಂದು ಬೇಡಿಕೊಳ್ಳುತ್ತೇನೆ. ತಾವು ಈಗ ವಿಚಾರಮಾಡಿಕೊಳ್ಳಿ—ಮುಂಬೈನೊಳಗೆ 3 ಲಕ್ಷ ಕನ್ನಡಿಗರಿದ್ದಾರೆ. ಅವರ ಗತಿ ಏನಾಗಬೇಕು. ಇದರ ದೃಷ್ಟಿ ಇಟ್ಟುಕೊಂಡು ವಿಚಾರ ಮಾಡಿ.

Sri B. R. SUNTHANKAR.—Please quote the reference.

Sri B. P. KADAM.—There are only 50 thousand.

ಶ್ರೀ ಎಚ್. ಎ. ಕರಿಲಿಂಗಣ್ಣನವರ್.—ಅಲ್ಪ ಸಂಖ್ಯಾತರು ಮರಾಠಿ ಮಾತನಾಡತಕ್ಕವರು ಕರ್ಣಾಟಕದಲ್ಲಿ ಯಾರೂ ಇರಬಾರದು ಎಂದರೆ ಅದು ಹೇಗೆ ಸಾಧ್ಯವಾಗುತ್ತದೆ? ಅದೇ ರೀತಿ ಮಹಾರಾಷ್ಟ್ರದಲ್ಲಿ ಕನ್ನಡ ಮಾತನಾಡತಕ್ಕವರು ಅಲ್ಪ ಸಂಖ್ಯಾತರು ಯಾರೂ ಕೂಡ ಇರಬಾರದು ಎಂದರೆ ಅಲ್ಲಿರತಕ್ಕವರೆಲ್ಲಾ ಇಲ್ಲಿಗೆ ಬರಬೇಕಾಗುತ್ತದೆ. ಈ ರೀತಿ ವಿಚಾರ ಮಾಡತಕ್ಕದ್ದು ಬಹಳ ಕೆಳಮಟ್ಟದ ವಿಚಾರ. ಹೀಗೆ ವಿಚಾರ ಮಾಡದೇ ಇರಲು ನಿಮಗೆ ದೇವರು ಬುದ್ಧಿ ಕೊಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಶ್ರೀ ಬಿರ್ಜೆ ಮಾಸ್ತರ್‌ರವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಇಲ್ಲಿಂದ ಬಿಟ್ಟು ಹೋಗುವುದು ಅಲ್ಲಿರುವವರು ಇಲ್ಲಿಗೆ ಬರುವುದು ಇದೆಲ್ಲಾ ಸರಿಯಾದ ಕ್ರಮವಲ್ಲ. ಆಡಳಿತ ದೃಷ್ಟಿಯಿಂದ ಎಷ್ಟು ಅನಾನುಕೂಲವಾಗುತ್ತದೆ ಎಂಬುದನ್ನು ತಾವು ಈ ದಿನ ಸ್ವಲ್ಪ ವಿಚಾರ ಮಾಡಿ ನೋಡಬೇಕಾಗುತ್ತದೆ. ನಿಮ್ಮ

(ಶ್ರೀ ಎಚ್. ಎ. ಕರಿಲಿಂಗಣ್ಣನವರ್)

ನಾನು ಒಂದು ಉದಾಹರಣೆಯನ್ನು ಕೊಡಬೇಕಾದರೆ ನನ್ನ ಸ್ನೇಹಿತರು ಮಹಾರಾಷ್ಟ್ರದವರು ಕೆಲವರು ಇದ್ದಾರೆ, ಚಂದಗಡದ ತಾಲ್ಲೂಕಿನಲ್ಲಿ ಅವರು ಮಹಾರಾಷ್ಟ್ರಕ್ಕೆ ಹೋಗಿದ್ದಾರೆ. ಬೆಳಗಾಂ ಜಿಲ್ಲೆಯಲ್ಲಿ ಕಾಂಗ್ರೆಸ್ ಪಾರ್ಟಿಯ ಸದಸ್ಯರಾಗಿದ್ದರು, ಮಹಾರಾಷ್ಟ್ರಕ್ಕೆ ಹೋದಮೇಲೆ ನಾವು ಏಕಾದರೂ ಇಲ್ಲಿಗೆ ಬಂದೆವೋ ನಮಗೆ ಆಗಿರತಕ್ಕ ಕಷ್ಟ ನೋಡಿರಿ, ನಮ್ಮನ್ನು ಅಲ್ಲಿಗೆ ಕರೆಸಿಕೊಳ್ಳಿರಿ ಎಂದು ಅವರು ನನ್ನ ಹತ್ತಿರ ಹೇಳುತ್ತಾ ಇದ್ದರು. ಈ ರೀತಿ ಚಂದಗಡ ತಾಲ್ಲೂಕಿನವರು ಪಶ್ಚಾತ್ತಾಪ ಪಡುತ್ತಾ ಇದ್ದಾರೆ, ಇದೇ ಪ್ರಕಾರ ನಾಳೆಯ ದಿವ ನೀವೂ ಕೂಡ ಮಹಾರಾಷ್ಟ್ರಕ್ಕೆ ಹೋದಮೇಲೆ ಪಾಶ್ಚಾತ್ತಾಪ ಪಡಬೇಕಾದ ಸನ್ನಿವೇಶ ಒದಗೀತು ಎಂಬುದನ್ನು ತಿಳಿದುಕೊಳ್ಳಿರಿ. ಆ ಒಂದು ದೃಷ್ಟಿಯಿಂದ ನೀವು ಈಗ ತಂದಿರತಕ್ಕ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಿರಿ ಎಂದು ನಾನು ತಮ್ಮಲ್ಲಿ ಬಹಳ ಕಳಕಳಿಯಿಂದ ನೀವು 6-7 ಮಂದಿ ಏನಿದ್ದೀರಿ ನಿಮ್ಮನ್ನು ಕೇಳಿಕೊಳ್ಳುತ್ತೇನೆ, ಮತ್ತು ವಿಶಾಲ ಮೈಸೂರಿನೊಳಗೆ ನಿಮಗೆ ಎಲ್ಲಾ ರೀತಿಯಿಂದಲೂ ಸೌಕರ್ಯವನ್ನು ಒದಗಿಸಿಕೊಟ್ಟ ಸರ್ಕಾರ ಏನಿವೆ ಅದಕ್ಕೆ ನೀವು ಬಹಳವಾಗಿ ಉಪಕೃತರಾಗಿರಬೇಕೆಂದು ಹೇಳುತ್ತೇನೆ. ಮತ್ತು ಶ್ರೀಮಾನ್ ದೊಡ್ಡಮೇಟಿಯವರು ಇದಕ್ಕೆ ಯಾವ ಒಂದು ತಿದ್ದುಪಡಿಯನ್ನು ತಂದಿದ್ದಾರೆ ಅದು ಬಹಳ ಸಮಂಜಸವಾಗಿದೆ. ಅಂತಹ ಒಂದು ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳಲು ದೇವರು ನಿಮಗೆ ಬುದ್ಧಿಯನ್ನು ಕೊಡಲಿ ಎಂದು ಕೇಳಿಕೊಂಡು ನಿಮ್ಮ ನಿರ್ಣಯವನ್ನು ಬಹಳ ಕಟುವಾಗಿ ವಿರೋಧಿಸಿ ದೊಡ್ಡ ಮೇಟಿಯವರು ತಂದ ತಿದ್ದುಪಡಿಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಇಷ್ಟು ಮಾತನಾಡಲಿಕ್ಕೆ ಅನುವು ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಪೂಜ್ಯ ಅಧ್ಯಕ್ಷರೇ, ಇವತ್ತು ಈ ಬಾರ್ಡರ್ ವಿಷಯದಲ್ಲಿ ಏನು ನಿರ್ಣಯ ಬಂದಿದೆ ಇದನ್ನು ನೋಡಿದರೆ ಒಂದು ಕವಿತೆ ನೆನಪಿಗೆ ಬರುತ್ತದೆ: ಶಾಸನ ಇದೆಯೋ ಇಲ್ಲವೇ, ಆ ವಿಚಾರ ನಮಗೆ ಗೊತ್ತಿದೆಯೋ ಇಲ್ಲವೇ ಎಂಬ ರೀತಿಯಲ್ಲಿ ಈ ಒಂದು ನಿರ್ಣಯ ಬಂದಿದೆ. ಇದರಿಂದ ಯಾರ ಮನಸ್ಸಿನಲ್ಲೂ ಕೂಡ ವಾಸ್ತವಿಕವಾಗಿ ಸಮಾಧಾನ ಇಲ್ಲ ಎಂದು ಹೇಳುವಂತಹ ರೀತಿಯಲ್ಲಿ ಈ ನಿರ್ಣಯವನ್ನು ಇಟ್ಟಿರುವುದು ಸರ್ಕಾರಕ್ಕೂ ಮತ್ತು ಪ್ರಜೆಗಳಿಗೂ ಕೂಡ ಬಹಳ ವಿರುದ್ಧವಾಗಿದೆ. ಕಾಂಗ್ರೆಸ್ ಅಥವಾ ನಾನ್-ಕಾಂಗ್ರೆಸ್ ರೂಲಿಂಗ್ ಪಾರ್ಟಿ ಅಥವಾ ಆಪೋಜಿಷನ್ ಪಾರ್ಟಿ ಯಾವುದಕ್ಕೂ ಕೂಡ ಇದು ಸಂಬಂಧಪಟ್ಟದ್ದು ಅಲ್ಲ. ಇದು ಎಲ್ಲರಿಗೂ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಸರ್ಕಾರದ ವಿರುದ್ಧ ಈ ಬಗ್ಗೆ ಯಾವುದೇ ಆಕ್ಷೇಪಣೆ ಇದ್ದರೂ ಕೂಡ ಅವನ್ನು ಮಾನ್ಯತೆ ಮಾಡತಕ್ಕದ್ದಲ್ಲ. ನಾನಾದರೂ ಆಪೋಜಿಷನ್ ಮೆಂಬರಾಗಿ ಈಗ ಯಾವ ಒಂದು ವಿಚಾರ ನಡೆಯುತ್ತಾ ಇದೆ, ಈ ಯಾವ ಒಂದು ನಿರ್ಣಯ ಇವೆ ಇದನ್ನು ಪೂರ್ಣತಃ ಖಂಡನೆ ಮಾಡುತ್ತಾ ಇದ್ದೇನೆ. ಅಷ್ಟೇ ಅಲ್ಲದೆ ಯಾವ ಪ್ರಕಾರ ಈ ನಿರ್ಣಯವನ್ನು ಖಂಡನೆ ಮಾಡುತ್ತಾ ಇದ್ದೇನೆ ಅದೇ ಪ್ರಕಾರ ಈಗ 4–5 ವರ್ಷದಿಂದ ಇದರ ಬಗ್ಗೆ ಸರ್ಕಾರದ ಧೋರಣೆ ಏನಿದೆ ಅದನ್ನೂ ಕೂಡ ಖಂಡನೆ ಮಾಡುತ್ತಾ ಇದ್ದೇನೆ. ಸರ್ಕಾರದವರು ಅನುಸರಿಸಿರತಕ್ಕ ಧೋರಣೆಯಿಂದ ಈ ಪ್ರಶ್ನೆ ಆಗಿಂದಾಗ್ಗೆ ದೇಶದ ಮುಂದೆ ಬಂದು ಈ ರೀತಿಯ ಆಕ್ಷೇಪಣೆಗಳನ್ನು ಜನರು ಎತ್ತುವುದಕ್ಕೆ ಅವಕಾಶವಾಗಿದೆ. 1955–56ರ ವರೆಗೆ ಒಂದು ವರ್ಷದ ದಿವಸ ಫಜಲ್ ಅಲಿ ಕಮೀಷನ್ ಅವರು ದೇಶದಾದ್ಯಂತ ಸಂಚಾರ ಮಾಡಿ ಎಲ್ಲಾ ಸಂಸ್ಥೆಗಳವರನ್ನೂ, ಎಲ್ಲಾ ಸಂಸ್ಥಾನಗಳನ್ನೂ ಮತ್ತು ಅಲ್ಲಿರತಕ್ಕ ಸಮಾಜ ಜಾತಿಗಳು, ಪಕ್ಷಗಳು ಯಾವ ಯಾವುವು ಇವೆಯೋ ಅವುಗಳನ್ನೆಲ್ಲಾ ಭೇಟಿ ಮಾಡಿ ಒಂದು ನಿರ್ಣಯವನ್ನು ತೆಗೆದುಕೊಂಡರು. ಆ ಪ್ರಕಾರ ಒಂದು ನಿರ್ಣಯವನ್ನು ತೆಗೆದುಕೊಂಡಮೇಲೆ ಅದು ಪಾರ್ಲಿಮೆಂಟಿನ ಮುಂದೆ ಬಂದು ವಿಪುಲವಾಗಿ ಚರ್ಚೆಯಾದ ನಂತರ ಒಂದು ಆಕ್ಟ್ ಆಯಿತು. ಆಕ್ಟ್ ಆದನಂತರ ಮತ್ತೆ ಪುನಃ ಯಾವುದಾದರೂ ಪ್ರದೇಶಗಳವರು ತಮಗೆ ಏನಾದರೂ ಒಂದು ರೀತಿಯಲ್ಲಿ ತಮ್ಮ ಪ್ರಾಂತ್ಯವನ್ನು ಈ ಸಂಸ್ಥಾನದ ಜೊತೆಗೆ ಅಥವಾ ಆ ಸಂಸ್ಥಾನದ ಜೊತೆಗೆ ಸೇರಿಸಲು ಇಚ್ಛೆ ಪಟ್ಟರೆ ಅದರಂತೆ ಸೇರಲು ಅವಕಾಶವನ್ನು ಕಲ್ಪಿಸಿಕೊಡುತ್ತೇವೆ ಎಂಬ ಒಂದು ಅಭಿಪ್ರಾಯವನ್ನು ಆ ಜನಗಳಲ್ಲಿ ಉಂಟುಮಾಡುವುದಕ್ಕೆ ಈ ಸರ್ಕಾರದವರೇ ಜವಾಬ್ದಾರರು ಎಂದು ನಾನು ತಿಳಿಯುತ್ತೇನೆ. ಏಕೆಂದರೆ ಇದು ಒಂದು ಪಾರ್ಟಿಯವರ ಅಭಿಪ್ರಾಯದಂತೆ ಆಗಿರತಕ್ಕ ಕಾನೂನು ಅಲ್ಲ. ಫಜಲ್ ಅಲಿ ಕಮಿಷನ್ ಅವರು ದೇಶದಾದ್ಯಂತ ಸಂಚಾರ ಮಾಡಿದಾಗ ಬೀದರ್ ಜಿಲ್ಲೆಗೂ ಕೂಡ ಬಂದಿದ್ದರು. ಬೀದರ್ ಜಿಲ್ಲೆಯಲ್ಲೂ ಕೂಡ ಮೂರು ಭಾಷೆ ಮಾತನಾಡತಕ್ಕ ಜನ ಎಂದರೆ ಕನ್ನಡ, ಮರಾಠಿ ಮತ್ತು ತೆಲುಗು ಮಾತನಾಡತಕ್ಕ ಜನರಿದ್ದರು, ಅವರೆಲ್ಲರೂ ಕೂಡ ಆ ಸಮಯದಲ್ಲಿ ಒಗ್ಗಟ್ಟಾಗಿ ಒಂದು ನಿರ್ಣಯವನ್ನು ಪಾಸ್ ಮಾಡಿ ಆ ತಾಲ್ಲೂಕು ಬೀದರ್ ಜಿಲ್ಲೆಗೆ ಸೇರಬೇಕೆಂದು

ಹೇಳಿದರು. ಆ ಪ್ರಕಾರ ಅದು ಆಗಿನ ಹೈದರಾಬಾದ್ ಅಸೆಂಬ್ಲಿಯಲ್ಲೂ ಕೂಡ ಚರ್ಚೆಯಾಗಿ ನಿರ್ಣಯ ಪಾಯಿತು, ಅದರಂತೆ ಅವರೆಲ್ಲರೂ ಕೂಡ ಕರ್ಣಾಟಕ ರಾಜ್ಯಕ್ಕೆ ಬಂದರು. ಈಗ ಇವರು ಹೇಳುತ್ತಾ ಇರುವ ಮಾತುಗಳು ಬರೀ ಭಾಷೆಯ ಆಧಾರ ಒಂದೇ ಆಗಿದೆ. ಅದು ಒಂದನ್ನೇ ಪರಿಗಣನೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಆಡಳಿತ ಸೌಲಭ್ಯ, ಭೌಗೋಳಿಕ ದೃಷ್ಟಿ ಮತ್ತು ಆರ್ಥಿಕ ಸೌಲತ್ತು ಈ ಎಲ್ಲಾ ದೃಷ್ಟಿಗಳನ್ನೂ ಪರಿಶೀಲನೆಗೆ ತೆಗೆದುಕೊಂಡು ಒಂದು ತೀರ್ಮಾನಕ್ಕೆ ಬಂದದ್ದಾಗಿದೆ. ಆದ್ದರಿಂದ ಮತ್ತೆ ಈ ವಿಷಯದಲ್ಲಿ ಪ್ರವೇಶ ಮಾಡುವುದಕ್ಕೆ ಸರ್ಕಾರದವರಿಗೂ ಕೂಡ ಅಧಿಕಾರವಿಲ್ಲ, ಮತ್ತು ಆ ರೀತಿ ಮಾಡುವುದೂ ಕೂಡ ಸರಿಯಾದದ್ದಲ್ಲ. ಮಹಾರಾಷ್ಟ್ರ ಸರ್ಕಾರದವರಿಗಾಗಲಿ, ಆಂಧ್ರ ಸರ್ಕಾರದವರಿಗಾಗಲಿ, ಕೇರಳ ಸರ್ಕಾರದವರಿಗಾಗಲಿ ಈ ಪ್ರದೇಶ ವನ್ನು ಕೊಟ್ಟುಬಿಡಬೇಕೆಂದರೆ ಇವುಗಳು ಸರ್ಕಾರದವರಿಗೆ ಇರತಕ್ಕ ಜಹಗೀರಿಯೇನು ಎಂದು ನಾನು ಕೇಳಬೇಕಾಗುತ್ತದೆ. ನೀವು ಕೊಡುವವರೂ ಅಲ್ಲ, ಅವರು ತೆಗೆದುಕೊಳ್ಳುವವರೂ ಅಲ್ಲ. ಇದು ಜನತೆಗೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ಒಂದು ಸಲ ಎಲ್ಲಾ ವಿಚಾರಗಳನ್ನೂ ಕೂಲಂಕಷ ವಾಗಿ ಪರಿಶೀಲನೆ ಮಾಡಿ ಒಂದು ತೀರ್ಮಾನವನ್ನು ಮಾಡಿರುವ ಸಂದರ್ಭದಲ್ಲಿ ಇದನ್ನು ಮತ್ತೆ ಅದಲು ಬದಲು ಮಾಡುವುದು ಯಾವ ದೃಷ್ಟಿಯಿಂದಲೂ ಸರಿಯಲ್ಲ. ಇವತ್ತು ಕಾಂಗ್ರೆಸ್ ಪಕ್ಷದಲ್ಲಿ ಮತ್ತು ಇತರ ಪಕ್ಷಗಳಲ್ಲಿ ತೆಲುಗು, ಕನ್ನಡ, ಮರಾಠಿ ಮುಂತಾದ ಬೇರೆ ಬೇರೆ ಭಾಷೆಗಳನ್ನು ಮಾತನಾಡುವವರಿರಬಹುದು, ಅದೇ ರೀತಿಯಲ್ಲಿ ಇತರ ಪಕ್ಷಗಳಲ್ಲೂ ಇರಬಹುದು. ಆದರೆ ಒಂದು ಭಾಷೆಯವರಿಗಾಗಿ ಈಗ ಕೆಲವರು ಮಾತನಾಡುವುದನ್ನು ನೋಡಿದರೆ ಜಾತಿವಾದ ಮಾಡುವಂತೆ ಕಂಡುಬರುತ್ತದೆ, ಅದು ಸರಿಯಲ್ಲ. ಒಂದು ಸಾರಿ ನಿರ್ಣಯವಾದಮೇಲೆ ಕೆಲವು ಭಾಗಗಳು ಮತ್ತೆ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಹೇಳುವುದು, ವಾದ ಮಾಡುವುದು ಸರಿಯಲ್ಲ. ಈಗ ಮಾಡಿರುವ ವ್ಯವಸ್ಥೆ ಸರಿಯಾಗಿದೆ, ಸ್ಪಷ್ಟವಾಗಿದೆ. ಬೀದರ್ ಜಿಲ್ಲೆಯಲ್ಲಿ ಜಾತಿವಾದವಿಲ್ಲ, ಅಲ್ಲಿಗೆ ಫಸಲ್ ಅಲಿ ಕಮೀಷನ್ ಬಂದಾಗ ಏನು ಮೆಮೋರ್ಯಾಂಡಂ ಕೊಟ್ಟಿದ್ದಾರೆಂಬುದು ನನಗೆ ಗೊತ್ತು. ಮುಸ್ಲಿಂ ಜನಾಂಗದವರೂ ಕೂಡ ತಮ್ಮ ಮಾತೃಭಾಷೆ ಕನ್ನಡವಲ್ಲದಿದ್ದರೂ ಕೂಡ ಅಲ್ಲಿ ಜನರಲ್ಲಿ ಬಹುಮಂದಿ ಕನ್ನಡಿಗರೇ ಆಗಿರುವುದರಿಂದ ತಾವು ಕರ್ಣಾಟಕಕ್ಕೇ ಸೇರಲು ತಯಾರಾಗಿದ್ದೇವೆಂದು ಹೇಳಿದ್ದಾರೆ. ಅಲ್ಲದೆ ಕ್ರಿಶ್ಚಿಯನರು, ಹರಿಜನರು ಮುಂತಾದವರೂ ಸಹ ಅದೇ ರೀತಿ ಮೆಮೋರ್ಯಾಂಡಂ ಕೊಟ್ಟಿದ್ದಾರೆ. ಎಲ್ಲಾ ಸೇರಿಸಿದರೆ ಬೀದರ್ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಕನ್ನಡದವರ ಬಹುಮತವಿದೆ, ಶೇಕಡ 80 ರಷ್ಟು ಅವರೇ ಇದ್ದಾರೆ. ಬಹು ಮಂದಿ ಕರ್ಣಾಟಕಕ್ಕೆ ಸೇರಲು ಒಪ್ಪಿರುವುದರಿಂದ ನಿರ್ಣಯದ ಪರವಾಗಿ ಮಾತನಾಡಿರುವವರು ಹೇಳಿರುವುದಕ್ಕೆ ವಾದ ಮಾಡಿರುವುದಕ್ಕೆ ಸಮರ್ಥನೆ ದೊರೆಯುವು ದಿಲ್ಲ, ಅವರು ಮಹಾರಾಷ್ಟ್ರಕ್ಕೆ ತಾವಿರುವ ಕೆಲವು ಪ್ರದೇಶಗಳು ಸೇರಲು ಅವಕಾಶ ಕೊಡ ಬೇಕೆಂದು ಕೇಳುವುದಕ್ಕೆ ಹಕ್ಕಿಲ್ಲ. ಇದನ್ನು ಸ್ಪಷ್ಟ ಪಡಿಸುತ್ತಿದ್ದೇನೆ. ಇದಲ್ಲದೆ 7 ವರ್ಷಗಳಿಂದ ಅವರು ಹೇಳಿದ್ದನ್ನೇ ಹೇಳುತ್ತಿದ್ದಾರೆ. ಯಾವುದು ಸಾಧ್ಯವಿಲ್ಲವೋ ಅದನ್ನು ಕೇಳುತ್ತಿದ್ದಾರೆ. ಸತ್ಯಾಗ್ರಹ ಅವರು ಮಾಡಬಹುದು. ಆದರೆ ನಮಗೆ ಮಾಡುವುದಕ್ಕೆ ಬರುವುದಿಲ್ಲವೇ? ಸರ್ಕಾರ ಈಗೇನು ನಿರ್ಣಯ ತೆಗೆದುಕೊಂಡು ಒಂದು ವ್ಯವಸ್ಥೆ ಮಾಡಿದೆ ಅದಕ್ಕೆ ಬೆಂಬಲ ಕೊಡುವುದಕ್ಕೆ ಲಕ್ಷಾಂತರ ಜನ ಸಿದ್ಧವಾಗಿದ್ದಾರೆ. ನಾನು ರಾಷ್ಟ್ರೀಯವಾದಿ. ಅನೇಕ ರಾಷ್ಟ್ರೀಯವಾದಿಗಳು ನಮಗೆ ಬೆಂಬಲ ಕೊಡಲು ತಯಾರಿದ್ದಾರೆ. ನಾವು ಯಾರಿಗೂ ಹೆದರುವುದಿಲ್ಲ. ರಾಷ್ಟ್ರೀಯ ಭಾವ ಇರಲೇಬೇಕು. ಪಾರ್ಲಿಮೆಂಟಿನಲ್ಲಿ ಆಕ್ಟ್ ಆಗಿರುವಾಗ, ಕರ್ಣಾಟಕಕ್ಕೆ ಸೇರಲು ನಾವು ಒಪ್ಪಿರುವಾಗ ಈಗ ಮತ್ತೊಂದು ಅಭಿಪ್ರಾಯ ವ್ಯಕ್ತಪಡಿಸುವುದು ಖಂಡನೀಯ. ಇದಲ್ಲದೆ ಸರ್ಕಾರದವರು ತಾವು ನಾಲ್ಕು ಹಳ್ಳಿಗಳನ್ನು ಕೊಡುವುದಾಗಿಯೂ ಕೆಲವನ್ನು ತೆಗೆದುಕೊಳ್ಳುವುದಾಗಿಯೂ ಹೇಳುವುದು, ಸರ್ಕಾರಕ್ಕೆ ಎಚ್ಚರಿಕೆ ಕೊಡುವುದು ಇವೆಲ್ಲಾ ಸರಿಯಲ್ಲ. ಕೊಡುವುದಕ್ಕೆ, ತೆಗೆದುಕೊಳುವುದಕ್ಕೆ ಸರ್ಕಾರದವರೇನು ಹಕ್ಕನ್ನು ಪಡೆದಿದ್ದಾರೆ ? ಅವರಿಗೇನು ಠೇಕದಾರಿ ಇಲ್ಲ. ಈ ಪ್ರಕಾರ ಮಾಡಿದರೆ ಇನ್ನೂ ಹತ್ತುಪಟ್ಟು ತೊಂದರೆಯಾಗುತ್ತದೆ. ಚುನಾವಣೆಯಾದನಂತರ ನಾನು ಪಿ. ಎಸ್. ಪಿ. ಅಲ್ಲ ಎಂದು ಹೇಳಿದರು, ನಾನು ಪಿ. ಎಸ್. ಪಿ. ಎಂದು ಸ್ಪಷ್ಟ ಪಡಿಸುತ್ತಿದ್ದೇನೆ. ಆದರೆ ಈಗಿರುವುದು ಪಿ. ಎಸ್. ಪಿ. ಅಥವಾ ಕಾಂಗ್ರೆಸ್ ಪ್ರಶ್ನೆಯಲ್ಲ. ಈ ಪ್ರಶ್ನೆ ಬೇರೆ, ಇದಕ್ಕೆ ಇತರ ಪ್ರಶ್ನೆಗಳನ್ನು ಬೆರಸಬಾರದು. ಒಂದು ಸಲ ನಿರ್ಣಯವಾಗಿರುವುದನ್ನು ಬದಲಾಯಿಸುವುದು ಸರಿಯಲ್ಲ. ಯಾರು ಎಲ್ಲಿದ್ದಾರೋ ಅವರು ಅಲ್ಲೇ ಇರಬೇಕು, ಬದಲಾಯಿಸಬಾರದು ಎಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸಭಾಧ್ಯಕ್ಷರೇ, ಮೈಸೂರು ಮತ್ತು ಮಹಾ ರಾಷ್ಟ್ರ ಗಡಿ ವಿಚಾರದಲ್ಲಿ ನನಗೆ ಹೆಚ್ಚು ಮಾಹಿತಿಯಿಲ್ಲ ಎಂದು ಒಪ್ಪಿಕೊಳ್ಳಬೇಕಾಗಿದೆ. ಮಹಾ ರಾಷ್ಟ್ರ ಏಕೀಕರಣ ಸಮಿತಿಯವರು ಈ ಸಭೆಯಲ್ಲಿ ಕಳೆದ 2–3 ವರ್ಷಗಳಿಂದ ಮತ್ತು ಅದಕ್ಕೆ ಹಿಂದೆ ಕೂಡ ಒಂದೇ ಸಮನಾಗಿ ಮಹಾರಾಷ್ಟ್ರಕ್ಕೆ ಕೆಲವು ಪ್ರದೇಶಗಳು ಸೇರಬೇಕೆಂದು ಗಲಾಟೆ ಮಾಡು ತ್ತಿದ್ದಾರೆ. ಸ್ಟೇಟ್ಸ್ ರೀ-ಆರ್ಗನೈಜೇಷನ್ ಕಮೀಷನ್ ವರದಿಯ ಪರಿಣಾಮವಾಗಿ ಕೆಲವು ಭಾಗಗಳು

(ಶ್ರೀ ಪಿ. ವೆಂಕಟಗಿರಿಯಪ್ಪ)

ಈ ರಾಜ್ಯಕ್ಕೆ ಸೇರಿ ಅನ್ಯಾಯವಾಗಿದೆ, ಮಹಾರಾಷ್ಟ್ರದ ಜನರು ಈ ರಾಜ್ಯದಲ್ಲಿ ಜೀವನ ನಡೆಸುವುದೇ ದುಸ್ತರವಾಗಿದೆ ಎಂದು ಪ್ರಬಲವಾದ ಕೂಗನ್ನೆಬ್ಬಿಸಿದ್ದಾರೆ. ನಾನು ವಿಚಾರ ತಿಳಿದುಕೊಳ್ಳಲು ಪ್ರಯತ್ನ ಮಾಡಿದೆ. ಸ್ಟೇಟ್ಸ್ ರೀ-ಆರ್ಗನೈಜೇಷನ್ ಕಮೀಷನ್ ವರದಿ ಮತ್ತು ಫ್ಯಾಕ್ಟ್ ಫೈಂಡಿಂಗ್ ಕಮಿಟಿ ವರದಿಗಳನ್ನು ನೋಡಿದ್ದೇನೆ. ಹಾಗೆಯೇ ಮಹಾರಾಷ್ಟ್ರ-ಮೈಸೂರು ಬೌಂಡರಿ ಡಿಸ್ಪ್ಯೂಟ್ ಕಮಿಟಿ ವರದಿ ಪರವಾಗಿ ಬೊಂಬಾಯಿ ಸರ್ಕಾರದವರು ಹೊರಡಿಸಿರುವ ಪ್ರಕಟಣೆಯನ್ನೂ ನೋಡಿದ್ದೇನೆ. ಆದರೆ ಮೈಸೂರು ದೇಶದ ಬಗ್ಗೆ ಇತ್ತೀಚಿನ ಸ್ಪಷ್ಟ ನಿಲುವೇನು ಎನ್ನುವುದಕ್ಕೆ ಆ ಕಮಿಟಿಯ ಸದಸ್ಯರಾಗಿದ್ದಂತಹ ಶ್ರೀಮಾನ್ ಮಾಳೀಮಠ್ ಹಾಗೂ ಶ್ರೀಮಾನ್ ಎಸ್. ಚನ್ನಯ್ಯನವರು ಏನು ಅಭಿಪ್ರಾಯವನ್ನು ಕೊಟ್ಟಿದ್ದರು ಎನ್ನುವ ಪರಿಚಯಗಳನ್ನು ತಿಳಿಯಬೇಕೆಂದು ಅದರ ಬಗ್ಗೆ ನಮ್ಮ ಲೈಬ್ರರಿಯಲ್ಲಿ ಕೇಳಿದ್ದರಲ್ಲಿ ಯಾವ ಪುಸ್ತಕವೂ ಇಲ್ಲ ಎಂದು ತಿಳಿಸಿದರು. ಇದು ಒಂದು ಮುಖ್ಯವಾದ ಪ್ರಶ್ನೆ. ಶ್ರೀಮಾನ್ ಭೀಮಣ್ಣನವರು ಸ್ಟೇಟ್ ರೀಆರ್ಗನೈಸೇಷನ್ ರಿಪೋರ್ಟಿನ ಪ್ರಕಾರ ಯಾವಾಗ ಪಾರ್ಲಿಮೆಂಟು ತೀರ್ಮಾನ ಮಾಡಿ ಪ್ರಾಂತ್ಯಗಳನ್ನಾಗಿ ಮಾಡಲಾಯಿತೋ ಪುನಃ ಅದರ ಬಗ್ಗೆ ಮಾತನಾಡುವುದಕ್ಕೆ ಯಾರಿಗೂ ಹಕ್ಕಿಲ್ಲ ಎಂದು ತಿಳಿಸಿದರು. ಕಾನೂನಿನಲ್ಲಿ ಎಲ್ಲಿಯೂ ಆ ರೀತಿ ಇಲ್ಲ ಎಂದು ನನಗೆ ತೋರುತ್ತದೆ. ಇದು ಮೂಲಭೂತವಾದ ಪ್ರಶ್ನೆ. ನಾನು ಬಂದಿರುವ ಜಿಲ್ಲೆಯಲ್ಲಿ ಮೂರನೇ ಎರಡು ಭಾಗದಷ್ಟು ಜನ ತೆಲುಗು ಭಾಷೆಯನ್ನು ಮಾತನಾಡುವ ಜನರಿದ್ದರೂ ಕೂಡ ಕೋಲಾರ ಜಿಲ್ಲೆಯು ಆಂಧ್ರಕ್ಕೆ ಹೋಗಬೇಕು ಎಂದು ಅಲ್ಲಿಯ ಜನಗಳ ಮನೋಭಾವವಿಲ್ಲ. ಅಲ್ಲಿರತಕ್ಕ ತೆಲುಗು ಜನಕ್ಕೆ ರಾಜ್ಯದಲ್ಲಿ ನ್ಯಾಯವಾದ ಸ್ಥಾನ ಮಾನ ದೊರೆಯದೆ ಹೋದ ಕಾಲದಲ್ಲಿ ಅವರಿಗೆ ತಮ್ಮ ಭಾಷಾವಾರು ಪ್ರಾಂತ್ಯಕ್ಕೆ ಸೇರುವ ಹಕ್ಕಿದೆ. ಭಾಷಾವಾರು ಪ್ರಾಂತ ರಚನೆಯಾಗಿದ್ದರೂ ಅದನ್ನು ಬದಲಾವಣೆ ಮಾಡುವ ಅಧಿಕಾರ ಪಾರ್ಲಿಮೆಂಟಿಗೆ ಇದೆ ಮತ್ತು ಹಾಗೆ ಮಾಡಲು ಸಾಧ್ಯವಿದೆ. ರೀ ಆರ್ಗನೈಸೇಷನ್ ರಿಪೋರ್ಟಿನಲ್ಲಿ ಹೀಗೆ ಹೇಳಿದೆ. Unlike the United States, the Indian Union is not composed of undestructible units but composed of destructible States.

ನಮ್ಮ ಪಾರ್ಲಿಮೆಂಟಿಗೆ ರಾಜ್ಯಗಳನ್ನು ಬದಲಾವಣೆ ಮಾಡುವ ಅಧಿಕಾರ ಇದೆ. ಶ್ರೀ ಭೀಮಣ್ಣನವರು ಮತ್ತು ದೊಡ್ಡಮೇಟಿಯವರು ಗಡಿ ಬದಲಾವಣೆಗೆ ಮಾಡಲು ಮತ್ತು ಈ ಬಗ್ಗೆ ಮಾತನಾಡಲು ಸರ್ಕಾರಕ್ಕೆ ಅಧಿಕಾರವಿಲ್ಲ ಎಂದು ಹೇಳಿದರು. ಬೆಳಗಾಂ ಪಟ್ಟಣ ಮಹಾರಾಷ್ಟ್ರದ ಪ್ರದೇಶಗಳೆಂದು ಹೇಳುವ ಯಾವುದೇ ಭಾಗ ಹಾಗು ಬೆಳಗಾಂ ಎಂದೆಂದಿಗೂ ಮಹಾರಾಷ್ಟ್ರಕ್ಕೆ ಸೇರತಕ್ಕದ್ದೇ ಅಲ್ಲ ಎಂದು ಇಲ್ಲಿ ಸವಾಲು ಹಾಕಿದರು, ಆದರೆ ನಾನು ಇಂತಹ ವಾದವನ್ನು ಒಪ್ಪುವುದಿಲ್ಲ. ರಾಜ್ಯಾಂಗದ ನಿಯಮದಂತೆ ನಮ್ಮ ರಾಜ್ಯದಲ್ಲಿಯೂ ಚುನಾವಣೆಯಾದಾಗ ಈ ಅಸೆಂಬ್ಲಿಗೆ ಗಡಿ ಪ್ರದೇಶಗಳಿಂದ ಏಳು ಜನ ಸದಸ್ಯರು ಶಾಸನ ಸಭೆಯ ಸದಸ್ಯರಾಗಿ ಆರಿಸಿ ಬಂದಿದ್ದಾರೆ. ಅವರೇ ಇಲ್ಲಿ ಹೇಳಿದಂತೆ ಅವರ ಭಾಗದಲ್ಲಿರತಕ್ಕ ಕೆಲವು ತಾಲ್ಲೂಕು ಬೋರ್ಡುಗಳಲ್ಲಿ ಅವರ ಪಕ್ಷಕ್ಕೆ ಸೇರಿದವರೇ 15 ಜನರೂ ಆರಿಸಿ ಬಂದಿದ್ದಾರೆ, ಕೆಲವು ತಾಲ್ಲೂಕು ಬೋರ್ಡುಗಳಲ್ಲಿ 15 ಜನಕ್ಕೆ 13 ಜನರು ಅವರ ಪಕ್ಷದವರೇ ಆರಿಸಿ ಬಂದಿದ್ದಾರೆ, ಇವರೆಲ್ಲಾ ಏಕೀಕರಣವಾದ ಮೇಲೆ ಮಹಾರಾಷ್ಟ್ರ ಗಡಿ ಭಾಗದಲ್ಲಿ ಆರಿಸಿ ಬಂದಿದ್ದಾರೆ. ಆದರೆ ಅವರು ಹೇಳುವ ಎಲ್ಲಾ ಭಾಗವನ್ನು ಮಹಾರಾಷ್ಟ್ರಕ್ಕೆ ಕೊಡಬೇಕು ಎಂದು ನಾನು ಹೇಳುವವನಲ್ಲ. ಅವರು ಹೇಳುವ ವಾದದಲ್ಲಿ ಅರ್ಥವಿದೆ, ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ. ಕರ್ಣಾಟಕ ಏಕೀಕರಣವಾದ ಮೇಲೆ ಅದನ್ನು ಎಂದೆಂದಿಗೂ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಸವಾಲು ಮಾಡುವುದು ತಪ್ಪು ಎಂದು ನನ್ನ ಅಭಿಪ್ರಾಯ. ಈ ಭಾಗಗಳು ಮಹಾರಾಷ್ಟ್ರದ್ದು ಅದರಿಂದ ಇದನ್ನು ತೆಗೆದುಕೊಳ್ಳಬೇಕಾಗಿದೆ ಎಂದು ಅದಕ್ಕಾಗಿ ಒಂದು ಏಕೀಕರಣ ಸಮಿತಿಯನ್ನು ಮಾಡಿಕೊಂಡು ಆ ಭಾಗದಿಂದ ಸದಸ್ಯರಾಗಿ ಇಲ್ಲಿಗೆ ಆರಿಸಿ ಬಂದಿದ್ದಾರೆ. ಅವರು ಹೇಳುವ ಮಾತಿನಲ್ಲಿ ಸ್ವಲ್ಪಮಟ್ಟಿಗೆ ಸತ್ಯಾಂಶ ಇದ್ದರೂ ಇರಬಹುದು. ಆದರೆ ಅವರು ಹೇಳುವ ವಾದವನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶವೇ ಇಲ್ಲ ಎಂದು ಶ್ರೀಮಾನ್ ದೊಡ್ಡಮೇಟಿಯವರು ಹೇಳಿದರು. ಅಲ್ಲದೆ ಅವರು ಯಾವ ಧ್ಯೇಯದ ಮೇಲೆ ಈ ಅಸೆಂಬ್ಲಿಗೆ ಆರಿಸಿ ಬಂದಿದ್ದಾರೆ ಎನ್ನುವ ಬಗ್ಗೆ ಯಾವ ವಿಷಯವನ್ನು ಹೇಳಿದಂತೆ ಕಾಣಲಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ನಾನು ಹೇಳಿದ್ದು ಏನೆಂದರೆ ಸಣ್ಣ ಪುಟ್ಟ ಹಳ್ಳಿಗಳು ಈ ಕಡೆಗೆ ಆ ಕಡೆಗೆ ಹೋಗಬಹುದು, ಹಾಗೆ ಹೋಗಗೊಡಬಾರದು ಎನ್ನುವುದು ನಮ್ಮ ಸರಕಾರದ ಧೋರಣೆ ಅಲ್ಲ. ಏನಾದರೂ ಮೈನರ್ ಅಡ್‌ಜಸ್ಟ್‌ಮೆಂಟು ಇದ್ದರೆ ಸ್ವಲ್ಪ ಹೆಚ್ಚು ಕಡಿಮೆ ಮಾಡಿಕೊಂಡು

ಮಾಡಬಹುದು. ಆದರೆ ಅದನ್ನು ಮಾಡಲು ಇದು ಸಕಾಲವಲ್ಲ. ಈ ಎಮರ್ಜನ್ಸಿ ಮುಗಿದನಂತರ ಅದನ್ನು ಮಾಡೋಣ ಎಂದು ಹೇಳಿದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಇದು ಪಕ್ಷಗಳಿಗೆ ಸಂಬಂಧವಿಲ್ಲವೆನ್ನುವುದರಲ್ಲಿ ಅರ್ಥವಿಲ್ಲ. ರಾಜಕೀಯಕ್ಕೆ ಸಂಬಂಧವಿಲ್ಲದೇ ಇರುವಂತಹ ಪ್ರಶ್ನೆ ಯಾವುದೂ ಇಲ್ಲ. ಮೈಸೂರನ್ನು ತೆಗೆದುಕೊಳ್ಳಿ, ಆಂಧ್ರ ತೆಗೆದುಕೊಳ್ಳಿ, ಮದರಾಸು ತೆಗೆದುಕೊಳ್ಳಿ. ಯಾವುದನ್ನು ತೆಗೆದುಕೊಂಡರೂ ಎಲ್ಲ ರಾಜ್ಯಗಳಲ್ಲೂ ಕಾಂಗ್ರೆಸ್ಸು ಸರಕಾರಗಳೇ ಇವೆ. ಆ ಒಂದು ಪಕ್ಷಕ್ಕೆ ಸೇರಿದವರೇ ಅಲ್ಲಿ ಮುಖ್ಯ ಮಂತ್ರಿಗಳಾಗಿದ್ದಾರೆ. ಅವರುಗಳೆಲ್ಲ ಒಂದಾಗಿ ಕೂಡಿಕೊಂಡು ಯಾವ ಯಾವ ಭಾಗಗಳು ಯಾವ ಯಾವ ಪ್ರಾಂತ್ಯಕ್ಕೆ ಸೇರಬೇಕೆಂದು ಅವರೇ ತೀರ್ಮಾನ ಮಾಡುವುದು ಬಹಳ ಅವಶ್ಯಕ. ಹೀಗೆ ಇದರ ಬಗ್ಗೆ ನಾಲ್ಕಾರು ವರ್ಷಗಳಿಂದ ಚಳುವಳಿ, ನಡೆಯುವುದು, ಸತ್ಯಾಗ್ರಹ ನಡೆಯುವುದು ದೇಶದ ಹಿತದೃಷ್ಟಿಯಿಂದ ನ್ಯಾಯವಲ್ಲ. ನಮ್ಮ ಮಹಾರಾಷ್ಟ್ರದ ಜನ ಅಷ್ಟು ಚಳುವಳಿ ಮಾಡುತ್ತಿರುವಂತೆ ನಮ್ಮ ಮದರಾಸು ಭಾಗಕ್ಕೆ ಸೇರಿರುವ ಹೊಸೂರು ಭಾಗದ ಜನರು ಮಾಡುತ್ತಿಲ್ಲ. ನ್ಯಾಯವಾಗಿ ಹೊಸೂರು ಮೈಸೂರು ರಾಜ್ಯಕ್ಕೆ ಸೇರಬೇಕು, ಈಗ ಇದು ಮದರಾಸಿಗೆ ಸೇರಿದೆ. ಮಾಲೂರು ತಾಲ್ಲೂಕು ಅಕ್ಕಪಕ್ಕದಲ್ಲಿರುವ ಸುಮಾರು 20-30 ಹಳ್ಳಿಗಳಲ್ಲಿ ಪೂರ್ಣವಾಗಿ ಕನ್ನಡ ಮಾತನಾಡುವ ಜನರೇ ಇದ್ದಾರೆ. ಆ ತಾಲ್ಲೂಕಿನಲ್ಲಿರುವ ಪಾಪ್ಯುಲೇಷನ್ನಿನ ಮೇಲೆ ತೆಗೆದುಕೊಂಡರೆ ಶೇಕಡಾ 30 ರಷ್ಟು ಜನ ಕನ್ನಡ ಮಾತನಾಡುತ್ತಾರೆ. ಇವೆಲ್ಲಾ ನ್ಯಾಯವಾಗಿ ನಮ್ಮ ಮೈಸೂರು ರಾಜ್ಯಕ್ಕೆ ಸೇರಬೇಕಾದುದು. ಅದೇ ರೀತಿಯಲ್ಲಿ ಕಾಸರಗೋಡು ಭಾಗದಲ್ಲಿರುವ ಕನ್ನಡ ಮಾತನಾಡುವ ಜನ ಮೈಸೂರು ರಾಜ್ಯಕ್ಕೆ ಸೇರಬೇಕೆಂದು ಕೇಳುತ್ತಲಿದ್ದಾರೆ. ಇದರ ಬಗ್ಗೆ ಮೈಸೂರು ಸರಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಾಗ ಸ್ಪಷ್ಟವಾಗಿ ತಿಳಿಸಬೇಕೆಂದು ಒತ್ತಾಯಪಡಿಸುತ್ತೇನೆ. ಅಲ್ಲದೆ ಆದೋಣಿ, ಮಡಕಸಿರಾ, ಆಲೂರು ಮತ್ತು ಸೊಲ್ಲಾಪುರದ ಕೆಲವು ಭಾಗಗಳು ಇವೆಲ್ಲಾ ನಮ್ಮ ಮೈಸೂರು ಭಾಗಕ್ಕೆ ಸೇರಬೇಕು. ಇದರ ಬಗ್ಗೆ ಸರಕಾರ ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ ಎನ್ನುವುದು ನಮಗೆ ತಿಳಿದಿಲ್ಲ. ಇದಕ್ಕೆಲ್ಲಾ ತುರ್ತುಪರಿಸ್ಥಿತಿಯಲ್ಲಿ ತೆಗೆದುಕೊಳ್ಳಬಾರದು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಈಗೇನೂ ಅಂತಹ ತುರ್ತುಪರಿಸ್ಥಿತಿ ಕಾಣುತ್ತಿಲ್ಲ. ಗಡಿ ಸಮಸ್ಯೆಗಳನ್ನು ಒಂದೇ ಪಾರ್ಟಿಯ ಕಾಂಗ್ರೆಸ್ಸು ಮುಖ್ಯ ಮಂತ್ರಿಗಳಾಗಿರುವವರು ಒಂದುಗೂಡಿ ಇದರ ಬಗ್ಗೆ ಜಾಗ್ರತೆ ಒಂದು ತೀರ್ಮಾನಕ್ಕೆ ಬರಬೇಕು ಗೊಂದಲಕ್ಕೆ ಅವಕಾಶ ಕೊಡಬಾರದು ಎಂದು ಸರಕಾರಕ್ಕೆ ಒತ್ತಾಯ ಪೂರ್ವಕವಾಗಿ ತಿಳಿಸುತ್ತೇನೆ.

NON-OFFICIAL RESOLUTION

Re: Utilization of Potential Resources of Cauvery Waters.

(Debate continued.)

5 P.M.

†ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಸ್ವಾಮಿ, ಅಧ್ಯಕ್ಷರೆ: ಶ್ರೀಮಾನ್ ಎಚ್. ಡಿ. ದೇವೇಗೌಡರು ಬಹಳ ಯೋಗ್ಯವಾದ ನಿರ್ಣಯವನ್ನೇ ತಂದಿದ್ದಾರೆ, ಅದು ಒಪ್ಪಿಕೊಳ್ಳಬೇಕಾದ ನಿರ್ಣಯವೇ; ಇದು ಬಹಳ ಸಾಧುವಾಗಿದೆ. ಈ ಕಾರ್ಯ ಮೂರನೇ ಪಂಚವಾರ್ಷಿಕ ಯೋಜನೆಯೊಳಗೆ ಕೈಗೊಂಡಿದ್ದರೆ ಇದು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಪೂರೈಸುತ್ತಿತ್ತೋ ಏನೋ. ಆದರೆ ಇದನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲೇ ಎಂತ ಹಾಕದೆ ಇದ್ದಿದ್ದರೆ ನಾನೂ ಕೂಡ ಇದನ್ನು ಒಪ್ಪಿಕೊಳ್ಳುತ್ತಿದ್ದೆನೋ ಏನೋ. ಆದ್ದರಿಂದ ಈಗ ಈ ನಿರ್ಣಯ ಇರತಕ್ಕ ರೀತಿಯಲ್ಲೇ ಇದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಇದನ್ನು ವಾಪಸ್ಸು ತೆಗೆದುಕೊಳ್ಳುವುದು ಬಿಡುವುದು ಮಾನ್ಯ ಸದಸ್ಯರಿಗೆ ಬಿಟ್ಟಿದ್ದು.

ಇನ್ನು ಕಾವೇರಿ ನದಿಯ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕೆಂಬ ವಿಚಾರದಲ್ಲಿ ಮತ್ತು ಆ ನೀರನ್ನು ಜನರಿಗೆ ಅತ್ಯಂತ ಉಪಯುಕ್ತವಾಗತಕ್ಕ ರೀತಿಯಲ್ಲಿ ಅದನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಲೇಬೇಕೆಂಬ ವಿಚಾರದಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಇದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವೂ ಇಲ್ಲ. ಕಾವೇರಿ ನದಿಯ ನೀರಿನ ವಿಚಾರದಲ್ಲಿ

(ಶ್ರೀ ಎಸ್. ನಿಜಲಿಂಗಪ್ಪ)

1924ರಲ್ಲಿ ಒಂದು ಒಪ್ಪಂದವಾಗಿತ್ತು. ಆ ಒಪ್ಪಂದ ಮೈಸೂರು ಸರ್ಕಾರಕ್ಕೂ ಮತ್ತು ಮದ್ರಾಸ್ ಸರ್ಕಾರಕ್ಕೂ ಆಗಿತ್ತು. ಈ ನದಿಯಲ್ಲಿ ಹರಿಯತಕ್ಕ ನೀರಿನ ಒಟ್ಟು ಪ್ರಮಾಣ 475 ಟಿ. ಎಂ. ಸಿ. ಎಫ್. ಟಿ, ಆದರೆ ಇದೆಷ್ಟು ಮಾತ್ರ ಖಚಿತವೋ ಹೇಳಲಾರೆ. ಇದು ನನ್ನ ಒಂದು ಅಭಿಪ್ರಾಯ. ಆದ್ದರಿಂದ ಈ ನದಿಯಲ್ಲಿ ನಮಗೆ ಖಚಿತವಾಗಿ ಎಷ್ಟು ನೀರು ಸಿಕ್ಕಬೇಕೆಂಬುದು ಖಚಿತವಾಗಿ ಇನ್ನೂ ಗೊತ್ತಿಲ್ಲ. ಇದನ್ನು ಬದಲಾವಣೆ ಮಾಡುವುದಕ್ಕೆ ಅನೇಕ ಆಧಾರಗಳುಂಟು. ಅವುಗಳನ್ನು ಪರಿಶೀಲನೆ ಮಾಡಿಕೊಂಡು ನಾವು ಕೆಲಸ ಮಾಡಬೇಕಾಗಿದೆ. ನಮ್ಮ ಸರ್ಕಾರಕ್ಕೂ ಮತ್ತು ಮದ್ರಾಸ್ ಸರ್ಕಾರಕ್ಕೂ 1924ರಲ್ಲಿ ಅಗ್ರಿಮೆಂಟ್ ಆಗುವುದಕ್ಕೆ ಮುಂಚೆ ನಮ್ಮಲ್ಲಿ ಕೆಲವು ಕಾಲುವೆಗಳಿದ್ದುವು. ಹೇಮಾವತಿ, ಕಾವೇರಿ ಮತ್ತು ಲಕ್ಷ್ಮಣತೀರ್ಥ ಹೀಗೆ ಮೂರು ನದಿಗಳಿಂದಲೂ ಕಾಲುವೆಗಳಿದ್ದುವು. ಆ ಕಾಲುವೆಗಳಲ್ಲಿ ಹರಿದು ಬರುತ್ತಿದ್ದ ನೀರಿನಿಂದ ಕೆಲವು ಭಾಗದ ಜಮೀನು ಸಾಗುವಳಿಯಾಗುತ್ತಿತ್ತು. ಆ 1924ರ ಅಗ್ರಿಮೆಂಟಿನಲ್ಲಿ ಐದು ಮುಖ್ಯವಾದ ವಿಚಾರಗಳಿವೆ. ಕಾವೇರಿ, ಹೇಮಾವತಿ ಲಕ್ಷ್ಮಣತೀರ್ಥ ಈ ಮೂರು ನದಿಗಳ ನೀರಿನಲ್ಲಿ ನಮಗೆ ಮೂವತ್ತುಮೂರು ಮೂರನೆ ಒಂದು ಪಾಲಿನ ನೀರಿಗಿಂತಲೂ ಸ್ವಲ್ಪ ಜಾಸ್ತಿಯಾಗೇ ಸಿಕ್ಕಬೇಕು ಎಂಬುದು—ಒಂದು ವಿಚಾರ. ಇನ್ನು ಎರಡನೇಯದಾಗಿ ಕೃಷ್ಣರಾಜಸಾಗರವನ್ನು ಕಟ್ಟಿದ್ದು ಅಲ್ಲಿ ಒಂದು ಲಕ್ಷ ಇಪ್ಪತ್ತೈದು ಸಾವಿರ ಎಕರಗಳಿಗೆ ನೀರನ್ನು ಒದಗಿಸಬೇಕು ಎಂದು. ಅದಕ್ಕೆ 43 ಟಿ. ಎಂ. ಸಿ. ಎಫ್. ಟಿ. ನೀರನ್ನು ಬಳಸಲಾಗಿದೆ. ಅದರ ಜೊತೆಗೆ ಹೊಸದಾಗಿ ಇನ್ನೂ 45 ಟಿ. ಎಂ. ಸಿ. ಎಫ್. ಟಿ. ನೀರನ್ನು ಉಪಯೋಗಿಸಿ ಒಂದು ಲಕ್ಷ ಹತ್ತು ಸಾವಿರ ಎಕರೆ ಅಚ್ಚುಕಟ್ಟನ್ನು ಷೆಡ್ಯೂಲ್ಡ್ ಟ್ರಿಬ್ಯುಟರಿಗಳಿಂದ ಮಾಡಿಕೊಳ್ಳಬಹುದೆಂದು ಇದೆ. ಇದರಲ್ಲಿ ನಾನ್‌ಷೆಡ್ಯೂಲ್ಡ್ ರಿವರ್‌ಗಳು ಬರುವುದಿಲ್ಲ. ಆದ್ದರಿಂದ ನಮಗೆ ದೊರೆಯತಕ್ಕ ಈ 45 ಟಿ. ಎಂ. ಸಿ. ಎಫ್. ಟಿ. ನೀರು ಷೆಡ್ಯೂಲ್ಡ್ ನದಿಗಳಿಂದ ನಮಗೆ ಸಿಗಬೇಕ . ಅಷ್ಟೇ ಅಲ್ಲದೆ ಮದ್ರಾಸ್ ಸರ್ಕಾರದವರು ಭವಾನಿ, ಅಮರಾವತಿ ಮತ್ತು ನವಲಿ ಈ ಮೂರು ನದಿಗಳ ನೀರಿಗೇನಾದರೂ ಕಟ್ಟುಹಾಕಿ ಅದರಿಂದ ಜಮೀನು ಸಾಗುವಳಿ ಮಾಡಿದರೆ, ಅವರು ಅಲ್ಲಿ ಎಷ್ಟು ನೀರನ್ನು ಉಪಯೋಗ ಮಾಡಿಕೊಳ್ಳುತ್ತಾರೋ ಅದರಲ್ಲಿ ನೂರಕ್ಕೆ ಅರವತ್ತರಷ್ಟು ನೀರನ್ನು ನಾವಿಲ್ಲಿ ಈ ನದಿಯಿಂದ ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಆದರೆ ಈಗ ಆ ನದಿಗಳಿಂದ ಮದ್ರಾಸ್ ಸರ್ಕಾರದವರು 38—39 ಟಿ. ಎಂ. ಸಿ. ಎಫ್. ಟಿ. ಅಷ್ಟು ನೀರನ್ನು ವ್ಯವಸಾಯಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ. ಈ ಒಂದು ಕಾರಣದಿಂದ ನಮಗೀಗ ಇಲ್ಲಿನ್ನೂ 24-25 ಟಿ. ಎಂ. ಸಿ. ಎಫ್. ಟಿ. ನೀರನ್ನು ಉಪಯೋಗ ಮಾಡಿಕೊಳ್ಳಲು ಅವಕಾಶವಿದೆ. ಇನ್ನು ನಾನು ಆಗಲೇ ಹೇಳಿದಂತೆ ನಾನ್ ಷೆಡ್ಯೂಲ್ಡ್ ನದಿಗಳಿಂದ ಎಷ್ಟು ನೀರು ಬರುತ್ತದೋ ಅಷ್ಟನ್ನೂ ನಾವೇ ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಹಕ್ಕಿದೆ. ಇಷ್ಟು ಆ ಒಪ್ಪಂದದಲ್ಲಿರತಕ್ಕ ವಿಚಾರಗಳು. ಆದರೆ ದುರ್ದೈವ ವಶಾತ್ ಇಲ್ಲಿಯವರೆಗೂ ಈ ಭಾಗದಲ್ಲಿ ಹೆಚ್ಚಿನ ಕೆಲಸಗಳಾಗಲಿಲ್ಲ ಎಂಬುದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಆ ಹಿಂದಿದ್ದ ಹಳೆಯ ಮೂರು ಕಾಲುವೆಗಳಲ್ಲಿ ಎಷ್ಟು ನೀರು ಬರುತ್ತಿತ್ತೋ ಅಷ್ಟನ್ನು ಮಾತ್ರ ನಾವು ಉಪಯೋಗ ಮಾಡಿಕೊಂಡಿದ್ದೇವೆ. ನಾವು ಇದರಿಂದ ಎಷ್ಟು ವಿಸ್ತೀರ್ಣ ಅಚ್ಚುಕಟ್ಟಾಗಬೇಕೆಂದು ನಿರೀಕ್ಷಣೆಮಾಡಿಕೊಂಡಿದ್ದೆವೋ ಅಷ್ಟಾಗಿಲ್ಲ. ನಾವು ಕೃಷ್ಣರಾಜಸಾಗರದ ನೀರನ್ನು ಸರಿಯಾಗಿ ಉಪಯೋಗ ಮಾಡಿಕೊಂಡಿದ್ದ ಪಕ್ಷದಲ್ಲಿ ಅಲ್ಲಿ ಒಂದು ಲಕ್ಷ ಇಪ್ಪತ್ತೈದು ಸಾವಿರ ಎಕರೆ ಜಮೀನನ್ನು ಆಬಾದಿಗೆ ತರಬಹುದಾಗಿತ್ತು. ಆದರೆ ಈಗ ಅಲ್ಲಿ ನಮ್ಮ ಲೆಕ್ಕದ ಪ್ರಕಾರ ಒಂದು ಲಕ್ಷ ಐದು ಸಾವಿರ ಎಕರೆ ಮಾತ್ರ ಆಬಾದಿಗೆ ಬಂದಿದೆ. ಅಲ್ಲಿ ನೀರನ್ನೀಗ ಅವರು ಸರಿಯಾಗಿ ಉಪಯೋಗ ಮಾಡುತ್ತಿಲ್ಲ. ಕಬ್ಬನ್ನು ಬೆಳೆಯುವ ಕಡೆ ಬತ್ತ ಬೆಳೆಯುತ್ತಿದ್ದಾರೆ. ಹೀಗಾಗಿ ಅಲ್ಲಿನ್ನೂ ಸುಮಾರು ಇಪ್ಪತ್ತು ಸಾವಿರ ಎಕರೆ ಸಾಗುವಳಿ ಬಂದಿಲ್ಲ. ಬಹುಶಃ ನೀರನ್ನು ಅಲ್ಲಿ ಸರಿಯಾಗಿ ಉಪಯೋಗ ಮಾಡದಿರುವುದರಿಂದ ಹಾಗಾಗಿರಬಹುದು. ಆದರೆ ನಮಗೆ ಒಟ್ಟಿನಲ್ಲಿ ಸಿಕ್ಕತಕ್ಕ ನೀರಿನ ಪ್ರಮಾಣ 180 ಟಿ. ಎಂ. ಸಿ. ಎಫ್. ಟಿ. ನೀರಿನಲ್ಲಿ ನಾವು ಇದುವರಿಗೆ ಉಪಯೋಗ ಮಾಡಿಕೊಂಡಿರುವುದು ಕೇವಲ 75-76 ಟಿ. ಎಂ. ಸಿ. ಎಫ್. ಟಿ. ಆಗಬಹುದು. ಆದರೆ ನಮಗೆ ಈ ಕಾವೇರಿ ಸೀರೀಸ್‌ನಲ್ಲಿ ದೊರೆಯತಕ್ಕ ನೀರು ಇಷ್ಟೇ ಸರಿ ಅಥವಾ ಇದು ಸರಿಯಾಗಿಲ್ಲ ಎಂಬುದನ್ನು ಯಾರೂ ಹೋಗಿ ಸರಿಯಾಗಿ ಅಳತೆ ಮಾಡಿ ನೋಡಿಲ್ಲ. ಹೀಗೇ ಆ ಕೃಷ್ಣನದೀ ನೀರಿನ ವಿಚಾರದಲ್ಲೂ 1,800 ಟಿ. ಎಂ. ಸಿ. ಎಫ್. ಟಿ. ನೀರು ಸಿಕ್ಕುತ್ತದೆ ಎಂದು ನಾವು ಲೆಕ್ಕಾ ಹಾಕಿದ್ದರೆ, ಅಲ್ಲಿ ಗುಲ್ಹಾಟಿ ಕಮಿಷನ್ನಿನವರು ಇನ್ನೂ ಹೆಚ್ಚಿನ ನೀರು ಸಿಕ್ಕುತ್ತದೆಂದು ಹೇಳಿದ್ದಾರೆ. ಆದರೆ ಅದೇ ರೀತಿ ಇಲ್ಲಿ ಯಾರೂ ಇನ್ನೂ ಹೋಗಿ ನೋಡಿ ತೀರ್ಮಾನ ಮಾಡಿಲ್ಲ. ಇದನ್ನು ಮದ್ರಾಸ್ ಸರ್ಕಾರದವರೂ ಮತ್ತು ಮೈಸೂರು ಸರ್ಕಾರದವರೂ ಇಬ್ಬರೂ ಸೇರಿ ಪರಿಶೀಲನೆ ನಡೆಸಬೇಕಾಗಿದೆ. ಆದರೆ ಈ ವಿಚಾರದಲ್ಲಿ ಇಲ್ಲಿಯ ತನಕ ಯಾವ ಪತ್ರವ್ಯವಹಾರಗಳೂ ನಡೆದಿರುವಂತೆ ಕಾಣುವುದಿಲ್ಲ. ಇದನ್ನು

ಇನ್ನೂ ವಿಚಾರ ಮಾಡಬೇಕಾಗಿದೆ. ಇದನ್ನು ಪರಿಶೀಲನೆ ಮಾಡಿಸಿದಲ್ಲಿ ನಮಗಿನ್ನೂ ಹೆಚ್ಚಿನ ನೀರು ಸಿಗಬಹುದು. ಆದರೆ ನಾವು ಇಲ್ಲಿಯವರೆಗೆ ಉಪಯೋಗ ಮಾಡಿಕೊಂಡಿರತಕ್ಕ ನೀರಿನ ಪ್ರಮಾಣವೆಂದರೆ— ಆ ಹಳೆಯ ಕಾಲುವೆಗಳಿಂದ 10 ಟಿ. ಎಂ. ಸಿ. ಎಫ್. ಟಿ. ನೀರು ಕೃಷ್ಣರಾಜ ಸಾಗರದಲ್ಲಿ 59 ಟಿ. ಎಂ. ಸಿ. ಎಫ್. ಟಿ. ನೀರು, ಮತ್ತು ಈ ನಾನ್ ಷೆಡ್ಯೂಲ್ಡ್ ರಿವರ್‌ಗಳಿಂದ 7 ಟಿ. ಎಂ. ಸಿ. ಎಫ್. ಟಿ. ನೀರು ಹೀಗೆ ಒಟ್ಟು 76 ಟಿ. ಎಂ. ಸಿ. ಎಫ್. ಟಿ. ಇಷ್ಟು ನೀರನ್ನು ಮಾತ್ರ ಉಪಯೋಗ ಮಾಡಿಕೊಂಡಿದ್ದೇವೆ. ಇನ್ನು ನುಗು, ಹೆಬ್ಬಳ್ಳ ವಾಟೆಹೊಳೆ, ಮುಕ್ತ ಮತ್ತು ಕಣ್ವಾ ಈ ಟ್ರಿಬ್ಯೂಟರಿಗಳಿಂದ ಸುಮಾರು 7 ಟಿ. ಎಂ. ಸಿ. ಎಫ್. ಟಿ. ನೀರನ್ನು ಉಪಯೋಗ ಮಾಡಿಕೊಂಡಿದ್ದೇವೆ. ಅಂತೂ ನಾವು ಒಟ್ಟು ಉಪಯೋಗಿಸಿಕೊಂಡಿರತಕ್ಕದ್ದು—76 ಟಿ. ಎಂ. ಸಿ. ಎಫ್. ಟಿ. ನೀರು ಜಾತಾ ಇನ್ನು ನಮಗೆ 104 ಟಿ. ಎಂ. ಸಿ. ಎಫ್. ಟಿ. ನೀರು ಇಲ್ಲವೇ ಕನಿಷ್ಟ ಪಕ್ಷ 100 ಟಿ. ಎಂ. ಸಿ. ಎಫ್. ಟಿ. ನೀರನ್ನುಪಯೋಗಿಸಿಕೊಳ್ಳತಕ್ಕ ಹಕ್ಕಿದೆ. ಇನ್ನು ನಾನ್ ಷೆಡ್ಯೂಲ್ಡ್ ರಿವರ್‌ಗಳ ನೀರನ್ನುಪಯೋಗಿಸಲು ಯಾರದೂ ಅಡ್ಡಿಯಿಲ್ಲ. ಇನ್ನು ನಮ್ಮಲ್ಲಿ ಸುಮಾರು 30 ಟಿ. ಎಂ.ಸಿ.ಎಫ್.ಟಿ. ನೀರನ್ನು ತಡೆಯತಕ್ಕಂಥ—ಹಾರಂಗಿ, ಅರ್ಕಾವತಿ, ಷಿಂಷ, ತಾರಕ, ಉಡುವಣಿ, ಓಟಿಹಳ್ಳಿ, ಕೀಲಾರ, ತಟ್ಟೆಹಳ್ಳ ಹೆಬ್ಬಳ್ಳ, ನಾಗರಹಳ್ಳ, ಯಗಚಿ, ಮಂಜಿನಬಿಲ ಇತ್ಯಾದಿ 14 ಯೋಜನೆಗಳನ್ನು ಮಾಡಬೇಕೆಂದಿದ್ದೇವೆ. ಅಲ್ಲಿಗಿನ್ನು ಳಿಯುವುದು 70 ಟಿ.ಎಂ.ಸಿ.ಎಫ್.ಟಿ.ನೀರು. ಅದನ್ನೂ ಕೂಡ ನಾವು ಉಪಯೋಗಮಾಡಿಕೊಳ್ಳಬೇಕಾಗಿದೆ. ಆದರೆ ಇಲ್ಲಿಯವರೆಗೂ ಏನೋ ಹಾಗೂ ಹೀಗೂ ನಡೆದುಕೊಂಡು ಬಂತು. ಹಿಂದೆ ಅಗ್ರಿಮೆಂಟಾದಾಗ ಏನು ಪರಿಸ್ಥಿತಿಯಿತ್ತೋ ಅದೇ ಪರಿಸ್ಥಿತಿ ಇಲ್ಲಿಯವರೆಗೂ ಹಾಗೇ ಉಳಿದುಕೊಂಡು ಬಂದಿದೆ, ಇದು ಒಂದು ದುರ್ದೈವದ ಸಂಗತಿಯೆಂದು ನಾನಾಗಲೇ ಹೇಳಿದ್ದೇನೆ. ಆದರೆ ಅವರು ಹಾಗೆ ಮಾಡಲಿಲ್ಲ ಎಂತ ಈಗ ನಾವು ಹೇಳತಕ್ಕದ್ದು ನನಗೆ ಅಷ್ಟು ಸರಿ ಕಾಣುವುದಿಲ್ಲ. ಮುಖ್ಯವಾಗಿ ಈಗ ನಾವೇನು ಮಾಡಬೇಕೆಂಬುದನ್ನು ವಿಚಾರ ಮಾಡಬೇಕಾಗಿದೆ. ಈ ಬಗ್ಗೆ ಈ ಹಿಂದೆ ಅನೇಕ ವಿಚಾರಗಳನ್ನು ಪರಿಶೀಲನೆ ಮಾಡಿದ್ದಾರೆ. ಬಹಳ ಹಿಂದೆಯೇ ಅಂದರೆ 1930—31ರಲ್ಲೇ ಹೇಮಾವತಿ ಪ್ರಾಜೆಕ್ಟನ್ನು ನಿರ್ಮಾಣ ಮಾಡಬೇಕೆಂಬ ತೀರ್ಮಾನಕ್ಕೆ ಬರಲಾಗಿತ್ತು. 32—33 ವರ್ಷಗಳ ಕೆಳಗೇ ಈ ಆಲೋಚನೆ ನಡೆದಿತ್ತು. ಅಲ್ಲಿ 18—19 ಟಿ. ಎಂ. ಸಿ. ಎಫ್. ಟಿ. ನೀರನ್ನು ಬಳಸಲು ಅಂದಾಜು ಮಾಡಿದ್ದರು. ಆದರೆ ಆಗ ಜನರಿಂದ ಬಹಳ ತಕರಾರುಗಳು ಬಂದವು.

ನಮ್ಮ ನೀರಿನ ಪಾಲು ಹೋಗುತ್ತದೆ. ಬಹಳ ಪ್ರದೇಶಗಳು ಮುಳುಗಿ ಹೋಗುತ್ತವೆ, ಕಾಫಿ ತೋಟಗಳು, ಏಲಕ್ಕಿ ತೋಟಗಳು ಮುಳುಗಿಹೋಗುತ್ತವೆಂದು ವರದಿ ಬಂದಮೇಲೆ ಅದನ್ನು ನಿಲ್ಲಿಸಲಾಯಿತು. ಶ್ರೀಮಾನ್ ತಿಮ್ಮಪ್ಪ ಗೌಡರಿಗೆ ಈ ವಿಚಾರದಲ್ಲಿ ಅಷ್ಟು ಅಭಿಮಾನವಿಲ್ಲ. ಆದರೂ ಒಂದು ವಿಷಯವನ್ನು ಸಂತೋಷದಿಂದ ಒಪ್ಪಿಕೊಂಡಿದ್ದಾರೆ, ಏಕೆಂದರೆ ಅವರು ಬಹಳ ಒಳ್ಳೆಯವರು, ಅವರ ಕ್ಷೇತ್ರದಲ್ಲಿರತಕ್ಕವರಲ್ಲಿ ಅನೇಕರು ಒಳ್ಳೆಯವರಿದ್ದಾರೆ. ಇದರಲ್ಲಿ ಅವರಿಗೆ ಸ್ವಲ್ಪಮಟ್ಟಿಗೆ ಕಷ್ಟವಾದರೂ ಚಿಂತೆ ಇಲ್ಲ, ಹೆಚ್ಚಿಗೆ ಬಡಜನರಿಗೆ ಅನುಕೂಲವಾಗುವುದಾದರೆ ಅವರು ಒಪ್ಪಿಕೊಳ್ಳುತ್ತಿದ್ದೇನೆಂದು ಬಹಳ ಚೆನ್ನಾಗಿ ವಿಶದಪಡಿಸಿದ್ದಾರೆ. ಹಾಸನ ಜಿಲ್ಲೆಯ ಕೆಲವು ಸದಸ್ಯರು ಮತ್ತು ಇತರರು ಬಹಳ ಸಂತೋಷದ ಮಾತನ್ನು ಹೇಳಿದ್ದಾರೆ. ಇವತ್ತು ನಾವು 7.2 ಟಿ.ಎಂ.ಸಿ.ಯಷ್ಟು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೇವೆಂದು ಹೇಳಿದ್ದಕ್ಕೆ 1964ನೇ ಇಸವಿಯಲ್ಲಿ ಒಂದು ತಕರಾರು ಬಂತು. ಆ ರೀತಿ ಹೇಳಿದ್ದರಮೇಲೆ 1960ನೇ ಇಸವಿಯಲ್ಲಿ ಒಂದು ಯೋಜನೆಯನ್ನು ಹಾಕಿದ್ದೆವು. ಸುಮಾರು 4 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ 20 ಸಾವಿರ ಎಕರೆಯಷ್ಟು ಹೊಸ ಅಚ್ಚುಕಟ್ಟನ್ನು ಮಾಡಿಕೊಂಡಿದ್ದಾರೆ. ಇದನ್ನು ಸಂಬಂಧಿಸಿದ ಜನಗಳು ಒಪ್ಪುವುದಾದರೆ ಹೆಚ್ಚು ಕಡಿಮೆ 11 ಅಥವಾ 12 ಅಥವಾ 19 ಟಿ.ಎಂ.ಸಿ.ಯಷ್ಟು ನೀರನ್ನು ಉಪಯೋಗಿಸಿ ಈ ಅಣೆಕಟ್ಟನ್ನು ಕಟ್ಟಬಹುದು. ಇದರಿಂದ ತಿಪಟೂರು, ಹಾಸನ, ತುಮಕೂರಿನವರಿಗೆ ತುಂಬಾ ಅನುಕೂಲವಾಗುತ್ತದೆ. ಆದರೆ ಯಾರೋ ಮಾನ್ಯ ಸದಸ್ಯರು ಗುಬ್ಬಿ, ತಿಪಟೂರು, ಮತ್ತು ತುಮಕೂರು ಮುಂತಾದ ಪ್ರದೇಶಗಳಿಗೆ ಇದರಿಂದ ಅಷ್ಟು ಅನುಕೂಲವಾಗುವುದಿಲ್ಲವೆಂದು ಹೇಳಿದರು. ಇದಕ್ಕೆ ಮುಳುಗಡೆಯಾಗುವಂತಹ ಪ್ರದೇಶಗಳಲ್ಲಿರತಕ್ಕ ಜನಗಳು ಒಪ್ಪಬೇಕು. ಆದರೆ ಹೆಚ್ಚಿಗೆ ನೀರಾವರಿಯಾಗುತ್ತದೆಂದು ಇದ್ದ ಪ್ರದೇಶಗಳು ಮುಳುಗುವುದು ಸರಿಯಲ್ಲ. ಅದೇ ಕಾರಣಗಳಿಂದ ಕೆಲವು ಈಗ ನಿಂತುಹೋಗಿವೆ. ಸುಮಾರು 32 ವರ್ಷಗಳಿಂದ ಇದು ಏಕೆ ನಿಂತುಹೋಯಿತೋ ಗೊತ್ತಾಗಲಿಲ್ಲ. ಅಲ್ಲಿ ಸ್ವಲ್ಪ ಮುಳುಗಡೆಯಾದರೂ ಕೂಡ ಫಸ್ಟ್ ಸ್ಟೇಜಿನಲ್ಲಿ ಕಾಫಿ ತೋಟ 48 ಎಕರೆ, ಖಾಸಗೀ ಜನಗಳ ಜಮೀನು 3,100 ಎಕರೆ, ತರೀ ಜಮೀನು 1,600 ಎಕರೆಯಷ್ಟು ಆಗಿರಬಹುದು. ಸರ್ಕಾರಿ ಜಮೀನು ಮತ್ತು ಅರಣ್ಯ ಅದೇನೂ ಅಷ್ಟು ಹೆಚ್ಚಾಗಿಲ್ಲವೆಂದು ಹೇಳುತ್ತೇನೆ. ಅಂದಮೇಲೆ ಇವತ್ತು 3 ಸಾವಿರ ಚಿಲ್ಲರೆ ಎಕರೆ ಮುಳುಗುತ್ತದೆ, ಇನ್ನೂ ಎರಡರಷ್ಟು ಮುಳುಗೀತು, ಆದರೂ ಇದರಿಂದ ಹೆಚ್ಚು ಅನಾನುಕೂಲವಾಗುತ್ತದೆಂದು 1960ನೇ ಇಸವಿಯಲ್ಲಿಯೇ ಈ ತರಹ ತೀರ್ಮಾನ ಮಾಡಿದ್ದರು. ಆದ್ದರಿಂದ ಇದು ಈ ಸರ್ಕಾರ ಮಾಡಿದ ತೀರ್ಮಾನವಲ್ಲ. ಸಂಬಂಧಪಟ್ಟ ಜನಗಳು ಸಾಕಷ್ಟು ಸಹಾನುಭೂತಿ

ಶ್ರೀ ಎಸ್. ನಿಜಲಿಂಗಪ್ಪ)

ಯಿಂದ ಆಗಬಹುದು ಎಂಬುದಾಗಿ ಹೇಳಿದರೆ ಮಾಡೋಣ. ಒಂದು ವೇಳೆ ರಾಜ್ಯದ ಹಿತದೃಷ್ಟಿಯಿಂದಾಗಲೀ ಅಥವಾ ಜನತೆಯ ಹಿತದೃಷ್ಟಿಯಿಂದಾಗಲೀ ಆಹಾರ ವಗೈರೆ ಉತ್ಪಾದನೆ ಆಗಲೇ ಬೇಕು ಎಂಬುದಾಗಿ ಹೇಳಿದರೆ ಆಗ ಆಗಲೇಬೇಕಾಗುತ್ತದೆ. ಇದಿಷ್ಟೂ ಹೇಮಾವತಿಗೆ ಸಂಬಂಧಪಟ್ಟದ್ದು ಆಯಿತು.

ಇನ್ನು ಹಾರಂಗಿ ನಾನ್ ಷೆಡ್ಯೂಲ್ಡ್ ನದಿಯ ಬಗ್ಗೆ ಬೇಕಾದಷ್ಟು ಮಾನ್ಯ ಸದಸ್ಯರು ಹೇಳುತ್ತಾ ಇದ್ದಾರೆ, ಇದರಲ್ಲಿ ಏನೋ ಸರ್ಕಾರದವರು ಅನ್ಯಾಯ ಮಾಡಿದ್ದಾರೆಂದು ಹೇಳುತ್ತಾರೆ. ಹಾಗೆ ಹೇಳುವುದಕ್ಕೆ ಕಾರಣವಿಲ್ಲ. ಏಕೆಂದರೆ ಅದನ್ನು ಆದಷ್ಟು ಉಪಯೋಗಿಸಬೇಕೆಂದು ಇದ್ದೇವೆ. ಕಂಬದಕಡ ಮತ್ತು ಹಾರಂಗಿ ಪ್ರಾಜೆಕ್ಟುಗಳಿಂದ 1947ನೇ ಇಸವಿಯವರೆಗೂ ಹೆಚ್ಚಿಗೆ ಪ್ರಯೋಜನ ನಡೆದಿಲ್ಲ. ಆಗ್ಗೆ ಹೇಮಾವತಿ ಯೋಜನೆ ಮಾಡಿದ್ದರೂ ಬಾಕಿದ್ದನ್ನು ವಿಚಾರ ಮಾಡಲಿಲ್ಲ. ಸುಮಾರು 1956ನೇ ಇಸವಿಯಿಂದ ಈ ಪ್ರಶ್ನೆಗಳು ಬಂದುವು. ಆದ್ದರಿಂದ ಕಾಂಗ್ರೆಸ್ ಸರ್ಕಾರ ಇದನ್ನು ಕಡೆಗಾಣಿಸಿದೆ ಎಂದು ಹೇಳತಕ್ಕ ಮಾತಿನಲ್ಲಿ ಅರ್ಥವಿಲ್ಲ. ಏನು ಈ ಒಂದು ರಾಜ್ಯ ಬಂತೋ, ದೇಶದಲ್ಲಿರತಕ್ಕ ನದಿಗಳನ್ನು ಯಾವ ರೀತಿ ಉಪಯೋಗಿಸಬೇಕು, ಕೇಂದ್ರ ಸರ್ಕಾರದಲ್ಲಿ ಮತ್ತು ರಾಜ್ಯ ಸರ್ಕಾರದಲ್ಲಿ ಈ ವಿಚಾರದಲ್ಲಿ ಸಾಕಷ್ಟು ವಿಚಾರಮಾಡಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಅಷ್ಟು ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ 1956ನೇ ಇಸವಿಯಲ್ಲಿ ಎಲ್ಲವೂ ನಡೆಯಲಿಲ್ಲ. ಈಗ ಅದಕ್ಕೆ ಒಂದು ರೂಪ ಕೊಟ್ಟಿದ್ದೇವೆ. 1947ನೇ ಇಸವಿಯಲ್ಲಿ ಕೊಡಗಿಗೆ ಸ್ವಾತಂತ್ರ್ಯ ಸಿಕ್ಕಿದಾಗ ಅಲ್ಲಿ ಒಂದು ಸರ್ಕಾರ ಏರ್ಪಾಡು ಆಯಿತು. ಆಗ ಅವರು 1947ನೇ ಇಸವಿಯಲ್ಲಿ ಹಾರಂಗಿ ನೀರಾವರಿ ಯೋಜನೆ ಮಾಡಬೇಕೆಂದು ಅಲ್ಲಿನ ಸರ್ಕಾರ ಪ್ರಯತ್ನಪಟ್ಟು ಹುದಗೂರಿನಲ್ಲಿ 150 ಅಡಿ ಎತ್ತರ ಒಂದು ಅಣೆಕಟ್ಟು, ಇನ್ನೊಂದು 150 ಅಡಿ ಎತ್ತರದ್ದು ಇನ್ನೊಂದು ಡ್ಯಾಮ್ ಕಟ್ಟಬೇಕೆಂದು ಪ್ರಯತ್ನ ಪಟ್ಟರು. ಆದರೆ ಹಣದ ಅಭಾವದಿಂದಲೋ ಅಥವಾ ಅಲ್ಲಿ ಸ್ವಲ್ಪ ವಿರೋಧ ಬಂದುದರಿಂದಲೋ ಆ ಕೆಲಸ ಆಗ ನಿಂತಿತು. ಪುನಃ ಪ್ರಾಂತ ಪುನರ್ವಿಂಗಡಣೆಯಾದಮೇಲೆ ಇದನ್ನು ತೆಗೆದುಕೊಂಡು ಯೋಚನೆ ಮಾಡಿ 165 ಅಡಿ ಎತ್ತರದಲ್ಲಿ ಹುದಗೂರು ಹತ್ತಿರ ಒಂದು ಅಣೆ ಕಟ್ಟಿದರೆ ಸುಮಾರು ಎರಡುಮುಕ್ಕಾಲು ಟಿ. ಎಂ. ಸಿ.ಯಿಂದ 55ಸಾವಿರ ಎಕರೆಗಳಷ್ಟು ಸಾಗು ಆಗುತ್ತದೆಯೆಂದು ಯೋಚನೆ ಮಾಡಿದರು. ಪುನಃ ಅದನ್ನೇ ಮತ್ತೆ ಯೋಚನೆ ಮಾಡಿ 1960ನೇ ಸೆಪ್ಟೆಂಬರ್‌ನಲ್ಲಿ ಮಾಡಿದ್ದನ್ನು ಸುಮಾರು ಹತ್ತೂವರೆ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ 190 ಅಡಿ ಎತ್ತರ ಕಟ್ಟಬೇಕೆಂದು ಒಂದು ಯೋಜನೆ ಮಾಡಿದ್ದರು. ನನಗೆ ಗೊತ್ತಿರುವಹಾಗೆ 125ಅಡಿ ಅಥವಾ 150 ಅಡಿ ಎತ್ತರವಿರಬೇಕೆಂದು ಹೇಳಿ ಕೊಡಗಿನ ಸರ್ಕಾರ ಪ್ರಯತ್ನ ಮಾಡಬೇಕೆಂದು ಮಾಡಿದರು. ಆಗ ಮೈಸೂರು ಹತ್ತಿರ ಮಾಡಿದ್ದರೆ ಆಗುತ್ತಿತ್ತು. ಇದನ್ನು ಈಗ ಯೋಚನೆಮಾಡಿ ಪ್ರಯೋಜನವಾಗುವುದಿಲ್ಲ. 1957ನೇ ಸೆಪ್ಟೆಂಬರ್ 19ರಲ್ಲಿ ಇದನ್ನು 150 ಅಡಿ, ಎತ್ತರ ಕಟ್ಟಬೇಕೆಂದು ಒಂದು ಪ್ರಯತ್ನ ನಡೆಯಿತು. ಆ ಪ್ರಯತ್ನ ನಡೆದು ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ 2 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದರು. ಆದರೆ ಇದು ಯಾವಾಗ ಮಂಜೂರು ಆಗಬೇಕು ಎಂಬುದಾಗಿ ಬಂತೋ ಆಗ ಕೊಡಗಿನ ಜನಗಳಿಗೆ ಬಹಳ ಅಸಮಧಾನವಾಯಿತು. ಆಗ ಎಷ್ಟು ಪ್ರದೇಶಗಳು ಮುಳುಗಡೆಯಾಗುತ್ತಿತ್ತೆಂದರೆ ಸುಮಾರು 1,500 ಎಕರೆ ಕಾಫಿ ತೋಟ, 1,400 ಎಕರೆ ಏಲಕ್ಕಿ 444 ಎಕರೆ ಬತ್ತದ ಜಮೀನು ಮತ್ತು ಸರ್ಕಾರದ ಜಮೀನು ಸ್ವಲ್ಪ — ಹೀಗೆ ಒಟ್ಟು ಸುಮಾರು 5 ಸಾವಿರ ಎಕರೆಯಷ್ಟು ಮುಳುಗಡೆಯಾಗುತ್ತಿತ್ತು. ಇದಾದನಂತರ 1960ನೇ ಡಿಸೆಂಬರ್‌ನಲ್ಲಿ ಕೊಡಗಿನ ಜನ ಬಹಳ ಗಲಾಟೆ ಮಾಡಿದರು. ಆಗ ನಾನೂ ಇದ್ದೆ. ಆ ಸಂದರ್ಭದಲ್ಲಿ ಒಂದು ಸಮ್ಮೇಳನ ಮಾಡಿದಾಗ ಅವರು ವಿಶೇಷವಾಗಿ ವಿರೋಧಮಾಡಿದರು. ಕಂಬದಕಡ ಮತ್ತು ಹಾರಂಗಿ ಪ್ರಾಜೆಕ್ಟುಗಳನ್ನು ಈ ರೀತಿ ಮಾಡಿದರೆ ನಮ್ಮ ಕಾಫಿ ತೋಟಗಳು ಹಾಳಾಗಿ ಹೋಗುತ್ತವೆ, ಕೊಡಗಿನ ಪರ್ವತಗಳು ಗುಡ್ಡಗಳು — ಇವುಗಳಲ್ಲಿ ಕಲ್ಲು ಹೆಚ್ಚಾಗಿಲ್ಲ, ಮಣ್ಣಿನ ಗುಡ್ಡಗಳು ಮತ್ತು ದೊಡ್ಡ ದೊಡ್ಡ ಸರೋವರಗಳು — ಇವುಗಳನ್ನು ಮಾಡಿದರೆ ಗುಡ್ಡಗಳು ಕರಗಿಹೋಗಿ ಕಾಫಿ ಬೆಳೆಯುವುದಕ್ಕೆ ಕಷ್ಟವಾಗುತ್ತದೆ, ಇದನ್ನು ಕೈಬಿಡಬೇಕೆಂದು ಬಹಳ ಚಳುವಳಿಯನ್ನು ನಡೆಸಿದರು. ಅದರಮೇಲೆ ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಇದನ್ನು ಅಲ್ಲಿ ಮಾಡುವುದು ಬೇಡ, ಬೇರೆ ಕಡೆಯಲ್ಲಿ ಮಾಡಿ ಎಂಬುದಾಗಿ ಮೈಸೂರು ಸರ್ಕಾರಕ್ಕೆ ಆದೇಶ ಕೊಟ್ಟರು. 1961ನೇ ಜೂನ್‌ನಲ್ಲಿ ಮೈಸೂರು ಸರ್ಕಾರ ಬೇರೆ ಏನಾದರೂ ಇದೆಯೋ ಏನೋ ಎಂದು ಆಲೋಚನೆ ಮಾಡಿದರು. 1961ನೇ ಜೂನಿನಲ್ಲಿ ಮೈಸೂರು ಸರ್ಕಾರ ಪುನಃ ಇದನ್ನು ಬಿಟ್ಟು ಬೇರೆ ಏನಾದರೂ ಸಾಧ್ಯವೇ ಎಂಬುದಾಗಿ ಆಲೋಚನೆ ಮಾಡಿದರು. ಇದು ಹಿಂದೆ ಆಗಿರತಕ್ಕ ಮಾತು. ಆಕ್ಷೇಪಣೆ ಮಾಡತಕ್ಕ ಸಂದರ್ಭದಲ್ಲಿ ಹಿಂದೆ ಏನೇನು ನಡೆದಿದೆ ಎಂಬುದನ್ನು ವಿಚಾರ ಮಾಡಬೇಕು. ಇನ್ನು ನೀರನ್ನು ಉಪಯೋಗ ಮಾಡುವುದರಲ್ಲಿ ಎಳ್ಳಷ್ಟೂ

ಅಭ್ಯಂತರವಿಲ್ಲ. 104 ಟಿ.ಎಂ. ಸಿ.ಯಷ್ಟು ನೀರನ್ನು ಉಪಯೋಗ ಮಾಡುವುದು ಅವಶ್ಯಕ. ಅದನ್ನು ಎಲ್ಲೆಲ್ಲಿ ಉಪಯೋಗ ಮಾಡಬೇಕು ಎಂಬುದನ್ನು ವಿಚಾರ ಮಾಡೋಣ. ಹೆಚ್ಚು ಅನುಕೂಲವಾದಂಥಾದ್ದನ್ನು ಮಾಡೋಣ. ಆ ಒಂದು ತತ್ವವನ್ನು ಒಪ್ಪಿಕೊಳ್ಳೋಣ. ಈ ದೃಷ್ಟಿಯಿಂದ ಕೊಡಗಿನಲ್ಲಿ ಒಂದು ಚಳುವಳಿ ನಡೆಯಿತು. 1961ನೇ ಜೂನಿನಲ್ಲಿ ಇದನ್ನು ಬಿಟ್ಟು ಬೇರೆ ಎಲ್ಲಾದರೂ ಮಾಡಲು ಸಾಧ್ಯವೇ ಎಂಬುದಾಗಿ ಆಲೋಚನೆ ಮಾಡಿ ಆಗ ಒಂದು ತೀರ್ಮಾನಕ್ಕೆ ಬಂದೆವು. ಹರದೂರಿನಲ್ಲಿ ಒಂದು ಸಣ್ಣ ಪಿಕಪ್ ಅಣೆ ಹಾಕಿ ಮತ್ತು ಹುದಗೂರಿನಲ್ಲಿ ಮತ್ತೊಂದು ದೊಡ್ಡ ಕಟ್ಟೆ ಹಾಕಬೇಕೆಂದು ಒಂದು ಅಂದಾಜನ್ನು ತಯಾರುಮಾಡಿದ್ದೂ ಆಯಿತು ಅದನ್ನು ಇನ್‌ವೆಸ್ಟಿಗೇಷನ್ ಮಾಡಿದಮೇಲೆ ಸರ್ಕಾರಕ್ಕೆ ಕಳುಹಿಸಿದರು.

1963ನೇ ಇಸವಿಯಲ್ಲಿ ಅದನ್ನು ಸರ್ಕಾರಕ್ಕೆ ಕಳುಹಿಸಿದ ಮೇಲೆ ಅದರ ಪ್ರಕಾರ ನಾನು ಒಪ್ಪಿಕೊಂಡೆ. 1961ನೇ ಇಸವಿಯಲ್ಲಿ ಈ ವಿಚಾರವನ್ನು ಈ ರೀತಿ ಮಾಡಬೇಕೆಂದು ಬಂದಾಗ ಕೇಂದ್ರ ಸರ್ಕಾರದವರೊಡನೆ ವಿಚಾರ ವಿನಿಮಯ ಮಾಡುವಾಗ 81 ಅಡಿ ಎತ್ತರದ ಕಟ್ಟೆಯನ್ನು ಹುದುಗೂರಿನ ಹತ್ತಿರ ಮಾಡಬೇಕು, ಅದರಲ್ಲಿ 19 ಟಿ.ಎಂ.ಸಿ. ನೀರು ನಿಲ್ಲುತ್ತದೆ. 36 ಸಾವಿರ ಎಕರೆ ಸಾಗಾಗುತ್ತದೆ ಎಂದು ಹೇಳಿದರು. ಹರದೂರಿನಲ್ಲಿ 120 ಅಡಿ ಎತ್ತರದ ಕಟ್ಟೆಯನ್ನು ಕಟ್ಟಿದರೆ 100 ಟಿ.ಎಂ.ಸಿ ನೀರು ನಿಲ್ಲುತ್ತದೆ. ಅದರಿಂದ 23 ಸಾವಿರ ಎಕರೆ ಒಂದು ಕಡೆ, ಮತ್ತೆ ಕಾವೇರಿ ನದಿಯ ದಡದಲ್ಲಿ 28 ಸಾವಿರ ಎಕರೆ ಒಂದು ಕಡೆ, ಆಮೇಲೆ 81 ಸಾವಿರ ಎಕರೆ 11 ಕಡೆ ಸಾಗು ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದರೆ ಇದರಿಂದ ಕಾಫಿ ತೋಟ ಮತ್ತು ಬತ್ತವನ್ನು ಬೆಳೆಯುವುದಕ್ಕೆ ತೊಂದರೆಯಾಗುತ್ತದೆ, ಅದನ್ನು ಉಳಿಸಬೇಕು ಎನ್ನುವ ಅಭಿಪ್ರಾಯ ಬಂತು. ಈಗಿನ ಯೋಜನೆಯ ಪ್ರಕಾರ ಕಾಫಿ ತೋಟಗಳು 53, ಹರದೂರಿನಲ್ಲಿ ಬತ್ತವನ್ನು ಬೆಳೆಯತಕ್ಕದ್ದು 816 ಎಕರೆ, ಕಾಫಿ 1315 ಎಕರೆ, ಖುಷ್ಕಿ 138 ಎಕರೆ ಒಂದನೆಯದು, ಎರಡನೆಯದು ಹುದಗೂರಿನಲ್ಲಿ ಕಾಫಿ ತೋಟಗಳು 122 ಎಕರೆ ಬತ್ತ ಬೆಳೆಯತಕ್ಕದ್ದು 133 ಎಕರೆ, ಸರ್ಕಾರದ ಜಮೀನು 458 ಎಕರೆ, ಖುಷ್ಕಿ ಜಮೀನು 267 ಎಕರೆ, ಒಟ್ಟು 980 ಎಕರೆ ಒಂದು ಐಟಮ್, 3,302 ಎಕರೆ ಒಂದು ಐಟಮ್, 1,500 ಎಕರೆ, ಒಂದು ಐಟಮ್, 1,600 ಎಕರೆ ಒಂದು ಐಟಮ್. ಕಾಫಿ ತೋಟ ಮತ್ತು ಬತ್ತ ಬೆಳೆಯುವ ಜಮೀನು ಹೋಗುವುದು ತಪ್ಪಿ ಮುಳುಗಡೆಯಾಗತಕ್ಕದ್ದು ಕಡಿಮೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ಒಪ್ಪಿಕೊಂಡಿದ್ದು. ಯಾವುದೇ ಒಳ್ಳೆಯ ಕೆಲಸವನ್ನು ಮಾಡಬೇಕೆಂದು ಹೋದರೂ ಕೆಲವರು ಅದನ್ನು ರಾಜಕೀಯ ಮಾಡಬೇಕೆಂದು ಹೊರಡುತ್ತಾರೆ. ಕಾಫಿ ತೋಟ ಯಾರಿಗೋ ಒಬ್ಬರಿಗೋ ಅಥವಾ ಇಬ್ಬರಿಗೋ ಶ್ರೀಮಂತರಿಗೆ ಸೇರಿದ್ದು ಅದನ್ನು ಉಳಿಸಬೇಕೆಂದು ಇದನ್ನು ಮಾಡಿದ್ದಾರೆ ಎನ್ನುವ ಒಂದು ಕೂಗು ಬಂದಿದೆ. ಇದು ಸರಿಯಲ್ಲ. ಯಾವುದೇ ಆಗಲೀ ಉತ್ಪತ್ತಿ ಆಗತಕ್ಕದ್ದು ಮುಳುಗಡೆ ಆಗಬಾರದು. ಹೆಚ್ಚಿಗೆ ಕಾಫಿ ಬೆಳೆಯುವುದು ಒಂದು ಲಕ್ಷ ಚಿಲ್ಲರೆ ಎಕರೆ ಇದೆ. $2\frac{1}{2}$ ಲಕ್ಷ ಎಕರೆ ಜಮೀನಿನಲ್ಲಿ ಕಾಫಿ ಆಗುವ ಅನುಕೂಲ ಇದೆ. ಅದನ್ನು ಉಪಯೋಗಿಸಿಕೊಳ್ಳತಕ್ಕದ್ದು ಅವಶ್ಯಕ. ಇವೊತ್ತು ಅದರಿಂದ 10 ಕೋಟಿ ರೂಪಾಯಿಗಳ ಫಾರಿನ್ ಎಕ್ಸ್‌ಛೇಂಜ್ ಪಡೆಯುವುದಕ್ಕೆ ಸಾಧ್ಯವಿದೆ. ಎರಡೂವರೆ ಲಕ್ಷ ಎಕರೆ ಕಾಫಿ ತೋಟ ಇದ್ದರೆ 20 ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅಂಥಾ ಪ್ರದೇಶ ಎನಿದೆಯೋ ಅದನ್ನು ಜಾಸ್ತಿ ಮಾಡೋಣ. ಆದರೆ ಆ ಪ್ರದೇಶವನ್ನು ಕಡಿಮೆ ಮಾಡುವ ರೀತಿಯಲ್ಲಿ ಹೋಗತಕ್ಕದ್ದು ಸರಿಯಲ್ಲ. ಇನ್ನು ಅಲ್ಲಿರತಕ್ಕ ವೆಟ್ ಲ್ಯಾಂಡ್ ಏನಿದೆ ಅದು ಬಡವರಿಗೆ ಸೇರಿದ್ದು. ಒಟ್ಟಿನಲ್ಲಿ ಅದು ಬಡವರಿಗೆ ಸೇರಿದ್ದು ಅಥವಾ ಶ್ರೀಮಂತರಿಗೆ ಸೇರಿದ್ದು ಎಂಬುದು ಮುಖ್ಯವಲ್ಲ. ಅದರಲ್ಲಿ ಉತ್ಪತ್ತಿ ಆಗುತ್ತದೆ ಎಂಬುದು ಮುಖ್ಯ, ಅದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಹೆಚ್ಚು ಬಡವರಿಗೆ ಅನುಕೂಲ ಮಾಡುವುದು, ಮತ್ತು ಆಹಾರವನ್ನು ಉತ್ಪತ್ತಿ ಮಾಡುವುದು ಅವಶ್ಯಕ. ಈ ಒಂದು ದೃಷ್ಟಿಯಿಂದ ಅದನ್ನು ನಾವು ಒಪ್ಪಿದ್ದು ಆಗಿದೆ. ಹುದಗೂರಿನಲ್ಲಿ ಅಣೆಕಟ್ಟು ಮಾಡಿ ಒಟ್ಟು 18 ಟಿ.ಎಂ.ಸಿ ನೀರನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಇಂಜಿನಿಯರುಗಳೂ ಹೇಳುತ್ತಾರೆ. ಅದು ಸಾಧ್ಯ ಎಂದು. ಅದು ಸಾಧ್ಯ ಆದೀತು ಎಂದು ನನಗೆ ಅನಿಸುತ್ತದೆ. ಹಾಗೆ ಆದರೆ ಸಂತೋಷ. ಅದನ್ನು ಖಂಡಿತ ಮಾಡೋಣ. ಅದು ಆಗತಕ್ಕ ಪ್ರಶ್ನೆ. ಅದೇ ರೀತಿಯಲ್ಲಿ ಹಾರಂಗಿ ಮತ್ತು ಕಂಬದಕಡ ಈಚೆಗೆ ಆದದ್ದು. 1960ನೇ ಇಸವಿಯಲ್ಲಿ ಕಂಬದಕಡ ಯೋಜನೆಯನ್ನು ಮಾಡಿದರು. ಅದರಲ್ಲಿ 103 ಅಡಿ ಎತ್ತರದ ಕಟ್ಟೆಯನ್ನು ಕಟ್ಟಿದರೆ 18 ಟಿ.ಎಂ.ಸಿ ನೀರು ನಿಲ್ಲುತ್ತದೆ 40 ಸಾವಿರ ಎಕರೆ ಭೂಮಿ ಸಾಗಾಗುತ್ತದೆ ಎಂದು ಮಾಡಿದರು. ಅದು $7\frac{1}{4}$ ಕೋಟಿ ರೂಪಾಯಿಗಳ ಎಸ್ಟಿಮೇಟ್ ಆಗುತ್ತದೆ. ಆದರಿಂದ ಮುಳುಗಡೆಯಾಗತಕ್ಕ ಜಮೀನು 1,700 ಎಕರೆ ಕಾಫಿ ತೋಟ, 3,800 ಎಕರೆ ಬತ್ತ ಬೆಳೆಯುವುದು, 2,500 ಎಕರೆ ಖುಷ್ಕಿ ಜಮೀನು, ಕಾಫಿ ಬೆಳೆಯುವುದಕ್ಕೆ ಯೋಗ್ಯವಾಗಿರತಕ್ಕ ಜಮೀನು. 7,200 ಎಕರೆ 13-14 ಸಾವಿರ ಎಕರೆ ಕಾಫಿ ಇರತಕ್ಕದ್ದು ಅಥವಾ ಕಾಫಿ ಬೆಳೆಯುವುದು ಮುಳುಗಡೆ ಆಗುವುದು. ಇದು ಮೊದಲನೇ ಯೋಜನೆ.

(ಶ್ರೀ ಎಸ್. ನಿಜಲಿಂಗಪ್ಪ)

ಕಾಫಿ ಬೆಳೆಯುತಕ್ಕದ್ದು ಜಾಸ್ತಿ ಹೋಗುತ್ತದೆ ಎಂದು ಸರ್ಕಾರದವರು ಅದನ್ನು 1960ನೇ ಇಸವಿಯಲ್ಲಿ ಪುನಃ ಬದಲಾವಣೆ ಮಾಡಿದ್ದಾರೆ. ಅಷ್ಟು ದೊಡ್ಡದು ಬೇಡ, 5 ಟಿ.ಎಂ.ಸಿ ನೀರು ನಿಲ್ಲುವಂತೆ ಇಳಿಸೋಣ ಎಂದು ಮಾಡಿದರು. ಸಬ್‌ಮರ್ಜ್ ಆಗುವುದನ್ನು 6,600 ಎಕರೆಗೆ ಇಳಿಸಿದರು. ಕಾಫಿ ಪ್ಲಾಂಟೇಷನ 250 ಎಕರೆ, ತರಿ 1,155 ಎಕರೆ, ಪ್ರೈವೇಟ್ ಲ್ಯಾಂಡ್ 436 ಎಕರೆ, ಸರ್ಕಾರಿ ಜಮೀನು ಮತ್ತು ಕಾಡು 4,754 ಎಕರೆ. ಹೀಗೆ ಒಟ್ಟು ಸಬ್‌ಮರ್ಜ್ ಆಗುವುದನ್ನು 6,600 ಎಕರೆಗೆ ಇಳಿಸಿದರು. ಅದರ ಎಸ್ಟಿಮೇಟು 2 ಕೋಟಿ ರೂಪಾಯಿಗಳು. ಅದರಿಂದ 2½ ಸಾವಿರ ಎಕರೆ ಜಮೀನು ಸಾಗಾಗಬಹುದು ಎಂದು ಇದೆ. ಕಾವೇರಿ ಛಾನಲ್‌ನಿಂದ ಬೇರೆ ತರಹ 20 ಸಾವಿರ ಎಕರೆಗೆ ನೀರು ಸಿಕ್ಕುತ್ತದೆ ಎಂದು ಪ್ಲಾನಿಂಗ್ ಕಮಿಷನ್ನಿನವರು ಕಳುಹಿಸಿದರು. ಇದನ್ನು 3ನೇ ಯೋಜನೆಯಲ್ಲಿ ಸೇರಿಸಿ ಎರಡು ಕೋಟಿ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಸೇರಿಸಿ ಕೊಟ್ಟರು. ಆದರೆ 1960ನೇ ಇಸವಿಯಲ್ಲಿ ಕಂಬದಕಡ ಮತ್ತು ಹಾರಂಗಿ ಅಣೆಕಟ್ಟಿನ ಬಗ್ಗೆ ವಿಶೇಷವಾದ ಚಳುವಳಿ ಶುರುವಾಯಿತು. ಕೊಡಗಿನಲ್ಲಿ ಅದು ಶುರುವಾದಾಗ ಈ ಗಲಾಟೆಯನ್ನು ನೋಡಿಕೊಂಡು ಕೇಂದ್ರ ಸರ್ಕಾರದವರು ಹಾರಂಗಿ ಮತ್ತು ಕಂಬದಕಡ ಅಣೆಕಟ್ಟನ್ನು ಕಟ್ಟನ್ನು ಕಟ್ಟುವುದಕ್ಕೆ ಬೇರೆ ರೀತಿಯಲ್ಲಿ ಯೋಚನೆ ಮಾಡಿರಿ ಎಂದು ಹೇಳಿದರು. ಅವರು ಹೇಳಿದ ಮಾತಿನ ಪ್ರಕಾರ ಮೈಸೂರು ಸರ್ಕಾರದವರು 1961ನೇ ಇಸವಿಯ ಜೂನ್ ತಿಂಗಳಿನಲ್ಲಿ ಅದನ್ನು ಬೇರೆ ರೂಪದಲ್ಲಿ ಮಾಡಬಹುದು, ವ್ಯತ್ಯಾಸ ಮಾಡಬಹುದು ಆಲ್ಟರ್‌ನೇಟಿವ್ ಪ್ರಪೋಜಲ್ಸ್ ಇದೆ ಎಂದು ಹೇಳಿದರು. ಅದಕ್ಕೆ ಈಗ ಅದನ್ನು ಇಂಜಿನಿಯರ್‌ಗಳು ನೋಡುತ್ತಿದ್ದಾರೆ. ಕಾವೇರಿ ನದಿಗೆ ಒಂದು ಪಿಕ್‌ಅಪ್ ಹಾಕಿದರೆ 2,500 ಎಕರೆ ಸಾಗಾಗುತ್ತದೆ. ಕಟ್ಟೆಪುರದಲ್ಲಿ ಅಣೆಕಟ್ಟು ಹಾಕಿದರೂ ಅಷ್ಟೇ ಸಾಗಾಗುತ್ತದೆ. ಇನ್ನೊಂದು ತರಹ ಯೋಜನೆಯಿಂದ ಕಾವೇರಿಯಿಂದ 20 ಸಾವಿರ ಎಕರೆ ಸಾಗಾಗಬಹುದು ಎಂದು ಅಂದಾಜು ಇದೆ. ಅದು ಸಾಧ್ಯವೇ ಹೇಗೆ ಎಂಬುದನ್ನು 1961ನೇ ಇಸವಿ ಜೂನ್ ತಿಂಗಳಿನಲ್ಲಿ ಏನು ಕೇಂದ್ರ ಸರ್ಕಾರದಿಂದ ಆದೇಶ ಬಂತೋ ಅದರ ಪ್ರಕಾರ ಮಾಡುತ್ತಿದ್ದಾರೆ. ಪರಿಸ್ಥಿತಿ ಹೀಗಿದೆ. ಬಾಕಿ ವಿಚಾರದಲ್ಲಿ ತಕರಾರು ಇಲ್ಲ. ಇದನ್ನೆಲ್ಲಾ ಸರಿಯಾಗಿ ಉಪಯೋಗಿಸಿಕೊಂಡರೆ ಈಗ ನಾವು ಏನು ತಿಳಿದುಕೊಂಡಿದ್ದೇವೋ ಅದು ಸಾಧ್ಯವಾದೀತು ಎಂದು ನನಗೆ ಅನಿಸುತ್ತದೆ. ಸುಮಾರು 30 ನಾನ್ ಷೆಡ್ಯೂಲ್ ರಿವರ್ಸ್, 70 ಷೆಡ್ಯೂಲ್ ರಿವರ್ಸ್ ನಮಗೆ ಇದೆ. ಇದರಿಂದ ನಮಗೆ ಎಷ್ಟು ಹಕ್ಕು ಇದೆಯೋ ಅದನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ನನಗನ್ನಿಸುತ್ತದೆ. ಷೆಡ್ಯೂಲ್ಡ್ ರಿವರ್ಸ್ ಹೇಮಾವತಿ, ಯಗಚಿ, ಲಕ್ಷ್ಮಣತೀರ್ಥ ಮತ್ತು ಸುವರ್ಣಾವತಿ. ಸುವರ್ಣಾವತಿ ವಿಚಾರದಲ್ಲಿ ಒಂದು ವಿಷಯವನ್ನು ಹೇಳುತ್ತೇನೆ. ನಿನ್ನೆಯ ದಿವಸ ಸರ್ಕಾರದವರು ಆಜ್ಞೆ ಮಾಡಿದ್ದಾರೆ, ಇದನ್ನು ತೆಗೆದುಕೊಳ್ಳಬೇಕೆಂದು 5 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಅಲ್ಲಿ ಕೆಲಸ ಕೂಡಲೇ ನಡೆಯುತ್ತದೆ. ನಮ್ಮ ಸ್ನೇಹಿತರೊಬ್ಬರು ಬಹಳ ಹೆಚ್ಚಿಗೆ ಹೇಳುತ್ತಿದ್ದಾರೆ, ಸುವರ್ಣಾವತಿಯ ಕೆಲಸವನ್ನು ತೆಗೆದುಕೊಳ್ಳುತ್ತಾರೆ ಎಂದು. ಅದರಿಂದ 100 ಟಿ.ಎಂ.ಸಿ. ನೀರು ಸಿಕ್ಕುತ್ತದೆ. ಇಪ್ಪತ್ತು ಸಾವಿರ ಎಕರೆ ಸಾಗು ಆಗುತ್ತದೆ ಎಂದು ಕಾಣುತ್ತದೆ. ಷೆಡ್ಯೂಲ್ಡ್ ರಿವರ್ಸ್ ಏನಿದೆ ಅದನ್ನು ಸರಿಯಾಗಿ ಉಪಯೋಗಿಸಿಕೊಂಡರೆ ಹೇಮಾವತಿ, ಕಂಬದಕಡ, ಯಗಚಿ, ಲಕ್ಷ್ಮಣತೀರ್ಥ, ಸುವರ್ಣಾವತಿ ಇವುಗಳಿಂದ 24 ಟಿ.ಎಂ.ಸಿ. ನೀರು ಸಿಕ್ಕುತ್ತದೆ ಎಂದು ಈಗ ಇರತಕ್ಕದ್ದು. ಇದಕ್ಕೆ ಇನ್ನು ಹೆಚ್ಚಿನ ರೀತಿಯಲ್ಲಿ ಜನಗಳಿಂದ ಸಹಕಾರ ಬಂದರೆ ಅದನ್ನೆಲ್ಲಾ ಸರಿಯಾಗಿ ಉಪಯೋಗಿಸಿಕೊಂಡರೆ ಮತ್ತೆ 26 ಟಿ.ಎಂ.ಸಿ. ನೀರು ಸಿಕ್ಕುತ್ತದೆ. ಎಂದರೆ ಅದರಿಂದ ಸುಮಾರು 49-50 ಟಿ.ಎಂ.ಸಿ. ವರೆಗೂ ನೀರು ಸಿಕ್ಕುತ್ತದೆ. ಅದರ ಜೊತೆಗೆ ಹಾರಂಗಿ ಮತ್ತು ತಾರಕಕಟ್ಟೆ ಹೊಳೆಯಿಂದ ಟಿ.ಎಂ.ಸಿ. 30 ನೀರು ಸಿಕ್ಕುತ್ತದೆ. ಅವುಗಳನ್ನೆಲ್ಲಾ ಉಪಯೋಗಿಸಿಕೊಂಡು ನಾವು ಕೆಲಸ ಮಾಡಬೇಕಾಗುತ್ತದೆ ಅದೂ ಕೂಡ ಸಾಧ್ಯವಾಗುತ್ತದೆ. ಅದರಲ್ಲಿ ಶೇಕಡಾ 60 ಭಾಗವನ್ನು ಉಪಯೋಗಿಸಬೇಕೆಂದಿದ್ದೇವೆ. ಕಪಿನಿ ನದಿಯಲ್ಲಿ 19 ಟಿ.ಎಂ.ಸಿ. ನೀರನ್ನೂ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

19 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಂಡರೂ ಇನ್ನೂ ಸುಮಾರು 3—4 ಟಿ.ಎಂ.ಸಿ. ಉಪಯೋಗಿಸಿಕೊಳ್ಳಬಹುದು ಎನ್ನುವುದು ಇದೆ. ಅದನ್ನು ಕಂಡುಹಿಡಿಯಬೇಕಾದ್ದು ಈಗಿರತಕ್ಕ ಪರಿಸ್ಥಿತಿ. ಆದುದರಿಂದ ಯಾರಾದರೂ ಏನೂ ಮಾಡಿಲ್ಲ ಸರ್ಕಾರ ಎಂದು ಹೇಳಿದರೆ, 1956ನೇ ಇಸವಿಯಿಂದ ಈ ವಿಚಾರದಲ್ಲಿ ಮೈಸೂರು ಸರ್ಕಾರ ಮತ್ತು ಕಾಂಗ್ರೆಸ್ ಸರ್ಕಾರ ಒಂದೇ ಸಮನೆ ಪ್ರಯತ್ನ ಮಾಡುತ್ತಿದೆ, ನಿರ್ಲಕ್ಷ ಮಾಡಿದ್ದಾರೆ ಎಂದು ಹೇಳತಕ್ಕ ವಾದವೇನಿದೆ ಅದರಲ್ಲಿ ತಿರುಳಿಲ್ಲ ಎಂದು ಹೇಳುತ್ತೇನೆ.

5-30 P.M.

ಮತ್ತೊಬ್ಬ ದೊಡ್ಡ ಮನುಷ್ಯರು ಹೇಳಿದರು ಕೃಷ್ಣ ಯೋಜನೆಯನ್ನು ಮಾಗುವುದಕ್ಕೆ ಏನು ಆಸಕ್ತಿ ಇದೆಯೋ ಅಷ್ಟೇ ತೀವ್ರವಾಗಿ ಇದರ ಕೆಲಸ ಮಾಡುತ್ತ ಇಲ್ಲ ಎಂದು ಆಕ್ಷೇಪಣೆ ಮಾಡಿದರು. ಆ ಆಕ್ಷೇಪಣೆ ಸರಿಯಲ್ಲ. ಎಷ್ಟರಮಟ್ಟಿಗೆ ಪ್ರಯತ್ನ ಮಾಡಬೇಕೋ ಅಷ್ಟರಮಟ್ಟಿಗೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದನ್ನು ಕೈ ಬಿಡುವುದಿಲ್ಲ. ನಾನೂ ಮಾನ್ಯ ಸದಸ್ಯರಿಗೆ, ಅದರಲ್ಲಿಯೂ ಶ್ರೀ ದೇವೇಗೌಡರಿಗೆ ಹೇಳತಕ್ಕದ್ದು ಕಾವೇರಿ ನದಿಯಲ್ಲಿ ನಮಗೆ ಎಷ್ಟು ಹಕ್ಕು ಇದೆಯೋ ಅಷ್ಟನ್ನೂ ಎಂದರೆ 134 ಟಿ.ಎಂ.ಸಿ. ನೀರನ್ನೂ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾದ ಮಟ್ಟಿಗೂ ಸರ್ವ ಪ್ರಯತ್ನಗಳನ್ನೂ ಮಾಡುತ್ತೇವೆ. ಆದರೆ ಮಾನ್ಯ ಸದಸ್ಯರು ಇದನ್ನೆಲ್ಲಾ ನಾಲ್ಕನೆಯ ಯೋಜನೆಯಲ್ಲಿಯೇ ಮಾಡಬೇಕು ಎಂದು ತಂದಿರತಕ್ಕ ನಿರ್ಣಯವನ್ನು ಒಪ್ಪಿಕೊಂಡಮೇಲೆ ನಮ್ಮ ಮೇಲೆ ಸ್ವಲ್ಪ ಭಾರ ಬೀಳುತ್ತದೆ. ಆದಷ್ಟು ತೀವ್ರವಾಗಿ ಇದನ್ನು ಮಾಡುತ್ತೇವೆ. ಬಹುಶಃ ಇನ್ನು ಹತ್ತು ವರ್ಷದೊಳಗೆ ಮಾಡಬಹುದು ಎಂದು ನಮ್ಮ ನಂಬಿಕೆ. ಅದರಂತೆಯೆ ಕೃಷ್ಣ ನೀರನ್ನು ಹೇಗೆ ಉಪಯೋಗಿಸುತ್ತೇವೆ ಎಂದು ಹೇಳುವುದಿಲ್ಲ. ಕೃಷ್ಣ ನೀರಿನಲ್ಲಿ ನಮಗೆ ಎಷ್ಟು ಸಿಕ್ಕುತ್ತದೆ ಎಂದು ಹೇಳಿದ್ದಾರೆ. ಒಟ್ಟು 1,800 ಟಿ.ಎಂ.ಸಿ. ನೀರಿನಲ್ಲಿ ನಮಗೆ 600 ಟಿ.ಎಂ.ಸಿ ನೀರು ಸಿಕ್ಕೇ ಸಿಕ್ಕುತ್ತದೆ. ಇನ್ನೂ ಹೆಚಾಗಿ ಸಿಕ್ಕುತ್ತದೆ, 800 ಟಿ. ಎಂ. ಸಿ. ಸಿಕ್ಕುತ್ತದೆ ಎಂದು ಹೇಳಬಹುದು. ಅವರು ಒಪ್ಪಿಕೊಂಡಿರುವ ಪ್ರಕಾರ ಎಷ್ಟು ನೀರು ಸಿಕ್ಕುತ್ತದೆಯೋ ಅದನ್ನು ಉಪಯೋಗಿಸಿಕೊಳ್ಳದೆ ಹಾಗೆಯೇ ಬಿಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಅದನ್ನು ಉಪಯೋಗಿಸಿಕೊಳ್ಳಲು ಏನೇನು ಅವಶ್ಯಕವೋ ಅದನ್ನೆಲ್ಲಾ ಮಾಡುತ್ತಿದ್ದೇವೆ. ನಾರಾಯಣಪುರ ಅಥವ ಆಲಮಟ್ಟಿ ಎನ್ನುವುದರಲ್ಲಿ ಮೊದಲು ಯಾವುದನ್ನು ಹೇಳಿದರೂ ತಪ್ಪು ತಿಳಿದುಕೊಳ್ಳತಕ್ಕ ಜನರಿದ್ದಾರೆ. ಇಂಥ ಸಣ್ಣ ಸಣ್ಣ ವಿಚಾರಗಳಿಗೆ ಹೋಗಬೇಡಿ, ಅದರಿಂದ ಪ್ರಯೋಜನವಾಗುವುದಿಲ್ಲ. ನಾನು ಪುನಃ ಒತ್ತಿ ಹೇಳುತ್ತೇನೆ, ಆಲಮಟ್ಟಿ ಮತ್ತು ನಾರಾಯಣಪುರ ಎರಡನ್ನೂ ಒಟ್ಟಿಗೆ ತೆಗೆದುಕೊಂಡೇ ತೀರಬೇಕು ಎಂದು ಒತ್ತಾಯಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದವರು ಕಿವುಡರಲ್ಲ, ಕುರುಡರಲ್ಲ, ದಡ್ಡರಲ್ಲ ಎಂದು ತಿಳಿದುಕೊಂಡಿದ್ದೇನೆ. ನಮ್ಮ ಒತ್ತಾಯದಂತೆ ಮಾಡುತ್ತಾರೆ ಎಂಬ ಸಂಪೂರ್ಣ ನಂಬಿಕೆ ನನಗಿದೆ. ಅದೇ ರೀತಿಯಲ್ಲಿ ಕಾವೇರಿ ನೀರನ್ನೂ ಉಪಯೋಗಿಸಿಕೊಳ್ಳುತ್ತೇವೆ. ನಮಗೆ ನೀರು ಬೇಕಾದಷ್ಟು ಇದೆ. ನಮಗೆ ಇರತಕ್ಕ ಒಂದು ಕೊರತೆ ಎಂದರೆ ಹಣದ ಕೊರತೆ. ಈ ಹಣದ ಕೊರತೆಯನ್ನು ನೀಗಬೇಕು. ನಾನು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ನೀವು ಡಿಫಿಸಿಟ್ ಫೈನಾನ್ಸಿಂಗ್ ಮಾಡುತ್ತೀರೋ ಏನು ಮಾಡುತ್ತೀರೋ ನಮಗೆ ಸಹಾಯ ಬೇಕು; ಜನರು ಕಷ್ಟದಲ್ಲಿದ್ದಾರೆ ಎಂದು ಒತ್ತಾಯ ಮಾಡುತ್ತಿದ್ದೇನೆ. ಶ್ರೀಮಾನ್ ಅಣ್ಣಾರಾಯರು ಜನಸಂಖ್ಯೆ ವಿಶೇಷವಾಗಿ ಬೆಳೆಯುತ್ತಿದೆ ಎಂದು ಹೇಳಿದರು. ಅದು ಸರಿಯಾಗಿಯೇ ಬೆಳೆಯುತ್ತಿದೆ. ಆ ರೀತಿ ಬೆಳೆಯುವುದನ್ನು ತಡೆಯುವುದಕ್ಕೆ ನಾವು ಸಿದ್ಧರಾಗಿರಬೇಕು. ಸರ್ಕಾರ ಮಾಡಬೇಕು ಎಂದರೆ ಸಾಧ್ಯವಿಲ್ಲ. ಜನರು ಮುಂದೆ ಬರಬೇಕು. ಒಂದು ಸಂತೋಷದ ಮಾತು ಎಂದರೆ ಹಳ್ಳಿಗಳಲ್ಲಿ ಹೆಣ್ಣುಮಕ್ಕಳು, ನಮಗೆ ಇನ್ನು ಮಕ್ಕಳು ಸಾಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಇದು ಒಂದು ಸಂತೋಷದ ಮಾತು. ನಮ್ಮ ಜಿಲ್ಲೆಯ ಒಂದು ವಿಚಾರ ಹೇಳಬೇಕು ಎಂದರೆ ಬಿಳಿಚೋಡು ಗ್ರಾಮದ ಒಬ್ಬ ಹೆಣ್ಣು ಮಗಳು ತನ್ನ ಗಂಡನನ್ನು ಒತ್ತಾಯ ಮಾಡಿ ಡಾಕ್ಟರ ಹತ್ತಿರ ಕರೆದುಕೊಂಡು ಹೋಗಿ ಆಪರೇಷನ್ ಮಾಡಿಸಿದಳು. ಇದು ನನಗೆ ಗೊತ್ತಿದೆ. ಇದು ಬಹಳ ಸಂತೋಷಪಡತಕ್ಕ ವಿಚಾರ. ಸಾಕಷ್ಟು ಪ್ರಚಾರ ನಡೆದರೆ ಅದರಿಂದ ಅನುಕೂಲವಾಗುತ್ತದೆ. ಪೂರ್ತಿ ಕಡಮೆ ಮಾಡುವುದಕ್ಕೆ ಸಾಧ್ಯವಿಲ್ಲದೆ ಇದ್ದರೂ ಸ್ವಲ್ಪ ಹದ್ದುಬಸ್ತಿನಲ್ಲಿ ಇಡುವುದಕ್ಕೆ ಸಾಧ್ಯವಿದೆ. ಅದನ್ನು ಪ್ರಯತ್ನ ಮಾಡೋಣ.

ನಾವು ಹೆಚ್ಚಿಗೆ ಆಹಾರವನ್ನು ಬೆಳೆಯಬೇಕು. ಆಹಾರದ ಜೊತೆಗೆ ಇನ್ನೂ ಅನೇಕ ರೀತಿಯ ಅನುಕೂಲಗಳು ಆಗಬೇಕಾದರೆ ಕೈಗಾರಿಗೆ ಜಾಸ್ತಿ ಆಗಬೇಕಾಗಿದೆ. ಇವತ್ತು ನಮ್ಮ ಕೈಗಾರಿಕೆಗಳಲ್ಲಿ ರೈತನನ್ನು ಅನುಸರಿಸಿಕೊಂಡಿರತಕ್ಕ ಕೈಗಾರಿಕೆಗಳು ಶೇಕಡ 60 ರಷ್ಟು ಇವೆ. ರೈತನು ಆಹಾರವನ್ನು ಬೆಳೆಯಬೇಕು, ಈ ಕೈಗಾರಿಕೆಗಳಿಗೆ ಬುನಾದಿಯಾಗಿರತಕ್ಕ ಕಚ್ಚಾಮಾಲು ಏನಿದೆ ಅದನ್ನು ಕೂಡ ಬೆಳೆಯಬೇಕಾದ್ದು ಅವಶ್ಯಕ. ಕಬ್ಬು, ಹತ್ತಿ, ಸಣಬು, ಕಾಫಿ, ಟೀ, ಏಲಕ್ಕಿ, ಮೆಣಸಿನಕಾಯಿ, ಆಲೂಗಡ್ಡೆ, ಈರುಳ್ಳಿ ಈ ರೀತಿ ಇನ್ನೂ ಅನೇಕ ರೀತಿಯ ಪದಾರ್ಥಗಳನ್ನು ಬೆಳೆಯುವುದಕ್ಕೆ ನಾವು ಸಹಾಯ ಮಾಡಬೇಕಾಗಿದೆ. ಇದಕ್ಕೆ ನೀರಿನ ಪೂರೈಕೆ ಹೆಚ್ಚಾಗಿ ಆಗಬೇಕು. ಬಾಕಿ ವಿಚಾರ ಮೈನರ್ ಇರಿಗೇಷನ್ ವಗೈರೆ ಈಗ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ತತ್ತ್ವ ನೀರನ್ನು ಉಪಯೋಗಿಸಿಕೊಳ್ಳಬೇಕು, ಅದನ್ನು ರೈತನಿಗೆ ಒದಗಿಸಬೇಕು. ಹಾಗೆ ಮಾಡಬೇಕಾದರೆ ದೊಡ್ಡ ದೊಡ್ಡ ಯೋಜನೆಗಳೇನಿದೆ, ನೀರಾವರಿ ಯೋಜನೆಗಳು ಅವುಗಳಿಗೆ ಹಣ ಹೆಚ್ಚಾಗಿ ಬೇಕಾ

(ಶ್ರೀ ಎಸ್. ನಿಜಲಿಂಗಪ್ಪ)

ಗುತ್ತದೆ. ಈಗ ನಮ್ಮ ಮುಂದೆ 20—22 ಯೋಜನೆಗಳಿವೆ, ಅವುಗಳನ್ನೆಲ್ಲ ಮಾಡಿದರೆ ನಮಗೆ ಬೇಕಾಗಿರುವುದು ಸುಮಾರು 50 ಕೋಟಿ ರೂಪಾಯಿಗಳು. ಅದನ್ನು ದೊಡ್ಡದು ಎಂದು ಹೇಳು ವುದಕ್ಕಾಗುವುದಿಲ್ಲ. ಒಂದೆರಡು ಮಾತ್ರ ಹತ್ತು ಕೋಟಿಗಿಂತ ಹೆಚ್ಚಾಗಬಹುದು. ಹತ್ತು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಖರ್ಚಾಗತಕ್ಕ ಯೋಜನೆಗಳನ್ನು ಕೇಂದ್ರ ಸರ್ಕಾರ ವಹಿಸಿಕೊಳ್ಳಲಿ ಎಂದು ನಾನು ಆ ಹೊತ್ತು ಬೇಡಿಕೆಗಳ ಮೇಲೆ ಚರ್ಚೆಗೆ ಉತ್ತರ ಕೊಡುತ್ತ ಹೇಳಿದ್ದೇನೆ. ನಾವು ಅವರನ್ನು ಬೇಡುವುದಕ್ಕೆ ಹೋಗುವುದಿಲ್ಲ, ದಾನಧರ್ಮವಾಗಿ ಕೇಳುವುದಿಲ್ಲ. ನೀವು ನಮಗೆ ಸಹಾಯ ಕೊಡಿ, ಪ್ರಾಜೆಕ್ಟನ್ನು ಕಟ್ಟುವುದಕ್ಕೆ 10-15 ವರ್ಷ ಹಿಡಿಯುವುದಾದರೆ ನಾವು ನಮ್ಮ ಇಂಜಿನಿಯರುಗಳನ್ನು ಮತ್ತು ಜನಗಳನ್ನು ಉಪಯೋಗಿಸಿಕೊಂಡು ಹತ್ತು ವರ್ಷದಲ್ಲಿ ಆಗುವುದನ್ನು 5 ವರ್ಷದಲ್ಲಿಯೇ ಮಾಡುತ್ತೇವೆ. ಐದು ವರ್ಷದಲ್ಲಿ ಕಟ್ಟಿದರೆ ಏಳೆಂಟು ವರ್ಷಗಳಲ್ಲಿ ಆದರಿಂದ ಉತ್ಪಾದನೆಯನ್ನು ಹೊಂದುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಿಮ್ಮ ಹಣ ಮತ್ತು ಬಡ್ಡಿಯನ್ನು ಆಗ ಯೋಗ್ಯ ಕಂತುಗಳಲ್ಲಿ ತೀರಿಸುತ್ತೇವೆ ಎಂದು ಕೇಳಿದ್ದೇವೆ. ನಾನು ಸ್ವಲ್ಪ ಆಶಾವಾದಿ. ಇದನ್ನು ಅವರು ಒಪ್ಪಿಕೊಂಡಾರು ಎಂದು ನನಗನ್ನಿಸುತ್ತದೆ. ಅವರು ಆ ರೀತಿ ಒಪ್ಪಿಕೊಳ್ಳುವು ದಾದರೆ ಅಪ್ಪರ್ ಕೃಷ್ಣ ಮತ್ತು ಕಾವೇರಿ ನದಿಯ ಒಂದೆರಡು ಯೋಜನೆಗಳು ಇವನ್ನೆಲ್ಲ ತೆಗೆದು ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಒಂದು ರೀತಿಯಲ್ಲಿ ನಾವೂ ಪ್ರಯತ್ನ ಮಾಡತಕ್ಕದ್ದು ಅವಶ್ಯಕ.

ಮತ್ತೊಂದು ಜನಗಳಿಂದಲೂ ಸಹಾಯ ಬೇಕಾಗುತ್ತದೆ. ಅದು ಕಾಂಟ್ರಿಬ್ಯೂಷನ್ ಒಂದು ಎಕರೆಗೆ 200 ರೂಪಾಯಿ ಅಥವಾ 250 ರೂಪಾಯಿ ಇಷ್ಟನ್ನು ಯಾರ ಜಮೀನುಗಳಿಗೆ ನೀರಾವರಿ ಕಾಮಗಾರಿಗಳಿಂದ ಅನುಕೂಲವಾಗುತ್ತದೆಯೋ ಅವರು ಕೊಡುವಂತೆ ಪ್ರಯತ್ನ ಪಟ್ಟರೆ ಅದು ಸಿಕ್ಕೀತು ಎಂದು ನನಗೆ ಅನ್ನಿಸುತ್ತದೆ. ಹಾಗೆ ಮಂಡ್ಯ ಜಿಲ್ಲೆಯಲ್ಲಿ ಒಂದು ಕಡೆ ಸುಮಾರು ಆರೇಳು ಲಕ್ಷ ರೂಪಾಯಿ ಒಂದು ಕೆಲಸಕ್ಕೆ ಖರ್ಚಾದೀತು ಎಂದು ಹೇಳಿದಾಗ ಆ ಊರಿನ ಜನಗಳು ಸಕ್ಕರೆ ಕಂಪೆನಿಯಲ್ಲಿ ಹೋಗಿ ಅವರ ಮುಖಾಂತರ ಆರು ಲಕ್ಷ ಚಿಲ್ಲರೆ ರೂಪಾಯಿಗಳನ್ನು ತಂದು ಕೊಟ್ಟು ನಮಗೆ ಕಟ್ಟಿಕೊಡಿ ಎಂದು ಹೇಳುತ್ತಿದ್ದಾರೆ. ಈ ರೀತಿ ಸಹಾಯ ಮಾಡುವುದು ಜನಗಳಿಗೆ ಸಾಧ್ಯ ವಾದೀತು ಎಂದು ಕಾಣುತ್ತದೆ.

ಇದಲ್ಲದೆ ಈಗ ಬೆಟರ್‌ಮೆಂಟ್ ಲೆವಿ ಆಕ್ಟ್ ಆಗಿದೆ. ಅದರ ಜನಗಳು ಆ ಹಣವನ್ನು ಕೊಡು ತ್ತಿಲ್ಲ. ಅದನ್ನು ಕೊಡಬೇಕಾದ್ದು ಅತ್ಯಾವಶ್ಯಕ. ಹಾಗೆಯೇ ವಾಟರ್ ರೇಟ್ ಸಹ ಕೆಲವು ಕಡೆ ಕಡಿಮೆ ಕೊಡುತ್ತಿದ್ದಾರೆ, ಕೆಲವು ಕಡೆ ಜಾಸ್ತಿ ಕೊಡುತ್ತಿದ್ದಾರೆ. ಅದರ ಬಗ್ಗೆ ಕೂಡ ಒಂದು ತೀರ್ಮಾನವಾಗಿ ಆಕ್ಟ್ ಆಗಿದೆ. ಹೀಗೆ ಜನಗಳಿಂದ ಬರತಕ್ಕ ಹಣ ಸರಾಗವಾಗಿ ಬಂದರೆ ಬೇರೆ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿಯಲ್ಲಿ ಜನರ ಸಹಕಾರ ಬೇಕಾಗುತ್ತದೆ. ಹೀಗೆ ಪ್ರಯತ್ನಗಳನ್ನು ಮಾಡುವುದಾದರೆ ಕಾವೇರಿ ನೀರನ್ನು ಉಪಯೋಗಿಸಿ ಕೊಳ್ಳಬಹುದಾಗಿದೆ.

ಆದುದರಿಂದ ಸರಕಾರದ ಪರವಾಗಿ ನಾನು ಹೇಳುವುದೇನೆಂದರೆ, ಕಾವೇರಿ ನದಿಯ ಪ್ರದೇಶ ದಲ್ಲಿ ಎಷ್ಟು ಉತ್ಪತ್ತಿಯಾಗಬೇಕೋ ಅಷ್ಟು ಆಗುತ್ತಿಲ್ಲವೆಂದು ಅನೇಕ ವರ್ಷಗಳಿಂದ ಕೇಳುತ್ತಿದ್ದಾರೆ; ವಿಜ್ಞಾನ ದೃಷ್ಟಿಯಿಂದ ನೋಡಿ ಜನರು ಎಷ್ಟು ಪ್ರಯತ್ನ ಪಟ್ಟರೂ ಕಾರ್ಯರೂಪಕ್ಕೆ ಬಂದಿಲ್ಲ. ಆದರೆ ಈಗ್ಗೆ ಐದಾರು ವರ್ಷಗಳಿಂದ ಪ್ರಯತ್ನ ನಡೆದಿದೆ, ಇನ್ನು ಮುಂದೆಯೂ ನಡೆಯುತ್ತದೆ. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕು. ಸಾಧ್ಯವಾದರೆ, ಮಾನ್ಯ ಸದಸ್ಯರೆಲ್ಲರೂ ಸಹಕಾರ ನೀಡಬೇಕು, ನಾನು ಒತ್ತಾಯ ಮಾಡುವುದಿಲ್ಲ. ಅವರು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಮುಂಚಿತವಾಗಿ ರೈತರಿಂದ ಕಾಂಟ್ರಿಬ್ಯೂಷನ್ ಕೊಡಿಸಬೇಕು. ಅದರ ಜೊತೆಗೆ ನಾವು ಸಾಲ ತರುತ್ತೇವೆ, ಕೇಂದ್ರ ಸರಕಾರದ ವರು ಕೊಡುತ್ತಾರೆ, ಜನರೂ ಸಹಾಯ ಮಾಡಿದರೆ ಸಾಧ್ಯವೆಂದು ಕಾಣುತ್ತದೆ. ಜಲಾಶಯಗಳನ್ನು ಕಟ್ಟತಕ್ಕ ಸಂದರ್ಭದಲ್ಲಿ ಕೆಲವು ಜಮೀನುಗಳು ಮುಳುಗಡೆಯಾಗುತ್ತವೆ, ಆಗ ನಮ್ಮೊಡನೆ ಸಹಕರಿಸ ಬೇಕು. ಜಲಾಶಯಗಳನ್ನು ಕಟ್ಟುವಾಗ ಜನರಿಗೆ ತೊಂದರೆಯಾಗುತ್ತದೆ, ಆ ಜನರಿಗೆ ಪುನರ್ವಸತಿ ಕಲ್ಪಿಸುವುದರಲ್ಲಿ ಬೇಗ ಕಾರ್ಯಕ್ರಮ ತೆಗೆದುಕೊಳ್ಳದೆ ನಿಧಾನವಾಡುತ್ತಾರೆಂದು ನೆನ್ನೆ ಯಾರೋ ಆಕ್ಷೇಪಣೆ ಮಾಡಿದರು. ಕೆಲವು ಸಂದರ್ಭಗಳಲ್ಲಿ ನಿಧಾನವಾಗಿದೆ, ಇಲ್ಲವೆಂದು ಹೇಳುವುದಿಲ್ಲ. ಹಿರೇಭಾಸ್ಕರ್ ಸಂಬಂಧದಲ್ಲಿ ಸುಮಾರು ಹತ್ತು ಹದಿನೈದು ವರ್ಷಗಳಿಂದ ಆ ಜನರಿಗೆ ಪರಿಹಾರ ದೊರಕಿಲ್ಲ. ಅದಕ್ಕೂ ಮುಖ್ಯವಾಗಿ ಗಮನ ಕೊಡಬೇಕು. ಯಾವ ಜನರು ಅವರು ಹುಟ್ಟಿ ಬೆಳೆದು ತಮ್ಮ ಭೂಮಿ ಎಂದು ಅಲ್ಲಿ ದೇವಸ್ಥಾನ ಇತ್ಯಾದಿಗಳನ್ನು ಕಟ್ಟಿಕೊಂಡು ಅನೇಕ ವರ್ಷಗಳು ವಾಸ

ಮಾಡಿರುತ್ತಾರೋ ಅಂತಹ ಜಾಗವನ್ನು ಅವರು ಬಿಟ್ಟು ಹೋಗಬೇಕೆಂದರೆ ಬಹಳ ತೊಂದರೆಯಾಗುತ್ತದೆ. ದೊಡ್ಡದು ಅಥವಾ ಸಣ್ಣ ಯಾವ ಯೋಜನೆಯಾಗಲೀ ಅದರಲ್ಲಿ ಮುಳುಗಡೆಯಾಗುವ ಜಮೀನಿನ ಜನರನ್ನು ಅಲ್ಲಿ ಬಿಟ್ಟು ದೂರಕ್ಕೆ ಕಳುಹಿಸುವಾಗ ಅವರಿಗೆ ಹೆಚ್ಚಿನ ರೀತಿಯ ಅನುಕೂಲ ಕಲ್ಪಿಸಿಕೊಟ್ಟು ಪುನರ್ವ್ಯವಸ್ಥೆ ಮಾಡಬೇಕಾದುದು ಅವಶ್ಯಕ. ನಮ್ಮ ಯೋಜನೆಗಳ ಮುಖ್ಯ ಅಂಗವಾಗಿ ಪುನರ್ವಸತಿ ಕಾರ್ಯವನ್ನು ತೆಗೆದುಕೊಳ್ಳುತ್ತೇವೆ. ಈಗ ಶರಾವತಿಯಲ್ಲಿ ಜನರಿಗೆ ಅನುಕೂಲ ಮಾಡುತ್ತಿದ್ದೇವೆ; ಪೂರ್ತಿಯಾಗಿ ಮಾಡಿದ್ದೇವೆಂದು ಹೇಳುವುದಿಲ್ಲ; ಮಾಡುತ್ತೇವೆ. ಹೆಚ್ಚು ಹಣ ಖರ್ಚಾದರೂ ಚಿಂತೆಯಿಲ್ಲ, ಜನರು ಸುಖವಾಗಿರಬೇಕು. ಆದುದರಿಂದ ಪುನರ್ವ್ಯವಸ್ಥೆ ಕಾರ್ಯವನ್ನು ಜಾಗ್ರತೆ ಮಾಡುತ್ತೇವೆ. ಕಾವೇರಿ ನೀರನ್ನು ಉಪಯೋಗ ಮಾಡುವುದರಲ್ಲಿ ಮಾನ್ಯ ಸದಸ್ಯರಿಗೆ ಎಷ್ಟು ಅಭಿಮಾನ ಮತ್ತು ಆಸಕ್ತಿ ಇದೆಯೋ ಸರಕಾರಕ್ಕೂ ಅಷ್ಟೇ ಇದೆ. ಇದರಲ್ಲಿ ಅನುಮಾನವಿಲ್ಲ. ಈ ಬಗ್ಗೆ ಅಗತ್ಯವಾದ ಕೆಲಸ ಮಾಡುತ್ತೇವೆಂದು ಸರಕಾರದ ಪರವಾಗಿ ಆಶ್ವಾಸನೆ ಕೊಡುತ್ತೇನೆ. ಈ ದೃಷ್ಟಿಯಿಂದ ಈಗ ಸಭೆಯ ಮುಂದೆ ಬಂದಿರುವ ರೂಪದಲ್ಲಿ ಈ ನಿರ್ಣಯವನ್ನು ನಾವು ಒಪ್ಪದಿದ್ದರೂ ಮಾನ್ಯ ಸದಸ್ಯರು ನನ್ನ ಆಶ್ವಾಸನೆಯ ಮೇಲೆ ಇದನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ. ಈ ಸಂಬಂಧವಾಗಿ ಎಲ್ಲ ಸದಸ್ಯರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತುಮಕೂರು ಜಿಲ್ಲೆಗೂ ಅನುಕೂಲವಾಗುವಂತೆ ಹೇಮಾವತಿ ಯೋಜನೆಯ ಕೆಲಸವನ್ನು ಜಾಗ್ರತೆಯಾಗಿ ತೆಗೆದುಕೊಂಡರೆ ನಾವೂ ಕೂಡ ಜನರಿಂದ ಕಾಂಟ್ರಿಬ್ಯೂಷನ್ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ನಾನು ಈ ಖಾಸಗಿ ನಿರ್ಣಯವನ್ನು ತಂದ ಉದ್ದೇಶವಾದರೂ ಇಷ್ಟೆ: ಸ್ವಾತಂತ್ರ್ಯ ಬಂದನಂತರ 17 ವರ್ಷಗಳಲ್ಲಿ ಕಾವೇರಿ ನೀರು ನಮಗೆ ದೊರಕಿರುವುದನ್ನು ಸರಕಾರ ಉಪಯೋಗ ಮಾಡುವ ಬಗ್ಗೆ ಹೆಚ್ಚಿನ ಆಸಕ್ತಿಯಿಂದ ವರ್ತಿಸಿಲ್ಲ ಎನ್ನುವ ಶಂಕೆಯಿಂದ ಈ ನಿರ್ಣಯವನ್ನು ಮಂಡಿಸಬೇಕಾದ ಪರಿಸ್ಥಿತಿ ಬಂತು. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಸರಕಾರದ ಪರವಾಗಿ ಆಶ್ವಾಸನೆ ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಅವರನ್ನು ವೈಯಕ್ತಿಕವಾಗಿ ಅಭಿನಂದಿಸುತ್ತೇನೆ. ಈ ನಿರ್ಣಯವನ್ನು ಮಂಡಿಸತಕ್ಕ ಕಾಲದಲ್ಲಿ ನಾವು ಈ ದಿವಸ ಅಧಿಕಾರದಲ್ಲಿರುವ ಮಂತ್ರಿ ಮಂಡಲವನ್ನಾಗಲೀ ಹಿಂದಿದ್ದ ಮಂತ್ರಿಮಂಡಲವನ್ನಾಗಲೀ ಟೀಕೆ ಮಾಡುವ ಉದ್ದೇಶವಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದೇನೆ. ಏಕೆಂದರೆ ಇದು ಒಬ್ಬರ ಮೇಲೆ ಬಿದ್ದ ಜವಾಬ್ದಾರಿಯಲ್ಲ. ಹಿಂದಿದ್ದ ಮೂರುನಾಲ್ಕು ಮಂತ್ರಿಮಂಡಲಗಳ ಜವಾಬ್ದಾರಿ, ಆದರೆ ಅವರು ಮಾಡಿಲ್ಲವೆಂದು ಸ್ಪಷ್ಟಪಡಿಸಿದ್ದೇನೆ. 1 56 ರಿಂದೀಚೆಗೆ, ಪ್ರಾಂತ್ಯಪುನರ್ವಿಂಗಡಣೆಯಾದಮೇಲೆ, 1960 ರಿಂದೀಚೆಗೆ ಹೆಚ್ಚಿನ ಆಸಕ್ತಿವಹಿಸಿದ್ದೇನೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಸಂದರ್ಭದಲ್ಲಿ ಅವರಲ್ಲಿ ಅರಿಕೆ ಮಾಡುವುದಿಷ್ಟೆ: ಇನ್ನು ಕೇವಲ ಹತ್ತು ವರ್ಷಗಳ ಕಾಲಾವಕಾಶವಿರುವಾಗ ಕಾವೇರಿಪಾತ್ರದ ಈ ಯೋಜನೆಗಳನ್ನು ಕಾರ್ಯಗತ ಮಾಡಲು ನಮಗೆ ಟೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕಿಲ್ಲ. ಜೊತೆಗೆ ಸಾಕಷ್ಟು ಹಣವೂ ಇಲ್ಲವೆಂಬುದು ಎದ್ದು ಕಾಣುತ್ತದೆ. ಆದುದರಿಂದ ಒಂದು ಶಂಕೆಯಿಂದ ಈ ನಿರ್ಣಯವನ್ನು ನಾನು ತರಬೇಕಾಯಿತು. ಅಡ್ಮಿನಿಸ್ಟ್ರೇಟಿವ್ ಮಂಜೂರಾತಿ ದೊರಕಿದ್ದರೂ ಟೆಕ್ನಿಕಲ್ ಮಂಜೂರಾತಿ ದೊರಕಿಲ್ಲ. ಈ ಸಭೆಯಲ್ಲಿ ಮಾತನಾಡಿದ ಇಪ್ಪತ್ತು ಸದಸ್ಯರೂ ಇದಕ್ಕೆ ಬೆಂಬಲವನ್ನು ಸೂಚಿಸಿದ್ದಾರೆ. ಇದರಿಂದ ಈ ಕಾವೇರಿಯ ನೀರನ್ನು ಉಪಯೋಗ ಮಾಡುವ ಬಗ್ಗೆ ಎಲ್ಲ ಸದಸ್ಯರಿಗೂ ಉತ್ಸಾಹವಿದೆ ಎನ್ನುವುದು ಗೊತ್ತಾಗುತ್ತದೆ.

ಅಧ್ಯಕ್ಷರು.—ಉಪಯೋಗದ ವಿಚಾರದಲ್ಲಿ ಸರಕಾರದವರು ಬೇರೆ ಅಭಿಪ್ರಾಯವೇನನ್ನೂ ಹೇಳಿಲ್ಲ, ಸಂಪೂರ್ಣವಾಗಿ ಉಪಯೋಗವಾಗಬೇಕೆಂದು ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಹೌದು, ನಮಗೆ ಬೆಂಬಲ ಕೊಡುವುದರಲ್ಲಿ ಅವರು ಹಿಂದೆ ಹೋಗಿಲ್ಲ. ಉಪಯೋಗ ಮಾಡಿಕೊಳ್ಳುವುದರಲ್ಲಿ ತಮ್ಮ ಆಸಕ್ತಿ ಏನಿದೆಯೋ ಅದನ್ನು ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ.

ಮುಂಗಡವಾಗಿ ಕಾಂಟ್ರಿಬ್ಯೂಷನ್ ಕೊಡುವುದರಲ್ಲಿ ಮಾನ್ಯ ಸದಸ್ಯರು ಸಹಕಾರ ಕೊಡಬೇಕೆಂದು ಹೇಳಿದರು. ಈ ವಿಷಯವಾಗಿ ಕೆಲವರು ಒಂದು ಅಂಶವನ್ನು ಹೇಳಿದರು. ಮಂಡ್ಯ ಜಿಲ್ಲೆಯಲ್ಲಿ ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ. ಆದರಿಂದ ಸರಕಾರಕ್ಕೆ ಮುಂಗಡವಾಗಿ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಹಿಂದೆ ಹೋಗಿಲ್ಲ. ಆದರೆ ಈ ಯೋಜನೆಗಳ ನೀರಿನಿಂದ ಲಾಭ ಪಡೆಯತಕ್ಕ ಜನರ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ಒಂದು ವೇಳೆ ಮುಂಗಡ ಕಾಂಟ್ರಿಬ್ಯೂಷನ್ ಕೊಡಬೇಕೆಂಬ ಅಭಿಪ್ರಾಯವಿದ್ದರೂ ಕೂಡ ಚಾನಲ್ ಅಲೈನ್‌ಮೆಂಟ್ ಎಲ್ಲಿ ಹೋಗುತ್ತದೆ ಎನ್ನುವುದು ಕೂಡ ನಮ್ಮಲ್ಲಿಲ್ಲ. ಹಾರಂಗಿ, ಕಂಬದಕಡ, ಹೇಮಾವತಿ ಯಾವುದರಲ್ಲಿಯೂ ಇಲ್ಲ. ಸರಕಾರದ

(ಶ್ರೀ ಎಚ್. ಡಿ. ದೇವೇಗೌಡ)

ಯಾವ ಯೋಜನೆಯಲ್ಲಿಯೂ ಇಲ್ಲ. ಸರಕಾರ ಈ ಹೊತ್ತು ಅಂದಾಜನ್ನು ತಯಾರು ಮಾಡಿಲ್ಲ ಎನ್ನುವುದರ ಬಗ್ಗೆ ಹೇಳಬೇಕಾಗಿದೆ. ಯಾರು ಮುಂಗಡವಾಗಿ ಕಾಂಟ್ರಿಬ್ಯೂಷನ್ ಕೊಟ್ಟರೂ ತಮಗೆ ಉಪಯೋಗ ದೊರಕುತ್ತದೆಯೇ ಎನ್ನುವ ಸಂದೇಹವಿದೆ. ಆದುದರಿಂದ ಯಾವ ರೈತರೂ ಕೊಡುವುದಕ್ಕೆ ಮುಂದೆ ಬರುವುದಿಲ್ಲ.

ಸ್ವಾಮಿ, ಕೊನೆಯದಾಗಿ ಒಂದು ಮಾತು ಹೇಳಲು ಇಷ್ಟ ಪಡುತ್ತೇನೆ. ಹಾರಂಗಿ ಯೋಜನೆ ಬಗ್ಗೆ ಅದರಲ್ಲಿ ರಾಜಕೀಯ ಇದೆ ಎಂದು ಸೂಚನೆ ಮಾಡಿದ್ದಾರೆ. ರಾಜಕೀಯ ಹಾಗು ಪಕ್ಷ ಪಂಗಡಗಳ ಬಗ್ಗೆ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. 20 ಜನ ಸದಸ್ಯರು ಒಂದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹರದೂರ ಯೋಜನೆ ಅಂದಾಜನ್ನು ಸರಕಾರ ಪುನರ್ವಿಮರ್ಶೆ ಮಾಡಿಲ್ಲ ಎಂದು ಸೂಚಿಸಿದ್ದಾರೆ. ಬಡ್ಜೆಟ್ ಭಾಷಣ ಮಾಡುವಾಗ್ಗೆ ಶ್ರೀ ದೇವಯ್ಯನವರು ಸಹ ಹೇಳಿದ್ದಾರೆ. 120 ಅಡಿ ಎತ್ತರ ಕಟ್ಟೆ ಕಟ್ಟಿದರೆ ನಮ್ಮದು ಏನೂ ಅಡ್ಡಿ ಇರಲ್ಲಾ ಎಂದು ಹೇಳಿದ್ದಾರೆ. ಹಂತ ಹಂತದಲ್ಲಿ ಇದನ್ನು ಮಾಡಬೇಕೆಂದು ತಿಳಿಸಿದ್ದಾರೆ. ಇದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಇನ್ನೂ ಸಿಕ್ಕಿಲ್ಲ. ಷೆಡ್ಯೂಲ್ ಹಾಗು ನಾನ್-ಷೆಡ್ಯೂಲ್ಡ್ ವರ್ಕ್ಸ್ ಇರುವಾಗ್ಗೆ ಟೆಕ್ನಿಕಲ್ ಕ್ಲಿಯರೆನ್ಸ್ ದೊರೆಯದೇ ಇರುವುದರಿಂದ 120 ಅಡಿ ಕಟ್ಟೆ ಕಟ್ಟುವುದಕ್ಕೆ ಸಹ ಅನುಕೂಲವಾಗುವುದಿಲ್ಲ. ಸದಸ್ಯರ ಅಭಿಪ್ರಾಯದ ಪ್ರಕಾರ ಇದನ್ನು ಪುನರ್ವಿಮರ್ಶೆ ಮಾಡಿ 120 ಅಡಿ ಎತ್ತರ ಕಟ್ಟೆಯನ್ನು ಹರದೂರು ಹತ್ತಿರ ಕಟ್ಟುವ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ

ಇನ್ನು ಹೇಮಾವತಿ ಯೋಜನೆ ಬಗ್ಗೆ ಹೇಳಿದ್ದಾರೆ. ಪುನರ್ವಿಮರ್ಶೆ ಮಾಡುವ ಬಗ್ಗೆ ಸರಕಾರ ಪೂರ್ಣ ಜವಾಬ್ದಾರಿ ವಹಿಸಬೇಕು. ಮೊದಲನೇ ಹಂತಕ್ಕೆ ನಾವು ಅಡ್ಡಿ ಬರುವುದಿಲ್ಲ. ಶ್ರೀಮಾನ್ ತಿಮ್ಮಪ್ಪಗೌಡರವರು ಆ ಕ್ಷೇತ್ರದ ಸದಸ್ಯರು ಇದನ್ನು ತಿಳಿಸಿದ್ದಾರೆ. ಪುನರ್ವಿಮರ್ಶೆ ಸರಿಯಾಗಿ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಸಹ ಆಶ್ವಾಸನೆ ಕೊಟ್ಟಿದ್ದಾರೆ. ಸರಿಯಾಗಿ ನಡೆಸುತ್ತೇವೆಂದು ಹೇಳಿದ್ದಾರೆ. ಅನಾದರ ಮಾಡುವುದಿಲ್ಲ ಎಂದು ತಿಳಿಸಿದ್ದಾರೆ. ಆದುದರಿಂದ ಹೇಮಾವತಿ ಯೋಜನೆಯನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡಬೇಕು ಮತ್ತು ಇದಕ್ಕೆ ತಾಂತ್ರಿಕ ಅನುಮತಿ ಪಡೆಯಬೇಕು ಹಾಗು ಈ ಸಭೆಯಲ್ಲಿ ಸರಕಾರ ಆಶ್ವಾಸನೆ ಕೊಟ್ಟಂತೆ ಕಾರ್ಯಗತ ಮಾಡಲು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಕೊನೆಯದಾಗಿ ಹೇಳುವುದು ಅಂದರೆ ಮಾನ್ಯ ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಆದುದರಿಂದ ನಾನು ನಿರ್ಣಯವನ್ನು ವಾಪಸ್ ತೆಗೆಗುಕೊಳ್ಳುವುದಕ್ಕೆ ಈ ಸಭೆಯ ಅನುಮತಿ ಪಡೆಯುವುದಕ್ಕೆ ಮುಂಚೆ ನಾನು ಅವರಿಗೆ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೇ. ಈ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಎಲ್ಲರ ಬೆಂಬಲ ಇದೆ. ಸಭೆಯ ಬೆಂಬಲ ಇದೆ. ಕರ್ನಾಟಕದ ಮುಖಂಡರಾಗಿರುವುದರಿಂದ ಕರ್ನಾಟಕದ ಬೆಂಬಲ ಅವರಿಗೆ ಇದೆ. ಕರ್ನಾಟಕದ ಜನರ ಹಿತ ರಕ್ಷಣೆ ಮಾಡುವಾಗ್ಗೆ ಯಾವದೊಂದು ಭಾಗಕ್ಕೆ ಅನ್ಯಾಯವಾಗದಂತೆ ನೋಡಿಕೊಳ್ಳತಕ್ಕಂಥ ಆಶ್ವಾಸನೆ ಕೊಟ್ಟಿದ್ದಾರೆ. ಕೃಷ್ಣಾ ನದಿ ಯೋಜನೆ ಬಗ್ಗೆ ಟೀಕೆ ಮಾಡುವುದಕ್ಕೆ ನಾನು ಹೋಗುವುದಿಲ್ಲ ಕರ್ನಾಟಕದ 19 ಜಿಲ್ಲೆಗಳ ಜನತೆಗೆ ಯಾವ ದ್ರೋಹ ಅನ್ಯಾಯವಾಗುವುದಿಲ್ಲ ಎಂದು ಕೊಟ್ಟಿರುವ ಆಶ್ವಾಸನೆ ಉಳಿಸಿಕೊಳ್ಳಲು ಸಾಧಿಸುತ್ತಾರೆ ಎಂದು ನಾನು ನಂಬಿದ್ದೇನೆ. ಸರಕಾರ ಕೊಟ್ಟಿರುವ ಆಶ್ವಾಸನೆ ಪಾಲಿಸಬೇಕು ಎಂದು ಮತ್ತೊಮ್ಮೆ ಪ್ರಾರ್ಥನೆ ಮಾಡಿ ಈ ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

The Resolution was, by leave of the House, withdrawn.

Mr. SPEAKER.—The House will now adjourn to meet at 8-30 A.M. tomorrow.

The House adjourned at Fifty-five Minutes past Five of the Clock to meet again at Thirty Minutes past Eight of the Clock on Friday, the 3rd April 1964.